ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 25

ಜೂನ್ 22, 2008

ಕನ್ನಡ ವಾರಪತ್ರಿಕೆ

www.janashakthi.org

ರೂ. 5/-




ಬಿಜೆಪಿ ಆಡಳಿತ : ರೈತರೇ ಮೊದಲ ಬಲಿ !

ಹೊಸಕೋಟೆ : ಬಹುರಾಷ್ಟ್ರೀಯ ಕಂಪನಿಯ ದಬ್ಬಾಳಿಕೆ



ರಸಗೊಬ್ಬರ ಸಮಸ್ಯೆ ಯಾರು ಹೊಣೆ ?




ಅಮೆರಿಕಾದ ಕೃಪೆಗೆ ಪ್ರಧಾನಿ ಕಾತುರವೇಕೆ ?

ಜಾಹೀರಾತುಗಳು ಮತ್ತು ಅಸಭ್ಯತೆಯೂ

ಸುದ್ದಿಬಿಂಬ

‘ಕಾಂಗ್ರೆಸ್, ಬಿಜೆಪಿ ಶ್ರೀಮಂತ ಪರ’

ಗೋವಿಂದಚಾರ್ಯ, ಆರ್.ಎಸ್.ಎಸ್. ಮುಖಂಡ



ಬಿಜೆಪಿ ಮತ್ತು ಕಾಂಗ್ರೆಸ್ ಜೊತೆ ಸೇರಿ ಸರಕಾರ ರಚಿಸಬೇಕೆಂದು ಆರ್‌ಎಸ್‌ಎಸ್‌ನ ಹಿರಿಯ ನಾಯಕರಾದ ಎಂಜಿ ವೈದ್ಯ ಸಲಹೆ ನೀಡಿದ್ದರು. ಇದರ ಬಗ್ಗೆ ಆರ್‌ಎಸ್‌ಎಸ್‌ನಲ್ಲಿ ಆಂತರಿಕ ಚರ್ಚೆ ನಡೆದಿದೆಯಾ?

ಯಾವುದೇ ಆಂತರಿಕ ಚರ್ಚೆ ನಡೆದಿಲ್ಲ. ಇಂತಹ ಸಲಹೆಗಳನ್ನು ಹಿಂದೆ ಕೂಡ ನೀಡಲಾಗಿತ್ತು. ಇದರ ಬಗ್ಗೆ ಕೆಲಸ ಮಾಡಲು ಬಿಜೆಪಿ ಮುಕ್ತವಾಗಿದೆ ಮತ್ತು ಆರ್‌ಎಸ್‌ಎಸ್ ಇದನ್ನು ವಿರೋಧಿಸುವುದಿಲ್ಲ. ಇದಕ್ಕೆ ಮೊದಲು ಅಡ್ವಾಣಿ ಅವರು ಕೂಡ ಇದೇ ಸಲಹೆಯನ್ನು ನೀಡಿದ್ದರು. ಸೋನಿಯಾ ಗಾಂಧಿ ಮನೆಗೆ ಅಡ್ವಾಣಿ ಭೇಟಿ ನೀಡಿರುವುದು ಯಾಕೆ? ಅವರು ತನ್ನ ಪುಸ್ತಕದ ಒಂದು ಪ್ರತಿಯನ್ನು ನೀಡಲು ತೆರಳಿದ್ದರು. ಇದು ಅದರ ಸೂಚನೆಯಾಗಿತ್ತು. ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ ಚುನಾವಣೆ ಬಳಿಕ ಸಹಕಾರದ ಸರಕಾರ ಅನಿವಾರ್ಯವಾಗುತ್ತದೆ. ಬಿಜೆಪಿ ಮತ್ತು ಕಾಂಗ್ರೆಸ್ ಹೊಂದಾಣಿಕೆ ಮಾಡಿದರೆ 250ಕ್ಕಿಂತ ಹೆಚ್ಚಿನ ಸೀಟುಗಳನ್ನು ಪಡೆಯಬಹುದು.

ಬಿಜೆಪಿ ಮತ್ತು ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಳ್ಳುವುದು ಹೇಗೆ? ತತ್ವ ಮತ್ತು ಸಿದ್ಧಾಂತಗಳಲ್ಲಿ ಎರಡೂ ಭಿನ್ನವಾಗಿದೆಯಲ್ಲವೇ?

ಎರಡೂ ಛತ್ರಿ ಪಕ್ಷಗಳು, ಎರಡರಲ್ಲಿ ಕೂಡ ಸ್ವದೇಶಿ ಹಾಗೂ ವಿದೇಶಿ ಅಂಶಗಳಿವೆ. ಎರಡೂ ಪಕ್ಷಗಳು ಅಮೇರಿಕಾಕ್ಕೆ ದಾಸನಾಗಿವೆ. ಬಿಜೆಪಿ ಮತ್ತು ಕಾಂಗ್ರೆಸ್ ಶ್ರೀಮಂತ ಮತ್ತು ಅಲ್ಪಸಂಖ್ಯಾತರ ಪರವಾಗಿದೆ. ಇದರಿಂದ ತತ್ವದಲ್ಲಿ ಯಾವುದೇ ಭಿನ್ನಾಭಿಪ್ರಾಯ ಬರಲು ಸಾಧ್ಯವಿಲ್ಲ.

ಎರಡು ಪ್ರಮುಖ ಪಕ್ಷಗಳಲ್ಲಿ ಈಗ ಹೆಚ್ಚಿನ ಭಿನ್ನತೆಯಿಲ್ಲವೆಂದು ನೀವು ಹೇಳುತ್ತಿದ್ದೀರಾ?

ಸ್ವಲ್ಪಮಟ್ಟಿನ ಭಿನ್ನತೆ ಮಾತ್ರ. ಬಿಜೆಪಿಯನ್ನು ಹಿಂದೂ ಕೋಮುವಾದಿ ಪಕ್ಷವೆಂದು ಕಾಂಗ್ರೆಸ್ ಕರೆಯಬಹುದು. ಆದರೆ ಇದು ಕೇವಲ ಮುಸ್ಲಿಮರ ಮತಗಳನ್ನು ಪಡೆಯಲು ಮಾತ್ರ ಇದು ಏಕೈಕ ತಡೆ. ಒಂದು ಸಲ ಚುನಾವಣೆ ಮುಗಿದರೆ ಈ ವಿಷಯಗಳು ಕಡೆಗಣಿಸಲ್ಪಡುತ್ತದೆ.

ಇದು ಗಂಭೀರ ಚಿಂತನೆಯಾ ಅಥವಾ ಕೇವಲ ಒಂದು ಸಲಹೆಯಾ?

ಈ ಸಲಹೆ ಇದಕ್ಕೆ ಮೊದಲು ಕೂಡ ಚರ್ಚೆಗೆ ಒಳಗಾಗಿತ್ತು. ಆರ್‌ಎಸ್‌ಎಸ್‌ನ್ನು ಪರಿಗಣಿಸಿದರೆ, ಬಿಜೆಪಿಯಿಂದ ಅದು ದೂರ ಉಳಿಯಲಿದೆ.

ರಾಷ್ಟ್ರೀಯ ಸಹಕಾರ ಸರಕಾರಕ್ಕೆ ಆರ್‌ಎಸ್‌ಎಸ್ ವಿರೋಧವಿದೆಯಾ?

ಇಲ್ಲ, ಇದಕ್ಕೆ ಯಾವುದೇ ವಿರೋಧವಿಲ್ಲ. ಆಗ ಆರ್‌ಎಸ್‌ಎಸ್ ನಿಟ್ಟುಸಿರು ಬಿಡಲಿದೆ. ಯಾಕೆಂದರೆ ಆಗ ಆರ್‌ಎಸ್‌ಎಸ್‌ನ್ನು ಟೀಕಿಸುವವರು ಇರುವುದಿಲ್ಲ.

ವೈದ್ಯ ಅವರ ಲೇಖನವನ್ನು ನೋಡಿ ಇಂತಹ ಯಾವುದೇ ಸಾಧ್ಯತೆಗಳಿಲ್ಲವೆಂದು ಬಿಜೆಪಿ ಅಧ್ಯಕ್ಷ ರಾಜ್‌ನಾಥ್ ಸಿಂಗ್ ಹೇಳಿದ್ದಾರೆ?

ಇದು ಕೇವಲ ಚುನಾವಣಾ ಪ್ರಚಾರದ ಅಸ್ತ್ರ. ಬೇರೇನೂ ಅಲ್ಲ. ಚುನಾವಣೆ ಬಳಿಕ ಇಂತಹ ಪರಿಸ್ಥಿತಿ ಬಂದರೆ ರಾಜಕೀಯ ಶಕ್ತಿ ಮೂಲಕ ಭಿನ್ನಾಭಿಪ್ರಾಯ ದೂರ ಮಾಡಲಾಗುತ್ತದೆ.

ಅಣು ಒಪ್ಪಂದಕ್ಕೆ ಒಪ್ಪಿಗೆ ಸೂಚಿಸಿ ಬಿಜೆಪಿ ತನ್ನ ಆರಂಭವನ್ನು ಮಾಡಬೇಕೆ?

ನಾನು ಅಣು ಒಪ್ಪಂದವನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಆರ್‌ಎಸ್‌ಎಸ್ ನಿಲುವೇನು?

ಆರ್‌ಎಸ್‌ಎಸ್ ಇದರ ಬಗ್ಗೆ ಯೋಚಿಸಿಲ್ಲ. ಬಿಜೆಪಿಯಲ್ಲಿ ಇದರ ಬಗ್ಗೆ ಭಿನ್ನಾಭಿಪ್ರಾಯವಿದೆ. ತತ್ವಕ್ಕಾಗಿ ಅಲ್ಲ. ಚುನಾವಣಾ ಲಾಭಕ್ಕಾಗಿ. ಯಾವ ನಿಲುವನ್ನು ತೆಗೆದುಕೊಳ್ಳಬೇಕೆಂದು ಅದಕ್ಕೆ ತಿಳಿದಿಲ್ಲ. ಯಶವಂತ್ ಸಿನ್ಹಾ ಒಂದು, ಬ್ರಿಜೇಶ್ ಮಿಶ್ರಾ ಮತ್ತೊಂದು, ಜಸ್ವಂತ್ ಸಿಂಗ್ ಮತ್ತು ಅಡ್ವಾಣಿ ವಿವಿಧ ನಿಲುವನ್ನು ಹೊಂದಿದ್ದಾರೆ.

ಬಿಜೆಪಿ ಮತ್ತು ಕಾಂಗ್ರೆಸ್ ಆರ್ಥಿಕ ಹಾಗೂ ವಿದೇಶಿ ನೀತಿಗಳಲ್ಲಿನ ಭಿನ್ನತೆಯನ್ನು ನಿವಾರಿಸಬಹುದೆಂದು ನೀವು ಭಾವಿಸಿದ್ದೀರಾ?

ಆರ್ಥಿಕ ನೀತಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಿರಬಾರದು. ಎರಡು ಪಕ್ಷಗಳು ಅಮೇರಿಕಾ ಮತ್ತು ಶ್ರೀಮಂತರ ಪರವಾಗಿವೆ. ಇದು ಹೊಂದಾಣಿಕೆಯ ಒಂದು ಅಂಗ.

ಆರ್‌ಎಸ್‌ಎಸ್ ಇಂತಹ ಹೊಂದಾಣಿಕೆಗೆ ಒಪ್ಪಿಕೊಳ್ಳಲು ಕಾರಣವೇನು? ಈ ಬದಲಾವಣೆ ಯಾಕೆ?

ಈ ಸಲಹೆಯನ್ನು ಹಿಂದೆಯೇ ನೀಡಲಾಗಿತ್ತು. ನಾನಾಜಿ ದೇಶ್‌ಮುಖ್ ಇದನ್ನು ಬೆಂಬಲಿಸಿದ್ದರು. ಅಟಲ್ ಬಿಹಾರಿ ವಾಜಪೇಯಿ ಕೂಡ ತನಗೆ ಹೊಂದಿಕೊಳ್ಳುತ್ತದೆಯೆಂದಾಗ ಇದನ್ನು ಬೆಂಬಲಿಸಿದ್ದರು. ರಾಜಕೀಯ ಬದಲಾಗಿದೆ. ಬದಲಾವಣೆಗೆ ಈ ಸಲಹೆ ಆರಂಭ

- ಇದು ‘ಕರಾವಣಿ ಅಲೆ’ಯಲ್ಲಿ ಕಂಡ ತುಣುಕು

ಇದ್ದದ್ದು ಇದ್ದಾಂಗ...

ಅವಕಾಶವಾದಿತನ

“ಪುಣೆ ನಗರಪಾಲಿಕೆ ಚುನಾವಣೆಯಲ್ಲಿ ಶಿವಸೇನೆಯೊಂದಿಗೆ ಕೈ ಜೋಡಿಸಿದ ಎನ್.ಸಿ.ಪಿ ಅಧಿಕಾರದ ಗದ್ದುಗೆ ಏರಿದೆ. ರಾಜ್ಯ ಹಾಗೂ ಕೇಂದ್ರದಲ್ಲಿ ನಮ್ಮೊಡನೆ ಅಧಿಕಾರ ಹಂಚಿಕೊಂಡಿರುವ ಪಕ್ಷವೊಂದು ಕೇವಲ ಅಧಿಕಾರದಾಸೆಗಾಗಿ ಕೋಮುವಾದಿ ಪಕ್ಷದೊಂದಿಗೆ ಕೈ ಜೋಡಿಸಿರುವುದು ಅವಕಾಶವಾದಿ ರಾಜಕಾರಣದ ಪರಾಕಾಷ್ಠೆ. ಮುಂದಿನ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಬೇಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ”.

- ಪ್ರಭಾರಾವ್ , ಮಹಾರಾಷ್ಟ್ರದ ಕಾಂಗ್ರೆಸ್ ಅಧ್ಯಕ್ಷೆ

★

ಅಪಾಯಕಾರಿ ಅಸಹನೆ

“ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಧಾಳಿಗಳು ದೇಶದಲ್ಲಿ ಹೆಚ್ಚುತ್ತಿವೆ. ಇಂಥ ಘಟನೆಗಳು ರಾಜಕೀಯವಾಗಿ ಪ್ರಬಲವಾಗಿರುವವರಿಂದಲೇ ನಡೆಯುತ್ತಿರುವುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒದಗಿರುವ ಗಂಡಾಂತರ. ‘‘ಲೋಕಸತ್ತಾ’ ಮರಾಠಿ ದಿನಪತ್ರಿಕೆಯ ಸಂಪಾದಕ ಕುಮಾರ್ ಕೇತ್ಕರ್ ಅವರ ಮನೆಯ ಮೇಲೆ ಎನ್‌ಸಿಪಿಯೊಂದಿಗೆ ಸಂಬಂಧ ಪಡೆದಿರುವ ‘ಶಿವಸಂಗ್ರಾಮ್’ ಸಂಘಟನೆಯ ಕಾರ್ಯಕರ್ತರು ಇತ್ತೀಚೆಗೆ ನಡೆಸಿದ ಧಾಳಿ ಇದಕ್ಕೊಂದು ನಿದರ್ಶನ. ಮಹಾರಾಷ್ಟ್ರ ಸರಕಾರ ಅರಬ್ಬೀ ಸಮುದ್ರ ತೀರದ ಮರೀನ್ ಡ್ರೈವ್ ಬಳಿ 200 ಕೋಟಿ ರೂ. ವೆಚ್ಚದಲ್ಲಿ ಶಿವಾಜಿ ಪ್ರತಿಮೆಯನ್ನು ಸ್ಥಾಪಿಸಲು ನಿರ್ಧರಿಸಿದೆ. ಈ ನಿರ್ಧಾರವನ್ನು ವಿರೋಧಿಸಿ ಕೇತ್ಕರ್ ಅವರು ತಮ್ಮ ಪತ್ರಿಕೆಯಲ್ಲಿ ಸಂಪಾದಕೀಯವೊಂದನ್ನು ಬರೆದಿದ್ದರು. ಮಕ್ಕಳಲ್ಲಿ ಅಪೌಷ್ಟಿಕತೆ, ರೈತರ ಆತ್ಮಹತ್ಯೆಯಂತಹ ಸಮಸ್ಯೆಗಳನ್ನು ಮಹಾರಾಷ್ಟ್ರ ಎದುರಿಸುತ್ತಿರುವಾಗ ಪ್ರತಿಮೆ ಸ್ಥಾಪನೆ ನಿರ್ಧಾರ ಎಷ್ಟರಮಟ್ಟಿಗೆ ಸರಿ ಎಂದು ಕೇತ್ಕರ್ ತಮ್ಮ ಸಂಪಾದಕೀಯದಲ್ಲಿ ಪ್ರಶ್ನಿಸಿದ್ದಾರೆ. ಇದನ್ನು ಸಹಿಸದ ಶಿವ ಸಂಗ್ರಾಮ್ ಕಾರ್ಯಕರ್ತರು ಕೇತ್ಕರ್ ಅವರ ನಿವಾಸದ ಮೇಲೆ ಧಾಳಿ ನಡೆಸಿದ್ದಾರೆ....”

- ‘ಪ್ರಜಾವಾಣಿ’ ಜೂನ್ 10ರ ಸಂಪಾದಕೀಯದಲ್ಲಿ

★

ಹರಕು

“ಚುಟುಕು ಸಾಹಿತ್ಯ ಪ್ರಬೇಧ ತನ್ನ ಮೊದಲಿನ ನಿರ್ಧಿಷ್ಟತೆಯನ್ನು ಕಳೆದುಕೊಂಡಿದ್ದು, ಇಂದಿನ ಚುಟುಕುಗಳು ಹರಕು ಪದ್ಯಗಳಂತೆ ರಚನೆಯಾಗುತ್ತಿವೆ”.

- ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ

★

ಯಾಕೆ ಪ್ರತಿಭಟನೆ?

“ಬಿತ್ತನೆ ಬೀಜ ಮತ್ತು ರಸಗೊಬ್ಬರದ ಸಮಸ್ಯೆ ಎಲ್ಲಿಯೂ ಇಲ್ಲ. ಅದರ ಸಮಗ್ರ ಪೂರೈಕೆ ಆಗಿದೆ. ಆದರೆ ರೈತರು ಯಾವ ಉದ್ದೇಶದಿಂದ ಈ ಪ್ರತಿಭಟನೆ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಪ್ರತಿಭಟನೆ ರಾಜಕೀಯ ಪ್ರೇರಿತ. ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸಲು ಕೆಲವು ಶಕ್ತಿಗಳು ಪ್ರಯತ್ನಿಸುತ್ತಿವೆ.”

- ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ

★

ಬಿಜೆಪಿ ಎಂದರೆ

“ಕಳೆದ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಬಹುಮತ ಸಾಧಿಸಲು ಜನಾರ್ಧನ ರೆಡ್ಡಿಯವರು ಗಣಿಗಾರಿಕೆಯಿಂದ ಬಂದ ಹಣವನ್ನು ಬೀದಿ ಬೀದಿಗಳಲ್ಲಿ ನೀರಿನಂತೆ ಖರ್ಚು ಮಾಡಿ ರಾಜ್ಯದ ಮತದಾರರನ್ನು ಕೊಂಡುಕೊಂಡು ಅವರನ್ನು ತಮ್ಮ ಭ್ರಷ್ಟಾಚಾರದಲ್ಲಿ ಪಾಲುದಾರರನ್ನಾಗಿಸಿದ್ದಾರೆ. ಹೀಗಾಗಿ ಬಿಜೆಪಿಯು ಕರ್ನಾಟಕದ ಪಾಲಿಗೆ ‘ಬಳ್ಳಾರಿ ಜನಾರ್ಧನ ರೆಡ್ಡಿ ಪಕ್ಷ’ವಾಗಿ ಮಾರ್ಪಾಟಾಗಿದೆ.

- ಪ್ರೊ. ರವಿವರ್ಮಕುಮಾರ್, ಖ್ಯಾತ ನ್ಯಾಯವಾದಿಗಳು

★

ಬೇಜವಾಬ್ದಾರಿತನ

“ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ರಸಗೊಬ್ಬರ ಸಮಸ್ಯೆಯನ್ನು ಲಘುವಾಗಿ ಪರಿಗಣಿಸಿದ್ದಾರೆ. ಹಾಗಾಗಿಯೇ ಗೊಬ್ಬರದ ಸಮಸ್ಯೆಯಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಗೊಬ್ಬರ ನೀಡುವಂತೆ ಒತ್ತಡ ಹೇರುವ ಬದಲು ಗೊಬ್ಬರದ ಕೊರತೆ ಇಲ್ಲ ಎಂದು ಹೇಳಿಕೆ ನೀಡಿರುವುದು ಮುಖ್ಯಮಂತ್ರಿಗಳ ಬೇಜವಾಬ್ದಾರಿತನ”.

- ಹೆಚ್.ಡಿ.ರೇವಣ್ಣ

★

ವಿರೋಧಿಸಿದ್ದರು

“ದೇಶ ವಿಭಜನೆಯಿಂದಾಗುವ ದುಷ್ಪರಿಣಾಮದ ಬಗ್ಗೆ ಅರಿವು ಹೊಂದಿದ್ದ ಬಹುತೇಕ ಮುಸ್ಲಿಮರು ಭಾರತ, ಪಾಕ್, ವಿಭಜನೆಯನ್ನು ವಿರೋಧಿಸಿದ್ದರು. ಜಿನ್ನಾ ಒಡ್ಡಿದ ಅಧಿಕಾರದ ಆಮಿಷ ತಿರಸ್ಕರಿಸಿದ ನನ್ನ ತಂದೆಯೇ ಇದಕ್ಕೆ ನಿದರ್ಶನ”.

- ಹಮೀದ್ ಅನ್ಸಾರಿ ಉಪ ರಾಷ್ಟ್ರಪತಿ

ಚುಚ್ಚುಮದ್ದು

ಭಗವಂತನ ಅವತಾರ!

■ “ದೇಶೋದ್ಧಾರಕ್ಕೆ ಶ್ರಮಿಸುತ್ತಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘವು ಭಗವಂತನ ಮತ್ತೊಂದು ಅವತಾರವಾಗಿದೆ”.

- ರಾಘವೇಶ್ವರ ಭಾರತಿ ಸ್ವಾಮಿ ನಾಗಪುರದ ಆರೆಸ್ಸೆಸ್ ಶಿಕ್ಷಾವರ್ಗದ ಸಮಾರೋಪದಲ್ಲಿ

➲ ಆರೆಸ್ಸೆಸ್ ಭಗವಂತನ ಅವತಾರವಾದರೆ, ಮೋದಿಯದು ಯಾವ ಅವತಾರ?

★

ಯಾರ ಅಜೆಂಡಾ? ಎಂಥಾ ಮೀಸಲಾತಿ

■ “ಜಾತಿ ಆಧಾರಿತ ಮಿಸಲಾತಿ ನೀಡುವ ಬದಲು ಬಡತನ ಆಧಾರಿತ ಮೀಸಲಾತಿ ವ್ಯವಸ್ಥೆ ಜಾರಿಗೊಳ್ಳುವ ಅಗತ್ಯವಿದೆ.

- ಮಮ್ತಾಜ್ ಅಲಿಖಾನ್ ವಕ್ಫ್ ಖಾತೆ ಸಚಿವ

➲ ಅಂದರೆ ಆರೆಸ್ಸೆಸ್ ಅಜೆಂಡಾ ಜಾರಿ ಯತ್ನ ಶುರು ಅಂತ ತಿಳ್ಕೋಬಹುದಾ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ರೈತರ ಕೊಂದು ಕೂಗುತ್ತಿರುವ ಕ್ರೂರಿಗಳು

ಈ ಸರ್ಕಾರ ತಾನೇನೆಂಬುದನ್ನು ಲೋಕಕ್ಕೆ ಸಾರಿಬಿಟ್ಟಿದೆ. ಕೃಷಿಯೊಂದೇ ಜೀವನಾಧಾರವಾಗಿ ನಂಬಿರುವ, ನಾಡಿಗೆ ಅನ್ನ ನೀಡುವ 'ನೇಗಿಲಯೋಗಿ'ಯನ್ನು ಯಡಿಯೂರಪ್ಪ ಸರ್ಕಾರ ಬಲಿ ತೆಗೆದುಕೊಂಡು ಈ ಮಣ್ಣಿಗೆ ರಕ್ತ ತರ್ಪಣ ಮಾಡಿಬಿಟ್ಟಿದೆ. ಸಮರ್ಪಕ ಬೀಜ, ಗೊಬ್ಬರ ಕೊಡಿಯೆಂದು ಹತ್ತಾರು ದಿನಗಳಿಂದಲೂ ಪರಿತಪಿಸಿ ಸುಸ್ತಾಗಿ ಹೋಗಿದ್ದ ರೈತರ ಬೆನ್ನ ಮೇಲೆ ಪೋಲಿಸರ ಲಾಠಿ ಯೇಟುಗಳಿಂದ ಹೊಡೆಸಿ ತನ್ನ ಆಳ್ವಿಕೆ ಆರಂಭಿಸಿದ ಈ ಸರ್ಕಾರ ದಬ್ಬಾಳಿಕೆ, ಅಮಾನವೀಯತೆಯನ್ನು ಅರಿಯಬೇಕಿದೆ. ಇದು ಎಲ್ಲರೂ ಒಕ್ಕೊರಲಿನಿಂದ ಖಂಡಿಸಬೇಕಾದ ಕೃತ್ಯ. ಬಾಯಿ ತುಂಬಾ ಸಮೃದ್ಧಿ ಕರ್ನಾಟಕ, ಸುಖೀ ರಾಜ್ಯದ ಬಗ್ಗೆ ಮಾತನಾಡುವ ಬಿಜೆಪಿ ಸರ್ಕಾರ ಎಲ್ಲರೆದುರು ಈಗ ನಗ್ನವಾಗಿ ನಿಂತಿದೆ.

ಹಸಿರು ಶಾಲು ಹೊದ್ದು, ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ ಅಲ್ಲಿಗೆ ರೈತರ-ಕೃಷಿಯ ಉದ್ಧಾರ ಮುಗಿದೇಹೋಯಿತೆಂದು ಮುಖ್ಯಮಂತ್ರಿ ಯಡಿಯೂರಪ್ಪನವರು ಭಾವಿಸಿದಂತಿದೆ. ಇವರು ಅಧಿಕಾರದ ಗದ್ದುಗೇರುವ ಸಂದರ್ಭದಲ್ಲಿ ಬಿತ್ತನೆ ಬೀಜ, ಗೊಬ್ಬರಕ್ಕಾಗಿ ರೈತರು ಪರದಾಡುತ್ತಿದ್ದುದು, ಇದು ಇವರಿಗೆ ಕಾಣಲಿಲ್ಲವೇ? ಮುಂಗಾರು ಮಳೆ ಅವಧಿ ಪೂರ್ವದಲ್ಲೇ ಬಿದ್ದುದರಿಂದ ಬಿತ್ತನೆಯ ಕೃಷಿ ಚಟುವಟಿಕೆಗಳು ಮುಂಚೆಯೇ ಆರಂಭಗೊಳ್ಳುವುದು ಅನಿವಾರ್ಯವೆಂಬ ಸರಳ ಸತ್ಯ ಮುಖ್ಯಮಂತ್ರಿ ಹುದ್ದೆಗೆ ಹಾತೊರೆಯುವ ಈ ಸ್ವಯಂ ಘೋಷಿತ 'ರೈತ ನಾಯಕ'ನಿಗೆ ಅರ್ಥವಾಗಲಿಲ್ಲವೇ? ಜನತೆ ನೀಡಿದ ಅವಕಾಶ - ಈ ಅಧಿಕಾರ ಜನತೆಯ ಸಂರಕ್ಷಣೆಗಾಗಿ, ಎಂಬ ಕನಿಷ್ಠ ತಿಳುವಳಿಕೆ, ಕಾಳಜಿ ಇಲ್ಲದೇ ಈ ಅವಕಾಶ ದರ್ಪದಿಂದ ಮೆರೆಯಲು ಅಧಿಕಾರ ಅನುಭವಿಸಲು ಎಂದೇ ಭಾವಿಸಿರುವ ಇಂತಹ ಅವಿವೇಕಿಗಳು, ಮುಖ್ಯಮಂತ್ರಿ, ಮಂತ್ರಿಗಳು ಜನ ಬೀದಿಗಿಳಿದು ಆಕ್ರಂಧಿಸುತ್ತಿದ್ದರೆ ಹಾರ, ತುರಾಯಿ, ಸನ್ಮಾನ ಸಮಾರಂಭ, ಮಠಾಧೀಶರ ಕಾಲು ಹಿಡಿಯುವುದರಲ್ಲಿ, ಗುಡಿ ಗುಡಾರ ತೀರ್ಥ ಯಾತ್ರೆ ನಡೆಸುವುದರಲ್ಲಿ ಮಗ್ನರಾಗಿದ್ದರು ಎಂದರೆ ಏನರ್ಥ? ಧಾರವಾಡದಲ್ಲಿ ವೃದ್ಧ ರೈತನ ಮೇಲೆ ಎಸ್.ಪಿ.ಯವರು ಲಾಠಿ ಚಾರ್ಜ್ ನಡೆಸಿದ್ದು ಉದ್ವಿಗ್ನ ಪರಿಸ್ಥಿತಿ ಹುಟ್ಟು ಹಾಕಿತು. ರೈತರು ಇದಕ್ಕೆದುರಾಗಿ ಪ್ರತಿಕ್ರಿಯಿಸಿದ್ದು ಕಂಡ ಬಳಿಕವಾದರೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಬದಲಾಗಿ ಸೇಡು ಇಟ್ಟವರಂತೆ ಹಾವೇರಿಯಲ್ಲಿ ಗೋಲಿಬಾರ್ ನಡೆಸಿ ಒಬ್ಬ ರೈತನನ್ನು ಕೊಂದರು. ಗೋಲಿಬಾರ್ ಆದಾಗಲೂ ಅದಕ್ಕೆ ಮೊದಲು ಧಾರವಾಡದಲ್ಲಿ, ಹಾವೇರಿಯಲ್ಲಿಯೂ ಮಂತ್ರಿಗಳು ಇದ್ದರೂ ರೈತರತ್ತ ಧಾವಿಸಿ ಸಮಸ್ಯೆ ಪರಿಹರಿಸಲು ಮುಂದಾಗದಿರುವುದು ಅವರ ನಿರ್ಲಕ್ಷ್ಯದ, ಜನರ ಬಗೆಗಿನ ತಿರಸ್ಕಾರದ ಮನೋಭಾವವನ್ನೇ ತೋರಿಸುತ್ತದೆ. ಹೇಗೂ ಅಧಿಕಾರ ಅನುಭವಿಸಲೆಂದೇ ಕಾದವರಲ್ಲವೇ ಎಂಬ ಪ್ರಶ್ನೆಯೂ ಎದುರಾಗುತ್ತದೆ.


ಇಷ್ಟೆಲ್ಲಾ ನಡೆದಾಗಲೂ ಯಡಿಯೂರಪ್ಪ ಎಲ್ಲವನ್ನೂ ಇನ್ನೊಬ್ಬರ ಮೇಲೆ ಗೂಬೆ ಕೂರಿಸಿ, ಕೈ ತೊಳೆದುಕೊಳ್ಳಲು ಯತ್ನಿಸಿದ್ದು ಬೇಜವಾಬ್ದಾರಿತನದ ಪರಮಾವಧಿ, ಹಿಂದೆಲ್ಲಾ ಬೀಜ-ಗೊಬ್ಬರ ಸಾಕಷ್ಟಿದೆ ಎಂದು ಹೇಳಿದ್ದವರೇ, ಈ ಘಟನೆ ನಂತರ ಕೇಂದ್ರ ಸರ್ಕಾರ, ರಾಜ್ಯಪಾಲರತ್ತ ಹೊರಳಿದ್ದೇಕೆ? ಒಂದು ವೇಳೆ ಕೊರತೆ ಇದ್ದರೂ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸಬೇಕು, ಎಂಬುದರ ಬಗ್ಗೆ ಒಂದು ನಿರ್ಧಾರ, ಕ್ರಮ ಅಗತ್ಯವಿತ್ತು ಮಾತ್ರವಲ್ಲ, ಸಂಕಟದಲ್ಲಿರುವ ರೈತ ಸಮುದಾಯವನ್ನು ಕಾಪಾಡುವ, ಸನ್ನಿವೇಶ ಕಗ್ಗಂಟಾಗಿಸದೇ ಹೊಣೆಗಾರಿಕೆಯಿಂದ ನಿಭಾಯಿಸುವಂತಹ, ಹೆಜ್ಜೆ ಇರಿಸುವುದು ಅತ್ಯಗತ್ಯವಾಗಿತ್ತು. ಮುಖ್ಯಮಂತ್ರಿಗಳ ಈಗಿನ ಹೇಳಿಕೆಗಳು ಬಾಲಿಷತನವನ್ನು, ಹೊಣೆಗೇಡಿತನವನ್ನು ತೋರಿಸುತ್ತವೆ.

ಸರ್ಕಾರವೇ ಹೇಳಿಕೊಂಡಂತೆ ಬೀಜಗೊಬ್ಬರ ಇದೆಯೆಂದಾಗಿದ್ದರೆ ಅದು ಎಲ್ಲಿತ್ತು ಎಂದು ಅವರೇ ಹೇಳಬೇಕು. ಈ ಅಭಾವದ ಸಂದರ್ಭವನ್ನೇ ಬಳಸಿ ಖಾಸಗಿ ವ್ಯಾಪಾರಸ್ಥರು, ಕಾಳಸಂತೆಕೋರರು ರಾಜಾರೋಷವಾಗಿ ಹಣದೋಚುತ್ತಿದ್ದಾರೆ ಎಂಬುದು ಗೊತ್ತಿದ್ದೂ ಗೊತ್ತಿಲ್ಲದಂತೆ ಸರ್ಕಾರ ಯಾಕೆ ನಟಿಸುತ್ತಿದೆ? ಇದು ಅವರ ಕಾಳಸಂತೆಕೋರರೊಂದಿಗಿನ ನಂಟಿನ ಪರಿಣಾಮವೂ ಹೌದು.

ಈಗಲಾದರೂ ಸರ್ಕಾರ ಬೀಜ, ಗೊಬ್ಬರ ಸಮರ್ಪಕ ವಿತರಣೆಗೆ ಎಲ್ಲಾ ಕ್ರಮ ತುರ್ತಾಗಿ ಕೈಗೊಳ್ಳಬೇಕು. ಕಾಳಸಂತೆ ಕೋರರರನ್ನು ದಂಡಿಸಿ ಸುಲಿಗೆ ತಪ್ಪಿಸಬೇಕು. ಗೋಲಿಬಾರ್‌ನಲ್ಲಿ ಮಡಿದವರಿಗೆ 10 ಲಕ್ಷ, ಗಾಯಗೊಂಡವರಿಗೆ 5 ಲಕ್ಷ ಪರಿಹಾರ ನೀಡಬೇಕು. ಮಾಡಿದ್ದೆಲ್ಲಾ ಮಾಡಿ ಮೇಲೆ ಹೆಣವಾಗಿ ಮಸಣ ಸೇರಿದವರ ಮನೆಗೆ ಹೋಗಿ ಕಣ್ಣೀರುಡುವ ನಾಟಕವನ್ನು ಇನ್ನಾದರೂ ನಿಲ್ಲಿಸಲಿ. ಓಟು ಕೊಟ್ಟವರನ್ನೂ ಒಳಗೊಂಡು ಸಾರ್ವಜನಿಕ ಪ್ರತಿಭಟನೆ ಇಷ್ಟು ಜೋರಾಗದಿದ್ದರೆ ಹೀಗೆ ನಟಿಸುವ ಸಂದರ್ಭವೂ ಇರುತ್ತಿರಲಿಲ್ಲವೇನೋ? ಜನರನ್ನು ಕೇವಲ ಓಟುಗಳೆಂದು ತಿಳಿದವರು ಹೀಗೆ ಮಾತ್ರ ವರ್ತನೆ ಮಾಡಿಯಾರು? ಹಾವೇರಿಯ ಗೋಲಿಬಾರ್ ಕೇವಲ ಆಕಸ್ಮಿಕವಲ್ಲ. ಗುಂಡು ಹಾರಿಸಲು ಆದೇಶ ಯಾರೂ ನೀಡಿಲ್ಲವೆಂದೂ, ರೈತರೇ ಬಂದೂಕು ಕಸಿದು ಗುಂಡು ಹೊಡೆಯಲು ತೊಡಗಿದರೆಂದೂ ಈಗ ಸಮರ್ಥಿಸಿಕೊಳ್ಳುತ್ತಿರುವುದು ವಂಚನೆಯ, ದಬ್ಬಾಳಿಕೆಯ ರಾಜಕಾರಣವನ್ನೇ ತೋರಿಸುತ್ತದೆ. ಬಿಜೆಪಿ ಸರ್ಕಾರಗಳು ಇಂತಹ ವರ್ತನೆ ತೋರುವುದು ಹೊಸತಲ್ಲ. ಬಿಜೆಪಿ ಅಧಿಕಾರವಿರುವ ರಾಜಸ್ಥಾನದಲ್ಲಿ ವಿಜಯರಾಜೇ ಸಿಂಧ್ಯ ಸರ್ಕಾರ ಜನ ಚಳುವಳಿಗಳ ಮೇಲೆ 50 ಕ್ಕೂ ಅಧಿಕ ಪ್ರಕರಣಗಳಲ್ಲಿ ಗೋಲಿಬಾರ್ ನಡೆಸಿ 80ಕ್ಕೂ ಅಧಿಕ ಜನರನ್ನು ಕೊಂದಿದೆ. ಗುಜರಾತ್ ಸರ್ಕಾರ ಲಾಠಿ, ಮತ್ತು ಬಂದೂಕು ಹಿಡಿದೇ 'ಪ್ರಗತಿ' ಸಾಧಿಸುತ್ತಿದೆ. ಮೋದಿ ಆಡಳಿತದಲ್ಲಿ ಜನ ಚಳುವಳಿಗಳನ್ನು ಹೊಸಕಿ ಹಾಕಲು ದಬ್ಬಾಳಿಕೆ ನಿತ್ಯದ ಮಾತಾಗಿದೆ. ದಿವಾಳಿಕೋರ ಉದಾರೀಕರಣ, ನೀತಿಗಳನ್ನು ಅನುಸರಿಸುತ್ತಿರುವ ಇವರು ಆಡಳಿತವೆಂದರೆ ಅಧಿಕಾರ ಚಲಾವಣೆ ಎಂದೇ ಭಾವಿಸಿದ್ದಾರೆ. ಬಿಜೆಪಿಯ ಇಂತಹ ನಿಜ ಮುಖವನ್ನು ಯಡಿಯೂರಪ್ಪನವರಿಗೆ 'ಅನುಕಂಪ' ತೋರಿದ ಜನ ಅರಿಯಬೇಕಿದೆ.

ಒಟ್ಟಾರೆ ಯಡಿಯೂರಪ್ಪನವರ ಬಿಜೆಪಿ ಪ್ರತಿಯೊಂದು ಕ್ರಮಗಳೂ ಜನಾಘಾತವಾಗುತ್ತಿವೆ. ಜನರ ಸ್ವಯಂಸ್ಫೂರ್ತಿ ಹೋರಾಟ ಜನವಿರೋಧಿಗಳ ವಿರುದ್ಧದ ಒಂದು ಗಟ್ಟಿ ದನಿಯನ್ನು, ಮುಂದಿನ ದಿಗಳ ಹಾದಿಯನ್ನು ತೋರಿಸುತ್ತದೆ. ಆದ್ದರಿಂದ ಕರ್ನಾಟಕಕ್ಕೆ ಬಿಜೆಪಿ ಪರಿಹಾರವೇ ಅಲ್ಲ.

ಹೆಡೆ ಬಿಚ್ಚಿರುವ ಹಿಡನ್ ಅಜೆಂಡಾ



ರಾಜ್ಯದ ಮತದಾರರ ಮಾನ್ಯ ಮತದಾನ ಯಂತ್ರದವರೆಗೆ ಮಾತ್ರ ಎಂಬುದು ಕಳೆದ ತಿಂಗಳು ನಡೆದ ವಿಧಾನಸಭೆ ಚುನಾವಣೆಯಲ್ಲಿ ಮತ್ತೊಮ್ಮೆ ಸಾಬೀತಾಗಿದೆ. ಇದು ಎಂದಿನ ಪ್ರಕ್ರಿಯೆಯಾಯಿತು. ಆದರೆ ಇಲ್ಲಿ ಚರ್ಚಿಸುತ್ತಿರುವುದು ಕಳೆದ ಚುನಾವಣೆ ನಂತರ ರಾಜ್ಯದಲ್ಲಿ ಕಂಡಿರುವ ಎದೆ ಅದುರುವ ಬೆಳವಣಿಗೆಗಳ ಕುರಿತು.

ಪ್ರತಿನಿಧಿಗಳು ಆಯ್ಕೆಯಾದ ನಂತರ ಅವರ ರಾಜ್ಯಭಾರದಲ್ಲಿ ಫ್ಯಾಸಿಸ್ಟ್ ಎಲಿಮೆಂಟ್‌ಗಳು ತಮ್ಮ ಹಿಡನ್ ಅಜೆಂಡಾವನ್ನು ಹಂತಹಂತವಾಗಿ ಅನುಷ್ಠಾನಗೊಳಿಸಲು ಕಾರ್ಯತಂತ್ರ ರೂಪಿಸಿವೆ. ಪ್ರಜಾಪ್ರಭುತ್ವ ಪರಿಕಲ್ಪನೆಯಲ್ಲಿ ಜನ ಎಂದರೆ ಸರ್ಕಾರ, ಸರ್ಕಾರ ಎಂದರೆ ದೇವರು ಎಂದೆಲ್ಲಾ ಹೇಳುತ್ತಿದ್ದಾರೆ. ಹಾಗಾಗಿಯೇ ವಿಧಾನಸೌಧದ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಯಲಾಗಿದೆ. ಆದರೆ ಬಿಜೆಪಿ ಸರ್ಕಾರದಲ್ಲಿ ದೇವರು ಎಂದರೆ ಪುರೋಹಿತಶಾಹಿ ತಮ್ಮ ಅಸ್ತಿತ್ವ ಉಳಿವಿಗಾಗಿ ಉಳಿಸಿಕೊಂಡಿರುವ ಸಂಕೇತ ಎಂಬಂತಾಗಿದೆ. ಇವರು ದೇವರನ್ನು ಪೂಜಿಸುವುದು ಮೇಲ್ನೋಟಕ್ಕೆ ಅವರ ನಂಬಿಕೆ ವಿಶ್ವಾಸದಂತೆ ಕಾಣುತ್ತದೆ. ಆದರೆ ಫ್ಯಾಸಿಸ್ಟ್‌ಗಳ ಪರಿಭಾಷೆಯಲ್ಲಿ ಹೇಳುವುದಾದರೆ ಸಮಾಜದ ವೈಜ್ಞಾನಿಕ ಭಾವನೆಯ ದಿಕ್ಕನ್ನೇ ಪಲ್ಲಟಗೊಳಿಸಿ ಅಂಧಶ್ರದ್ಧೆಯನ್ನು ತುರುಕುವ ಧರ್ಮಾಂಧರ ವ್ಯವಸ್ಥಿತ ಪಿತೂರಿಯಾಗಿದೆ.

ಜನರಿಂದ ಆಯ್ಕೆಯಾಗಿ ಸಚಿವರಾದ ಕೃಷ್ಣಯ್ಯ ಶೆಟ್ಟಿ ಪ್ರಮಾಣವಚನ ಸ್ವೀಕರಿಸಿದ ನಂತರ ನೇರವಾಗಿ ತಿರುಪತಿಯತ್ತ ತೆರಳಿದರು. ಇದೊಂದು ವೈಯಕ್ತಿಕ ವಿಷಯ, ಇಲ್ಲಿಗೆ ಕೈಬಿಡೋಣ ಎಂದು ಸುಮ್ಮನಿರಬಹುದು. ಆದರೆ ಇಡೀ ಸಚಿವ ಸಂಪುಟ ಭಾರತದ ತಿರುಳಾಗಿರುವ ಜಾತ್ಯತೀತ ತತ್ವಕ್ಕೆ ಕೊಳ್ಳಿ ಇಡಲು ಮುಂದಡಿ ಇಟ್ಟಿದೆ. ಮುಖ್ಯಮಂತ್ರಿ ಕುರ್ಚಿಯಿಂದ ಆರಂಭಿಸಿ ಎಲ್ಲ ಸಚಿವರು ಕಚೇರಿಗೆ ಕಾಲಿಡುವ ಮುನ್ನ ಹೋಮ ಹವನಗಳನ್ನು ಕೈಗೊಂಡಿದ್ದರು. ವಿಧಾನಸೌಧದಲ್ಲಿ ಜನರ ಬದಲಿಗೆ ಪುರೋಹಿತಶಾಹಿ ವರ್ಗವೇ ತುಂಬಿತ್ತು. ಯಡ್ಯೂರಪ್ಪನವರು ಪ್ರಮಾಣ ವಚನ ಸ್ವೀಕಾರ ಸಮಾರಂಭದಿಂದ ಆರಂಭಿಸಿ ಇಲ್ಲಿವರೆಗೂ ಅರೆಕ್ಷಣವೂ ಮೂಢ ಆಚರಣೆಗಳಿಂದ ಹೊರಬಂದಿಲ್ಲ. ಮುಜರಾಯಿ ಇಲಾಖೆ ವ್ಯಾಪ್ತಿಯ 36 ಸಾವಿರ ದೇವಾಲಯಗಳಲ್ಲಿ ಪ್ರತಿದಿನ ಮೊದಲ ಪೂಜೆ ಯಡ್ಯೂರಪ್ಪ ಹೆಸರಿನಲ್ಲಿ ಮಾಡಬೇಕೆಂದು ಅಧಿಸೂಚನೆ ಹೊರಡಿಸುವ ಹಂತಕ್ಕೂ ರಾಜ್ಯ ಸರ್ಕಾರ ತಲುಪಿದೆ. ಜನತೆಯಲ್ಲಿ ಧರ್ಮದ ಮುಜರಾಯಿ ಇಲಾಖೆಯು ವ್ಯವಸ್ಥಿತವಾಗಿ ದುರುಪಯೋಗ ಮಾಡಿಕೊಳ್ಳಲು ಫ್ಯಾಸಿಸ್ಟ್ ಶಕ್ತಿಗಳು ಚಿಂತನೆ ನಡೆಸಿವೆ. 1987ರಲ್ಲಿ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಮಳೆಯಾಗಲಿ ಎಂದು ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ಸ್ವಾಮೀಜಿಯೊಬ್ಬರಿಂದ ಪೂಜೆ ಮಾಡಿಸುವ ವ್ಯವಸ್ಥೆ ಮಾಡಿದರು. 30 ದಿನ ಪೂಜೆ ನಡೆಸಿದ ಸ್ವಾಮೀಜಿ ಮಳೆಯಾಗುವುದಿಲ್ಲ ಎಂದು ಖಾತರಿಯಾಗುತ್ತಿದ್ದಂತೆ ರಾತ್ರೋರಾತ್ರಿ ಕಾಲಿಗೆ ಬುದ್ಧಿ ಹೇಳಿದ್ದ. ಪ್ರಕೃತಿಯಲ್ಲಾಗುವ ಏರುಪೇರಿನಿಂದಾಗಿ ಸರಿಯಾದ ಕಾಲಕ್ಕೆ ಮಳೆಯಾಗಿಲ್ಲ ಎಂಬ ವೈಜ್ಞಾನಿಕ ಸತ್ಯ ಗೊತ್ತಿದ್ದರೂ ಜನರ ನೆರವಿಗೆ ಏನೂ ಮಾಡದೇ ವೈಫಲ್ಯವನ್ನು ಮುಚ್ಚಿಡಲು ರಾಮಕೃಷ್ಣ ಹೆಗಡೆ ಮಾಡಿದ ವ್ಯವಸ್ಥಿತ ಪಿತೂರಿಯಾಗಿತ್ತು.

ಅದೇ ಹಾದಿಯಲ್ಲಿ ಯಡ್ಯೂರಪ್ಪ ಸರ್ಕಾರ ಹೆಜ್ಜೆ ಇಟ್ಟಿದೆ. ವಿಜ್ಞಾನ, ತಂತ್ರಜ್ಞಾನ, ಆಧುನಿಕತೆ ಮಾತನಾಡುತ್ತಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಸಹ 2002ರಲ್ಲಿ ಬರ ಎದುರಾದಾಗ ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ಪೂಜೆ ನಡೆಸಲು ಮುಂದಾಗಿದ್ದರು. ಮಳೆ ಬಾರದಿರಲು ಅದೃಶ್ಯ ಶಕ್ತಿಯೇ ಕಾರಣ ಎಂಬುದನ್ನು ಜನರ ಮನಸ್ಸಿನಲ್ಲಿ ಬಿತ್ತುವುದು ಸಂದರ್ಭ ಎದುರಿಸಲು ತಾವೇನೂ ಮಾಡಬೇಕಲ್ಲ ಎಂಬುದು ಇದರ ಹಿಂದಿನ ಮರ್ಮವಾಗಿದೆ.

ಜನ ತಮ್ಮನ್ನು ಏಕೆ ಆಯ್ಕೆ ಮಾಡಿದ್ದಾರೆ. ಜನಪರ ಆಡಳಿತ ನೀಡುವುದು ನಮ್ಮ ಜವಾಬ್ದಾರಿ ಎಂಬ ಅಂಶವನ್ನೇ ಬಿಜೆಪಿ ಮರೆತಂತಿದೆ. ಇಲ್ಲವೇ... ವ್ಯವಸ್ಥಿತವಾಗಿ ಜನರಿಂದ ಅದನ್ನು ಮರೆ ಮಾಚುತ್ತಿದೆ. ಸರ್ಕಾರವೊಂದು ವೈಜ್ಞಾನಿಕ ಚಿಂತನೆ, ದೃಷ್ಟಿಕೋನದ ನೆಲೆಯಲ್ಲಿ ಇರಬೇಕೆ ವಿನಹ ಇಡೀ ಸರ್ಕಾರಕ್ಕೆ ಧಾರ್ಮಿಕ ಲೇಬಲ್ ಹಚ್ಚುವಂತಲ್ಲ. ಶತಶತಮಾನಗಳಿಂದ ಸಮಾಜದಲ್ಲಿ ಬೇರು ಬಿಟ್ಟಿರುವ ಸಾಮಾಜಿಕ ಅಸಮಾನತೆ, ಮೂಢನಂಬಿಕೆಯನ್ನು ಹೋಗಲಾಡಿಸಬೇಕಾದ ಸರ್ಕಾರ, ಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ವಾಸ್ತು, ಕಾಲ, ಗಳಿಗೆ, ಜ್ಯೋತಿಷ್ಯಗಳನ್ನು ನೋಡುವಂತಾದರೆ ರಾಜ್ಯದ ಭವಿಷ್ಯದ ಗತಿ ಏನು ಎಂಬ ಪ್ರಶ್ನೆ ಎದುರಾಗುತ್ತದೆ.

ರಸಗೊಬ್ಬರ ದೊರೆಯದಿರಲು, ಗೋಲಿಬಾರ್ ನಡೆಸಲು, ರೈತ ಸಿದ್ದಲಿಂಗಪ್ಪ ಜೀವ ತೆರಲು, ಇವೆಲ್ಲದಕ್ಕೂ ಅದೃಶ್ಯ ಶಕ್ತಿಯೇ ಕಾರಣ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಸಚಿವನಾಗಿ, ಶಾಸಕನಾಗಿ ತನ್ನದೇನೂ ಜವಾಬ್ದಾರಿ ಇಲ್ಲ. ಎಲ್ಲವೂ ಅವರವರ ಹಣೆಬರಹ, ಯಾರು ಯಾರಿಗೂ ಯಾವುದಕ್ಕೂ ಹೊಣೆಗಾರರಲ್ಲ. ಎಲ್ಲವೂ ದೈವೇಚ್ಛೆ ಎಂಬುದನ್ನು ಜನತೆಯಲ್ಲಿ ಋಜುವಾತು ಮಾಡುವ ಫ್ಯಾಸಿಸ್ಟ್ ಶಕ್ತಿಗಳ ಪ್ರಜ್ಞಾಪೂರ್ವಕ ಅಜೆಂಡಾ ಇದಾಗಿದೆ. ಕೋಡಿಮಠ ಸ್ವಾಮೀಜಿ ಇತ್ತೀಚೆಗೆ ಹಾಸನದಲ್ಲಿ 11-12 ಗಂಟೆ ನಡುವೆ ಭಯಂಕರ ಘಟನೆಯೊಂದು ಸಂಭವಿಸುತ್ತದೆ ಎಂದು ಹೇಳಿದ್ದಾರೆಂದು ಕೆಲವರು ಆತಂಕವನ್ನು ಸೃಷ್ಟಿಸಿದ್ದರು. ಇಡೀ ಇಡೀ ಜಿಲ್ಲೆ ಭೀತಿಯ ಮಡುವಿನಲ್ಲಿ ಬಿದ್ದಿತ್ತು. ಆಗಲಿರುವ ಅನಾಹುತ ಎದುರಿಸಲು ಪೊಲೀಸ್ ಇಲಾಖೆ ಸರ್ವಸಜ್ಜುಗೊಂಡಿತ್ತು. ಎಲ್ಲಾದರೂ ಬಾಂಬ್ ಇಡಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಶ್ವಾನದಳವನ್ನೂ ಬಳಕೆ ಮಾಡಲಾಗಿತ್ತು. ಕೊನೆಗೆ ಸ್ವಾಮೀಜ

ಪುಟ 10 ರಿಂದ

'ತೈಲ ಬೆಲೆ ನೀತಿ ಬದಲಿಸಿ'

ರಾಜ್ಯದಲ್ಲಿ ತೈಲದ ಮೇಲಿನ ಮಾರಾಟ ತೆರಿಗೆ ಕಡಿತಕ್ಕೆ ಒತ್ತಾಯಿಸಿ ಹಾಗೂ ಕೇಂದ್ರ ಸರ್ಕಾರದ ತೈಲ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಎಡಪಕ್ಷಗಳು ಮತ್ತು ಸರ್ವೋದಯ ಕರ್ನಾಟಕ ಪಕ್ಷಗಳ ಕಾರ್ಯಕರ್ತರು ಬೆಂಗಳೂರು ನಗರದ ದಂಡು ರೈಲು ನಿಲ್ದಾಣದಲ್ಲಿ ಜೂನ್ 11, 2008 ರಂದು ರೈಲು ತಡೆ ನಡೆಸಿದರು.

ಮಾರಿಕುಪ್ಪಂ ರೈಲಿಗೆ ತಡೆ ಹಾಕಲಾದ ಈ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಡಾ.ಸಿದ್ದನಗೌಡ ಪಾಟೀಲರು ಮಾತನಾಡಿ ಕೇಂದ್ರ ಸರ್ಕಾರವು ತೈಲ ಬೆಲೆ ಏರಿಕೆಗೆ ಬದಲಾಗಿ ಎಡಪಕ್ಷಗಳು ಸಲ್ಲಿಸಿದ ಪರ್ಯಾಯ ಧೋರಣೆಯನ್ನು ಗಮನಿಸದೇ ಬೆಲೆ ಏರಿಕೆ ಮಾಡಿದೆ. ಈ ಸರ್ಕಾರ ಸಿರಿವಂತರು, ಗುತ್ತೆದಾರಿ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಕೆಲಸ ಮಾಡುತ್ತಿದೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಮಾತನಾಡಿ, ರಾಜ್ಯ ಕೇಂದ್ರ ಸರ್ಕಾರಗಳು ಅನುಸರಿಸಿದ ಉದಾರೀಕರಣ ನೀತಿಗಳ ಕಾರಣದಿಂದಾಗಿ ತೈಲ, ಆಹಾರ ಬೆಲೆಗಳು ಏರುತ್ತಿವೆ. ತೈಲ ಬೆಲೆ ಏರಿಕೆಯಿಂದ ಅಪಾರವಾದ ಅನಿರೀಕ್ಷಿತ ಲಾಭಗಳಿಸುತ್ತಿರುವ ಖಾಸಗಿ ತೈಲ ಕಂಪನಿಗಳ ಲಾಭದ ಮೇಲೆ ವಿಂಡ್‌ಫಾಲ್ ತೆರಿಗೆ (ಅನಿರೀಕ್ಷಿತ ಲಾಭದ ಮೇಲಿನ ತೆರಿಗೆ) ಹಾಕಬೇಕು. ಹಾಗೂ ಕಚ್ಚಾ ತೈಲದ ಮೇಲಿನ ಆಮದು ಸುಂಕ, ತೆರಿಗೆಯನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿದರು. ತೈಲ ಬೆಲೆ ಏರಿಕೆಯಿಂದ ಮೊದಲೇ ಏರಿದ್ದ ಅಗತ್ಯ ವಸ್ತುಗಳ ಬೆಲೆ ಮತ್ತಷ್ಟು ಏರಿವೆ. ಜನರು ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರ ಪೆಟ್ರೋಲ್, ಡೀಸೆಲ್‌ಗಳ ಮೇಲಿನ ಮಾರಾಟ ತೆರಿಗೆ ಕಡಿತ ಮಾಡಿ ಜನರ ಮೇಲಿನ ಹೊರೆ ಕಡಿಮೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ಫಾರ್ವರ್ಡ್ ಬ್ಲಾಕ್ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಆರ್. ಶಿವಶಂಕರ್ ರವರು ಮಾತನಾಡಿ ತೈಲ ಬೆಲೆ ಏರಿಕೆಯಿಂದ ಅಸಂಘಟಿತ, ಸಂಘಟಿತ ಕಾರ್ಮಿಕರು ತೀವ್ರ ತೊಂದರೆಗೊಳಗಾಗಿದ್ದಾರೆ. ರಿಲಯನ್ಸ್ ನಂತಹ ಭಾರಿ ಖಾಸಗಿ ತೈಲ ಕಂಪನಿಗಳ ಲಾಭ ಹೆಚ್ಚಿಸುವಂತಹ ನೀತಿಯನ್ನು ಸರ್ಕಾರ ಕೈಬಿಡಬೇಕೆಂದು ಒತ್ತಾಯಿಸಿದರು. ಸರ್ವೋದಯ ಪಕ್ಷದ ಮುಖಂಡರಾದ ವೆಂಕಟೇಶ ರವರು ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದರು.

ಸಿಪಿಐ(ಎಂ) ಮುಖಂಡರಾದ ಜಿ.ಎನ್.ನಾಗರಾಜ್, ಎಸ್.ಪ್ರಸನ್ನ ಕುಮಾರ್, ಸಿಪಿಐ ಮುಖಂಡರಾದ ವೆಂಕಟರಾಮ, ಫಾರ್ವರ್ಡ್ ಬ್ಲಾಕ್ ಮುಖಂಡರಾದ ಕೆ.ಸಿ.ವೆಂಕಟೇಶ್, ಡಿಎಸ್‌ಎಸ್ ನ ಮುಖಂಡರಾದ ಎನ್.ವೆಂಕಟೇಶ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜೂನ್ 7, 2008 ರಂದು ಸಿಪಿಐ(ಎಂ) ಪಕ್ಷದ ಯಶವಂತಪುರ ಪ್ರದೇಶ ಸಮಿತಿ ವತಿಯಿಂದ ಆರ್.ಟಿ.ಓ. ಕಛೇರಿ ಮುಂಭಾಗದ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು. ಕಾರ್ಯದರ್ಶಿ ಲೀಲಾವತಿ ನೇತೃತ್ವ ವಹಿಸಿದ್ದರು. ಇದಲ್ಲದೆ ಜೂನ್ 9 ರಂದು ಹೆಗ್ಗನಹಳ್ಳಿಯಲ್ಲಿಯೂ ಪ್ರತಿಭಟನೆ ನಡೆದಿದೆ. ಲೀಲಾವತಿ, ರಾಮಕೃಷ್ಣ ಮುಂತಾದವರು ನೇತೃತ್ವ ವಹಿಸಿದ್ದರು.

ಬೆಂಗಳೂರಿನ ಸಿಪಿಐ(ಎಂ) ರಾಜಾಜಿನಗರ ವಲಯ ಸಮಿತಿಯಿಂದ ಪ್ರತಿಭಟನೆ ನಡೆದಿದೆ. ಡಿವೈಎಫ್‌ಐ, ಜೆಎಂಎಸ್, ಎಂಸಿಇಎ, ಸಿಐಟಿಯು ಮುಂತಾದವುಗಳ ನೇತೃತ್ವದಲ್ಲಿ ಆಡುಗೋಡಿಯಲ್ಲಿ ಪ್ರತಿಭಟನೆ ನಡೆದಿದೆ. ಇದೇ ರೀತಿಯ ಪ್ರತಿಭಟನೆ ವಿಲ್ಸನ್ ಗಾರ್ಡನ್‌ನಲ್ಲಿಯೂ ನಡೆದಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆದ ವರದಿಗಳು ಬರುತ್ತಿವೆ.


ಸಿಪಿಐ(ಎಂ) ನಿಂದ ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಪ್ರತಿಭಟನೆ ನಡೆದಿದೆ. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ, ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ(ಬೆಂ) ಮುಂತಾದವರು ಪಾಲ್ಗೊಂಡಿದ್ದಾರೆ. ಮೈಸೂರಿನಲ್ಲಿ ಸಿಪಿಐ(ಎಂ), ಸಿಪಿಐ, ದಲಿತ ಸಂಘರ್ಷ ಸಮಿತಿಗಳ ಜಂಟಿ ಪ್ರತಿಭಟನೆ ನಡೆದಿದೆ. ಅಲ್ಲಿ ರೈಲು ತಡೆ ನಡೆಸಲಾಗಿದೆ.



ಬೆಂ. ನ. ರಾಜಾಜಿನಗರ ವಲಯ ಸಮಿತಿಯಿಂದ ಪ್ರತಿಭಟನೆ



ಅರ್ಚನೆ ಇಷ್ಟು ಬೇಗೆ ಫಲ ನೀಡಿತೇ?



ಶ್ರೀ

ಶಾಸಕರು, ಮುಖ್ಯವಲ್ಲದ ಮಂತ್ರಿಗಳು ಸನ್ಮಾನ್ಯ ಶ್ರೀ ಶ್ರೀ ಮುಖ್ಯ ಮಂತ್ರಿಗಳ ಪಾದ ಕಮಲಗಳಿಗೆ ಸಾಷ್ಟಾಂಗ ಎರಗುವುದನ್ನು ಕಂಡು ಇದೇನು ಮುಖ್ಯಮಂತ್ರಿ ಮಠವೇ? ಎಂದು ಕೆಲವರಿಗೆ ಗೊಂದಲವಾಗಿತ್ತಂತೆ. ಇದೀಗ ಸಚಿವ ಸಂಪುಟದಿಂದ ಸ್ಪಷ್ಟನೆ ಬಂದಿದೆಯಂತೆ, ಶ್ರೀಮನ್ ಶ್ರೀ ಶ್ರೀ ಮುಖ್ಯಮಂತ್ರಿಗಳು 'ಮಹಾರಾಜರು' ಅಂತ. ದೇವಸ್ಥಾನ ಗಳಲ್ಲಿ ಮಹಾರಾಜರ ಹೆಸರಿನಲ್ಲಿ ಅರ್ಚನೆಯಾಗುತ್ತಿದ್ದ ಹಾಗೆ ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಪ್ರತಿದಿನ ಎಲ್ಲಾ ದೇವಸ್ಥಾನಗಳಲ್ಲೂ ಮೊದಲ ಅರ್ಚನೆ ಆಗಬೇಕು ಎಂಬ ದಿವ್ಯಾದೇಶವು ಹೊರಟಿದೆಯಂತೆ. ಇನ್ನು ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರು ಬಿಜಯಂಗೈಯುವಾಗ "ರಾ ಜಾ ಧಿ ರಾ ಜ ..., ಮುಖ್ಯ ರಾ ಜ ..., ಗಣೀ ಧಣಿಗಳ ಗಂಡ ..., ಪಕ್ಷೇತರರನ್ನು ಕೊಂಡು ಕೊಂಡ ...., ರೈತರ ಹೆಸರಲ್ಲಿ ಪ್ರ ಮಾ ಣ ಕೈ ಗೊಂಡ ...., ರೈತರಿಗೇ ಹಾರಿಸಿ ಗುಂ ಡ ...., ಕಣ್ಣುಗಳು ಕಣ್ಣೀರ ಹೊಂಡ ...., ಕಮಲ ಪಕ್ಷ ಶೋಭಿತ ..., ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರು ಆಗಮಿಸುತ್ತಿದ್ದಾರೇ .., ಎಂದು ಬೋಪರಾಕು ಹಾಕಲು ಸಂಪುಟದ ಆಸ್ಥಾನ ವಿದ್ವಾನ್ ಹೊಗಳು ಭಟ್ಟರು ತಯಾರಿರಬೇಕು ಎಂಬ ಆದೇಶ ಶೀಘ್ರದಲ್ಲೇ ಬರಲಿದೆಯಂತೆ.

ನೇಪಾಳದಲ್ಲಿ ರಾಜರ ಆಡಳಿತ ಕೊನೆಗೊಂಡಿದ್ದಕ್ಕಾಗಿ ಶ್ರೀಮಾನ್ ಶ್ರೀ ಶ್ರೀ ರಥಾರೂಢ ಲಾಲ ಕೃಷ್ಣರು ಬಹಳ ದುಃಖ ಪಡುತ್ತಿದ್ದಾರಂತೆ. ಇದೀಗ ನಮ್ಮ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಹೋಗಿ, ರಾಜಾಡಳಿತ ಜಾರಿಗೆ ಬಂದದ್ದು ಅವರಿಗೆ ಬಹಳ ಸಂತೋಷವಾಗಿದೆಯಂತೆ. ಏಕೆಂದರೆ, ರಾಜ್ಯದಲ್ಲಿ ರಾಜಾಡಳಿತ ಇದ್ದರೆ ತಾವು ಚಕ್ರವರ್ತಿ ಆಗಬಹುದು ಅಂತ ಅಂತೆ.

ಇಷ್ಟರಲ್ಲಿ ಸನ್ಮಾನ್ಯ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರಿಗೆ ದುಃಖವಾಗಿದೆಯಂತೆ. ಪಟ್ಟಾಭಿಷೇಕವಾದ ನಂತರ ಪ್ರಜೆಗಳಿಂದ ಸನ್ಮಾನಗಳನ್ನು ಸ್ವೀಕರಿಸಲು ಒಂದು ಆರೆಂಟು ತಿಂಗಳು ಬಿಡುವಿಲ್ಲದಂತೆ, ಗೊಬ್ಬರದ ಸಮಸ್ಯೆ ಬೆಂಕಿ ಹೊತ್ತಿಕೊಂಡದ್ದಕ್ಕೆ. ಒಳಗೊಳಗೇ ಸಣ್ಣದಾಗಿ ದಿಗಿಲೂ ಆಗುತ್ತಿದೆಯಂತೆ. ತಾವು ಮಠ ಮಠ ಮಧ್ಯಾಹ್ನ ರೈತರ ಹೆಸರಿನಲ್ಲಿ ಪ್ರಮಾಣ ಮಾಡಿದ ಕೆಲವೇ ದಿನಗಳಲ್ಲಿ ರೈತರು "ಢಂ" ಆದರು. ಇನ್ನು ಕೆಲವು ಶಾಸಕರು, ಮಂತ್ರಿಗಳು, ತಮ್ಮ ಹೆಸರಿನಲ್ಲಿ ಫಮಾಣ ವಚನ ತೆಗೆದುಕೊಂಡಿದ್ದಾರೆ, ಇನ್ನು ತಮ್ಮ ಗತಿಯೇನು? ಅಂತ! ಅಂತೆ .

ಏನೇ ಆಗಲಿ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರ ಹೆಸರಿನಲ್ಲಿ ಎಲ್ಲಾ ದೇವಸ್ಥಾನಗಳಲ್ಲಿ ಪ್ರತಿದಿನ ಬೆಳಗ್ಗೆ ಅರ್ಚನೆ ಮಾಡಿಸುವಂಥ ಧಾರ್ಮಿಕ ಕ್ರಾಂತಿಯನ್ನು ಹಿಂದೆ ಕೋಟೆ ಕಟ್ಟಿ ಮೆರೆದ ಯಾವ ರಾಜರೂ ರಾಜ್ಯದ ಪ್ರಜೆಗಳ ಕಲ್ಯಾಣದ ಬಗ್ಗೆ ಇಷ್ಟೊಂದು ಕಾಳಜಿ ವಹಿಸಿರಲಿಲ್ಲವಂತೆ? ಇನ್ನು ಎಲ್ಲ ಧಾರ್ಮಿಕ ವಿಧಿಗಳನ್ನು ಸರ್ಕಾರವೇ ಕೈಗೊಳ್ಳಬಹುದಂತೆ. ಮೊದಲನೆಯದಾಗಿ ಪೋಲೀಸರ ಗುಂಡಿಗೆ ಬಲಿಯಾದವರಗೆಲ್ಲ ಸರ್ಕಾರವೇ ಶಾಸ್ತ್ರೋಕ್ತವಾಗಿ ಅಂತಿಮ ಸಂಸ್ಕಾರ, ತಿಥಿ ಎಲ್ಲವನ್ನೂ ಪ್ರತಿನಿತ್ಯ ನೆರವೇರಿಸುವುದಂತೆ.

ರಾಜ್ಯದಲ್ಲಿ ಈ ಪರಿಯಾಗಿ ಧರ್ಮಸಂಸ್ಥಾಪನೆ ಮಾಡಿದಂಥ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರಿಗೆ ಯಾಕೋ ಅವರ ಹೆಸರೇ ಕಿರಿಕಿರಿ ಮಾಡುತ್ತಿದೆ ಯಂತೆ ಗಿಣಿ, ಗೂಬೆ ಮುಂತಾದ ಪಕ್ಷಿ ಶಾಸ್ತ್ರಿಗಳೋ, ಅಥವಾ ಅಂಕಿ ಸಂಕಿ ಶಾಸ್ತ್ರಿಗಳೋ ಹೇಳಿದಂತೆ ತಮ್ಮ ಹೆಸರು ಬದಲಾಯಿಸಿಕೊಂಡಿದ್ದರಂತೆ. ಈಗ ನೋಡಿದರೆ ಯಾರೋ ವ್ಯಾಕರಣ ಪಂಡಿತರೋ ಅಥವಾ ಅರ್ಥ ಶಾಸ್ತ್ರಿಗಳೊ ಅವರ ಮುದ್ದಿನ ಹೆಸರಿನ ಅರ್ಥ ಕಂಡು ಹಿಡಿದುಬಿಟ್ಟಿದ್ದಾರಂತೆ. ಇದರಿಂದ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರಿಗೆ ಮುಜುಗರವಾಗುತ್ತಿದೆಯಂತೆ. ಅದಕ್ಕೆ ಈಗ ಶಾರ್ಟ್ ಅಂಡ್ ಸ್ವೀಟಾಗಿ ಇಂಗ್ಲೀಷಿನ ಇನಿಷಿಯಲ್ಸ್ ಇರಲಿ ಅಂತ ತಾಕೀತು ಮಾಡಿದ್ದಾರಂತೆ. ಇರಲಿ, ಆದರೆ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರು ಎನ್ನುವಾಗ ಇದರ ಜತೆ ಇಂಗ್ಲೀಷ್ ಇನಿಷಿಯಲ್ಸ್ ಸರಿ ಹೊಂದುತ್ತಿಲ್ಲವಂತೆ.

ಇಷ್ಟೆಲ್ಲ ಅಂತೆ ಕಂತೆ ಹೇಳುತ್ತಾ ರಾತ್ರಿ ಮಲಗುವ ಹೊತ್ತಾಯಿತು. ಪ್ರಜೆಗಳೆಲ್ಲ ಶ್ರೀಮನ್ ಶ್ರೀ ಶ್ರೀ ಮಹಾ ಮುಖ್ಯಮಂತ್ರಿ ರಾಜರಿಗೆ ಹಾಗೂ ಸರ್ಕಾರಕ್ಕೆ ಲಾಲಿ ಹಾಡಿ ಮಲಗತಕ್ಕದ್ದು.!

ಟಿಪ್ಪಣಿ: ಈ ಲೇಖನ ಪ್ರಕಟವಾಗುವ ಹೊತ್ತಿಗೆ ಸರ್ಕಾರ ಆದೇಶ ಹಿಂತೆಗೆದು ಕೊಂಡಿದೆಯಂತೆ. ಅರ್ಚನೆ ಇಷ್ಟುಬೇಗ ಫಲ ನೀಡಿ ಸರ್ಕಾರಕ್ಕೆ ಸದ್ಬುದ್ಧಿಯನ್ನು ದೇವರು ದಯಪಾಲಿಸಿದರೋ, ದೇವರಿಗೇ ಮುಜುಗರವಾಯಿತೋ, ಸಚಿವರು ಆದೇಶ ಹೊರಡಿಸಿದ್ದಕ್ಕಾಗಿ ವಿಷಾದಿಸಿದರೋ, ಹಿಂತೆದುಕೊಂಡಿದ್ದಕ್ಕಾಗಿ ವಿಷಾದಿಸಿದರೋ ಮುಂತಾದ ಹೆಚ್ಚಿನ ಮಾಹಿತಿಗಳು ತಕ್ಷಣಕ್ಕೆ ಲಭ್ಯವಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಶ್ರೀ

ಜನಶಕ್ತಿ ಕನ್ನಡ ವಾರಪತ್ರಿಕೆ

ಮತ್ತೊಬ್ಬ ಬಿಜೆಪಿ ಅಧ್ಯಕ್ಷರು ಈಗ ಜಾತ್ಯಾತಿತತೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದಿದ್ದಾರೆ. ಹಿಂದೆ ಇಂತಹುದೆ ಕರೆ ನೀಡಿದ್ದ ಅಡ್ವಾಣಿಯವರು ಜಾತ್ಯಾತೀತತೆಯ ಬಿಜೆಪಿ ನಿರೂಪಣೆಯನ್ನು ನೀಡುತ್ತಾ ಮೂರು 'ನೀತಿ ಬೋಧೆ' ಗಳನ್ನು ಮುಂದಿಟ್ಟಿದ್ದರು ಎಂಬುದನ್ನು ದೇಶದ ಹಿರಿಯ ಚಿಂತಕ ಸೀತಾರಾಂ ಯೆಚೂರಿ ಇಲ್ಲಿ ನೆನಪಿಸುತ್ತಾರೆ. ಈಗಿನ ಅಧ್ಯಕ್ಷರು ಅವನ್ನು ಈ ಚರ್ಚೆಯಲ್ಲಿ ಪುನರುಚ್ಚರಿಸುತ್ತಾರೆಯೇ? ಅದರ ಸಾಧ್ಯತೆ ಬಹಳ ಕಡಿಮೆ. ಏಕೆಂದರೆ ಬಿಜೆಪಿ ಆ 'ನೀತಿ ಬೋಧೆ' ಗಳನ್ನು ಪ್ರಾಮಾಣಿಕವಾಗಿ ಅನುಸರಿಸಿದರೆ ತಮ್ಮ ಗುರೂಜಿಯ ನುಡಿಮುತ್ತುಗಳನ್ನು ತಿರಸ್ಕರಿಸಬೇಕಾಗುತ್ತದೆ ಎನ್ನುತ್ತಾರೆ ಲೇಖಕರು. ಬಿಜೆಪಿ ಅದಕ್ಕೆ ಸಿದ್ಧವಾಗಿದೆಯೇ?

ಜಾತ್ಯಾತೀತತೆಯ ಬಗ್ಗೆ ರಾಷ್ಟ್ರೀಯ ಚರ್ಚೆಗೆ ಕರೆ

ಬಿಜೆಪಿಯ ಮತ್ತೊಂದು ಕಪಟತನ

ಮತ್ತೊಮ್ಮೆ ಒಬ್ಬ ಬಿಜೆಪಿ ಅಧ್ಯಕ್ಷರು ಧರ್ಮನಿರಪೇಕ್ಷತೆ ಅಥವಾ ಜಾತ್ಯಾತೀತತೆ(ಸೆಕ್ಯುಲರಿಸಂ)ಯ ಮೇಲೆ ಚರ್ಚೆಗೆ ಕರೆ ನೀಡಿದ್ದಾರೆ. ಇದೊಂದು ಅಶುಭ ಸೂಚನೆ. ಏಕೆಂದರೆ ಹಿಂದೊಂದು ಸಂದರ್ಭದಲ್ಲಿ ಆಗ ಬಿಜೆಪಿ ಅಧ್ಯಕ್ಷರಾಗಿದ್ದ ಶ್ರೀಯುತ ಎಲ್.ಕೆ.ಅಡ್ವಾಣಿಯವರೂ ಇಂತಹ ಚರ್ಚೆಗೆ ಕರೆ ನೀಡಿದ್ದರು. ಇದರ ಬೆನ್ನಲ್ಲೆ ಅವರ 'ರಥಯಾತ್ರೆ' ನಡೆಯಿತು, ಅದರ ದಾರಿಯುದ್ದಕ್ಕೂ ರಕ್ತದ ಹೊಳೆ ಹರಿಯಿತು, ಅಂತಿಮವಾಗಿ ಬಾಬ್ರಿ ಮಸೀದಿ ಧ್ವಂಸದ ಅತ್ಯಂತ ಹೊಣೆಗೇಡಿ ಕೃತ್ಯ ನಡೆಯಿತು.

ಕರ್ನಾಟಕದಲ್ಲಿ ಚುನಾವಣಾ ವಿಜಯದ ಹೊಂಬೆಳಕಿನಲ್ಲಿ ನಡೆದ ಇತ್ತೀಚಿನ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಶ್ರೀಯುತ ರಾಜನಾಥ ಸಿಂಗ್ ಸಂವಿಧಾನದಲ್ಲಿರುವ 'ಧರ್ಮ ನಿರಪೇಕ್ಷತೆ' (ಹಿಂದೀ ಭಾಷೆಯಲ್ಲಿ) ಅಥವಾ ಜಾತ್ಯಾತೀತತೆ ಎಂಬುದನ್ನು 'ಪಂಥನಿರಪೇಕ್ಷತೆ' ಎಂದು ಬದಲಿಸಬೇಕು ಎಂದು ಕರೆ ನೀಡಿದರು. ಆರೆಸ್ಸೆಸ್ ಕೂಡಲೆ ಇದನ್ನು ಸ್ವಾಗತಿಸಿತು, ಅನುಮೋದಿಸಿತು. ಅಂದರೆ ಇದು ಹಿಂದೂ ಧರ್ಮ ಮಾತ್ರವೇ ಒಂದು ಧರ್ಮ, ಉಳಿದವೆಲ್ಲ ಪಂಥಗಳಷ್ಟೇ ಎಂಬ ಅದರ ಹಳೆಯ ಪರಿಕಲ್ಪನೆಯಲ್ಲದೆ ಬೇರೇನೂ ಅಲ್ಲ. ಇದೇ ಧಾಟಿಯಲ್ಲಿ ಮುಂದುವರೆದ ಅಧ್ಯಕ್ಷೀಯ ಭಾಷಣ ಆರೆಸ್ಸೆಸ್‌ನ ಬೇಡಿಕೆಗಳಾದ 370ನೆ ಕಲಮಿನ ರದ್ದತಿ ಮತ್ತು ಸಮರೂಪದ ನಾಗರಿಕ ಸಂಹಿತೆ ತರಬೇಕು ಎಂಬುದನ್ನು ಪುನರುಚ್ಚರಿಸಿತು. ಅಂದರೆ 2009ರ ಸಾರ್ವತ್ರಿಕ ಚುನಾವಣೆಗಳಿಗೆ ಪೂರ್ವಭಾವಿಯಾಗಿ ಬಿಜೆಪಿ ಚುನಾವಣಾ ಲಾಭ ದಕ್ಕಿಸಿಕೊಳ್ಳಲು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ, ಅದಕ್ಕಾಗಿ ಕಟ್ಟಾ 'ಹಿಂದುತ್ವ'ದ ಅಜೆಂಡಾವನ್ನು ರಂಗದ ಮೇಲೆ ತರುವ ಸಿದ್ಧತೆಯನ್ನು ಆರಂಭಿಸಿದೆ ಎಂಬುದು ಸ್ಪಷ್ಟ.

ಮೂರು 'ಕರಾರು'ಗಳು

ಹಿಂದಿನ ಬಾರಿ ಶ್ರೀಯುತ ಅಡ್ವಾಣಿಯವರು ಇದೇ ರೀತಿ ಜಾತ್ಯಾತೀತತೆಯ ಮೇಲೆ ಒಂದು ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದು ಕರೆ ನೀಡಿದ್ದಾಗ ಬಿಜೆಪಿಯ ಪರಿಕಲ್ಪನೆಯ ರೂಪುರೇಷೆ ನೀಡಲು 'ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲಿ ಎರಡು ಲೇಖನಗಳನ್ನು ಬರೆದರು(ಡಿಸೆಂಬರ್ 27-28, 1992). ಅದರ ಕೆಲವೇ ದಿನಗಳ ಮೊದಲು ಬಿಜೆಪಿ ರಾಜಾರೋಷವಾಗಿ ನಡೆಸಿದ ಕಾನೂನು ಉಲ್ಲಂಘನೆ, ಸುಪ್ರಿಂ ಕೋರ್ಟ್ ಮತ್ತು ರಾಷ್ಟ್ರೀಯ ಸಮಗ್ರತಾ ಮಂಡಳಿಗೆ ನೀಡಿದ ವಚನದ ಭಂಗವನ್ನು ಹಾಗೂ ಪೂರ್ವಯೋಜಿತವಾಗಿದ್ದ , ಪೂರ್ವಾಭ್ಯಾಸವನ್ನೂ ಕಂಡಿದ್ದ ಬಾಬ್ರಿ ಮಸೀದಿ ಧ್ವಂಸವನ್ನು ಮರೆಮಾಚಲು ಬರೆದ ಲೇಖನಗಳಿವು. ಅದರಲ್ಲಿ ಜಾತ್ಯಾತೀತತೆ ಕುರಿತ ಬಿಜೆಪಿಯ ನಿರ್ವಚನೆಯ ಮೂರು 'ಕರಾರು'ಗಳನ್ನು ಮುಂದಿಟ್ಟಿದ್ದರು. ಈಗ ಮತ್ತೆ ಕರೆ ಬಂದಿರುವುದರಿಂದ ಅವನ್ನು ಇಲ್ಲಿ ಪರೀಕ್ಷಿಸೋಣ.

1. 'ಮತೀಯ ಪ್ರಭುತ್ವದ ನಿರಾಕರಣೆ': ಇದರ ಅರ್ಥ ಪ್ರಜಾಪ್ರಭುತ್ವವನ್ನು ಮಾತ್ರವಲ್ಲ, ಜಾತ್ಯಾತೀತತೆಯನ್ನೂ ಎತ್ತಿ ಹಿಡಿಯಬೇಕು ಎಂದು. ಆದರೆ 'ಹಿಂದುಸ್ತಾನ, ಪ್ರಾಚೀನ ಹಿಂದೂ ರಾಷ್ಟ್ರವಾಗಿ, ಬೇರೇನೂ ಆಗದೆ, ಕೇವಲ ಹಿಂದೂ ರಾಷ್ಟ್ರವಾಗಿಯೇ ಇರುತ್ತದೆ, ಇರಲೇಬೇಕು. ರಾಷ್ಟ್ರೀಯ ಅಂದರೆ ಹಿಂದೂ ಜನಾಂಗ, ಧರ್ಮ, ಸಂಸ್ಕೃತಿ ಮತ್ತು ಭಾಷೆಗೆ ಸೇರದವರೆಲ್ಲ ಸಹಜವಾಗಿ ನಿಜವಾದ ರಾಷ್ಟ್ರೀಯ ಜೀವನದ ಎಲ್ಲೆಯ ಹೊರಗುಳಿಯುತ್ತಾರೆ' ಎಂದು ಗುರೂಜಿ ಗೋಲ್ವಾಲ್ಕರ್ ಹೇಳಿದ್ದಾರಲ್ಲ! ಅದನ್ನು ಇಂದು ಬಿಜೆಪಿ ತಿರಸ್ಕರಿಸುತ್ತದೆಯೇ?

ಇದುವರೆಗೂ ಬಿಜೆಪಿ ಇದು ತನ್ನ ಅಭಿಪ್ರಾಯವಲ್ಲ ಎಂದು ಹೇಳಿಲ್ಲ. ಅಂದರೆ ಇದರ ಅರ್ಥ ಒಂದೇ-ಜನಗಳ ಹಾದಿ ತಪ್ಪಿಸುವುದು ಹಾಗೂ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ನ ನಿಜವಾದ ಆಶಯವನ್ನು ಮರೆಮಾಚುವುದು.


ಇದು ಯಾವ ಪರಿಯ ಜಾತ್ಯಾತೀತತೆ?

2. 'ಯಾವುದೇ ಧರ್ಮದ ನಂಬಿಕೆಯ ಭೇದ ಭಾವವಿಲ್ಲದೆ ಎಲ್ಲಾ ನಾಗರಿಕರು ಸಮಾನರು': ಇಲ್ಲಿಯೂ ಅವರು ನಮ್ಮ ದೇಶದಲ್ಲಿ ಬದುಕಿರುವ ಎಲ್ಲಾ ಹಿಂದುವೇತರರ ಬಗ್ಗೆ ಗೋಲ್ವಾಲ್ಕರ್ ಹೇಳಿರುವುದನ್ನು ತಿರಸ್ಕರಿಸಿ, ಹಿಂದೂಗಳಂತೆಯೇ ಭಾರತದ ಶ್ರೀಮಂತ ಪರಂಪರೆಯನ್ನು ಪಡೆದಿರುವ ಇವರೆಲ್ಲರೂ ಕಾನೂನಬದ್ಧ ನಾಗರಿಕರು ಎಂದು ಒಪ್ಪಿಕೊಂಡರೆ ಮಾತ್ರ ಬಿಜೆಪಿ ಈ ಪರಿಕಲ್ಪನೆಗೆ ಬದ್ಧವಾಗಿದೆ ಎನ್ನಬಹುದು. ಹಿಂದುವೇತರರು 'ತಮ್ಮ ಭಿನ್ನತೆಗಳನ್ನು ತ್ಯಜಿಸದಿದ್ದರೆ, ರಾಷ್ಟ್ರದ ಧರ್ಮ, ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸದಿದ್ದರೆ ಮತ್ತು ರಾಷ್ಟ್ರೀಯ ಜನಾಂಗದಲ್ಲಿ ತಮ್ಮನ್ನು ವಿಲೀನಗೊಳಿಸಿಕೊಳ್ಳದಿದ್ದರೆ ಅವರಿಗೆ ರಾಷ್ಟ್ರೀಯ ಜೀವನದಲ್ಲಿ ಸ್ಥಾನವಿಲ್ಲ. ಅವರು ತಮ್ಮ ಜನಾಂಗೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳನ್ನು ಇಟ್ಟುಕೊಳ್ಳುವ ವರೆಗೂ ಅವರು ವಿದೇಶೀಯರಲ್ಲದೆ ಬೇರೇನೂ ಆಗಲಾರರು' ಎಂದೂ ಗೋಲ್ವಾಲ್ಕರ್ ಹೇಳಿದ್ದರು. ಇಂದು ಬಿಜೆಪಿ ಇದನ್ನು ಪರಿತ್ಯಜಿಸುತ್ತದೆಯೇ?

3.'ನಂಬಿಕೆ ಮತ್ತು ಆರಾಧನೆಯ ಸಂಪೂರ್ಣ ಸ್ವಾತಂತ್ರ್ಯ': ಬಾಬ್ರಿ ಮಸೀದಿಯನ್ನು ಅತ್ಯಂತ ಬೇಜವಾಬ್ದಾರಿಯಿಂದ ಧ್ವಂಸ ಮಾಡಿದ ಮರುದಿನ ಮುಂಜಾನೆಯೇ ಬಿಜೆಪಿಯ 'ಕಾದಿರುವ ಪ್ರಧಾನಮಂತ್ರಿ' ಅದರ ಜಾತ್ಯಾತೀತತೆಯ ಪರಿಕಲ್ಪನೆಯ ಈ ನೀತಿಬೋಧೆಯನ್ನು ಮುಂದಿಟ್ಟದ್ದು ನಿಜಕ್ಕೂ ಒಂದು ವ್ಯಂಗ್ಯ! 2002ರ ಗುಜರಾತ್ ಹತ್ಯಾಕಾಂಡದ ನಂತರ, ಈಗ ಮತ್ತೆ ಆರೆಸ್ಸೆಸ್‌ನ ಮೂಲಕ್ಕೆ ಹಿಂತಿರುಗುವ ಸಂದರ್ಭದಲ್ಲಿ ರಾಜನಾಥ ಸಿಂಗ್‌ರವರು ಇದನ್ನು ಪುನರುಚ್ಚರಿಸುವ ಸಾಧ್ಯತೆ ಬಹಳ ಕಡಿಮೆ. ಹಾಗೇನಾದರೂ ಅವರು ಹೇಳಿದರೆ, ಮತ್ತೆ ಬಿಜೆಪಿಯು ಗೋಲ್ವಾಲ್ಕರ್ ಈ ಹಿಂದೆ ಹೇಳಿದ್ದನ್ನು ತಿರಸ್ಕರಿಸಿದರೆ ಮಾತ್ರ ಅದು ಈ ಬಗ್ಗೆ ಪ್ರಾಮಾಣಿಕವಾಗಿದೆ ಎನ್ನಬಹುದು.

'ಹಿಂದುಸ್ತಾನದಲ್ಲಿನ ವಿದೇಶಿ ಜನಾಂಗಗಳು ಒಂದೋ ಹಿಂದೂ ಸಂಸ್ಕೃತಿಯನ್ನು ಮತ್ತು ಭಾಷೆಯನ್ನು ಅಂಗೀಕರಿಸಬೇಕು, ಹಿಂದೂ ಧರ್ಮವನ್ನು ಗೌರವಿಸುವುದನ್ನು, ಪೂಜ್ಯ ಭಾವನೆಯಿಂದ ಕಾಣುವುದನ್ನು ಕಲಿಯಬೇಕು, ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಅಂದರೆ ಹಿಂದೂ ರಾಷ್ಟ್ರದ ವೈಭವೀಕರಣವಲ್ಲದೆ ಬೇರೆ ಯಾವುದೇ ಭಾವನೆಯನ್ನು ಹೊಂದಿರಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಹಿಂದೂ ಜನಾಂಗದಲ್ಲಿ ವಿಲೀನಗೊಳ್ಳಬೇಕು, ಇಲ್ಲವೇ ಹಿಂದೂ ರಾಷ್ಟ್ರಕ್ಕೆ ಅಧೀನವಾಗಿ, ಯಾವುದನ್ನೂ ಕೇಳದೆ, ಯಾವ ವಿಶೇಷ ಹಕ್ಕುಗಳಿಗೂ ಅರ್ಹರಾಗದೆ, ವಿಶೇಷ ವರ್ತನೆ'ಯನ್ನಂತೂ ನಿರೀಕ್ಷಿಸದೆ, ನಾಗರಿಕ ಹಕ್ಕುಗಳನ್ನೂ ನಿರೀಕ್ಷಿಸದೆ ಈ ದೇಶದಲ್ಲಿ ಉಳಿಯಬಹುದು" ಎಂದಿದ್ದರು ಗೋಲ್ವಾಲ್ಕರ್. ಇದನ್ನು ತಾನೀಗ ಒಪ್ಪುವುದಿಲ್ಲ ಎಂದು ಬಿಜೆಪಿ ಹೇಳಬಲ್ಲುದೇ?

ಅರ್ಥಹೀನ ಕರೆಯಾಗುತ್ತದೆ

ಶ್ರೀಯುತ ಅಡ್ವಾಣಿಯವರು ಹದಿನಾರು ವರ್ಷಗಳ ಹಿಂದೆ ಜಾತ್ಯಾತೀತತೆ ಕುರಿತಂತೆ ಬಿಜೆಪಿಯ ಪರಿಕಲ್ಪನೆಯೆಂದು ಪ್ರಸ್ತುತ ಪಡಿಸಿದ್ದ ಈ ಅಂಶಗಳನ್ನು ಕುರಿತಂತೆ ತನ್ನ ನಿಲುವಿನ ಬಗ್ಗೆ ಅಸಂದಿಗ್ಧವಾಗಿ ಸ್ಪಷ್ಟೀಕರಣ ನೀಡದಿದ್ದರೆ ಜಾತ್ಯಾತೀತತೆಯ ಮೇಲೆ ಒಂದು ರಾಷ್ಟ್ರೀಯ ಚರ್ಚೆ ನಡೆಯಬೇಕು ಎನ್ನುವ ಅದರ ಕರೆ ಅರ್ಥಹೀನವಾಗುತ್ತದೆ.

ಆಗ ಶ್ರೀಯುತ ಅಡ್ವಾಣಿಯವರು ಜಾತ್ಯಾತೀತತೆಯ ತನ್ನ ನಿರೂಪಣೆಯಲ್ಲಿ ಅದರ ವೈಜ್ಞಾನಿಕ ನೆಲೆಯನ್ನು, ಅಂದರೆ, ಧರ್ಮವನ್ನು ರಾಜಕೀಯ ಮತ್ತು ಪ್ರಭುತ್ವದಿಂದ ಪ್ರತ್ಯೇಕಿಸಬೇಕು ಎಂಬ ಅಂಶವನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದರು. ಇದರಲ್ಲಿ ಜಾಣತನವೇನೂ ಇಲ್ಲ. ಇದನ್ನು ಅನುಸರಿಸದ ವರೆಗೆ, ವಿಭಿನ್ನ ನಂಬಿಕೆಗಳಿಗೆ ಸೇರಿದ ಎಲ್ಲಾ ಜನಗಳಿಗೆ ಸಮಾನ ಹಕ್ಕುಗಳಿವೆ ಎಂಬ ಅರ್ಥದಲ್ಲಿ ಜಾತ್ಯಾತೀತತೆಯ ಆಚರಣೆ ಸಾಧ್ಯವಿಲ್ಲ. ಇದರಿಂದ ತಪ್ಪಿಸಿಕೊಳ್ಳುವ ಮೂಲಕ ಶ್ರೀಯುತ ಅಡ್ವಾಣಿಯವರು ಗೋಲ್ವಾಲ್ಕರ್‌ರವರ ವಿಚಾರವನ್ನೆ ಪ್ರತಿಧ್ವನಿಸಿದ್ದಾರೆ. 'ನಮಗೆ ಪ್ರತಿಯೊಂದು ವೈಯಕ್ತಿಕ, ಸಾಮಾಜಿಕ ಮತ್ತು ರಾಜಕೀಯ ಕ್ರಿಯೆಯೂ ಧರ್ಮದ ಆದೇಶ..........ಅಷ್ಟೇಕೆ, ಸ್ವತಃ ರಾಜಕೀಯವೂ...............ಧರ್ಮದ ಒಂದು ಆದೇಶವಾಗಿ ಮತ್ತು ಇಂತಹ ಆದೇಶಗಳಿಗೆ ಅನುಸಾರವಾಗಿ ಪರಿಶೀಲಿಸಬೇಕಾದ ಮತ್ತು ಅನುಸರಿಸಬೇಕಾದ ಒಂದು ಸಣ್ಣ ಅಂಶವಾಗುತ್ತದೆ. ಹಿಂದುಸ್ತಾನದಲ್ಲಿನ ನಾವು ಇಂತಹ ಒಂದು ಧರ್ಮ(ಹಿಂದೂಧರ್ಮ)ವನ್ನು ಜೀವಿಸುತ್ತಿದ್ದೇವೆ' ಎಂದು ಗೋಲ್ವಾಲ್ಕರ್ ಹೇಳಿದ್ದರು.

ಧರ್ಮ ಎಂಬುದು ಪ್ರತಿಯೊಬ್ಬ ವ್ಯಕ್ತಿ ತನ್ನ ದೇವರೊಂದಿಗೆ ಹೊಂದಿರುವ ಪೂಜ್ಯ ಪವಿತ್ರ ಖಾಸಗೀ ಸಂಬಂಧ. ವಿಭಿನ್ನ ಧರ್ಮಗಳನ್ನು ನಂಬುವವರು ಅಥವಾ ನಾಸ್ತಿಕರಿಗೆ ಸಮಾನ ಹಕ್ಕುಗಳು ಇರದಿದ್ದರೆ ಜಾತ್ಯಾತೀತತೆ ಇರುವುದಿಲ್ಲ. ನಾಸ್ತಿಕನಾದ ಚಾರ್ವಾಕ ಕೂಡಾ ಸರಸ್ವತೀ ವಂದನಾದಷ್ಟೇ ಭಾರತೀಯ ಪರಂಪರೆಯ ಅಭಿನ್ನ ಭಾಗ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹೀಗೆ ಜಾತ್ಯಾತಿತತೆಯ ಮೇಲೆ ಒಂದು ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂಬ ಬಿಜೆಪಿಯ ಕರೆಯೂ ಕೂಡಾ ಅದರ ಕೋಮುವಾದಿ ಅಜೆಂಡಾವನ್ನು ಪ್ರತಿಪಾದಿಸುವ ಒಂದು ಕಪಟೋಪಾಯ. ತಾನು ಆರೆಸ್ಸೆಸ್‌ನ ರಾಜಕೀಯ ಅಂಗ, ಧರ್ಮವನ್ನು ಚುನಾವಣಾ ಲಾಭಕ್ಕೆ ಬಳಸುವ ಒಂದು ಹುಸಿ-ಹಿಂದೂ ಪಕ್ಷ ಎಂದು ಬಿಜೆಪಿ ಮತ್ತೊಮ್ಮೆ ದೃಢಪಡಿಸಿದೆ. ○

ಹಾಸನ

ಹಾಸನ ಜಿಲ್ಲೆಯಲ್ಲಿ ರಸಗೊಬ್ಬರ ಕೊರತೆ, ಅದರಿಂದುಂಟಾಗಿರುವ ಪರಿಸ್ಥಿತಿ ಏನು?

ರಸಗೊಬ್ಬರ ಸಮಸ್ಯೆ ಯಾರು ಹೊಣೆ?

ಜಿಲ್ಲೆಯಲ್ಲಿ ರಸಗೊಬ್ಬರ ಸಮಸ್ಯೆ ಉಂಟಾಗಿದೆ. ರೈತರು ಪ್ರತಿಭಟನೆ ನಡೆಸಿದ್ದಾರೆ. ಗೋದಾಮುಗಳಿಗೆ ನುಗ್ಗಿ ರಸಗೊಬ್ಬರವನ್ನು ಹೊತ್ತೊಯ್ಯುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಕಿಸಾನ್ ಪಾರ್ಟಿ ಎಂದ ಯಡಿಯೂರಪ್ಪ ಇವರುಗಳ ಮೇಲೆ ಗೂಂಡಾ ಕಾಯ್ದೆ ಬಳಸುವುದಾಗಿ ಎಚ್ಚರಿಕೆ ನೀಡಿ ತಮ್ಮ ರೈತ ಪ್ರೇಮ ಮೆರೆದರು.

ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಎಲ್ಲಾ ಸೇರಿ 3,60,000 ಹೆಕ್ಟೇರ್ ಕೃಷಿ ಭೂಮಿಯಿದೆ. ಅದರಲ್ಲಿ 45,000 ಹೆಕ್ಟೇರ್ ಆಲೂಗಡ್ಡೆ ಬೆಳೆಗೆ ಪ್ರಶಸ್ತ ಭೂಮಿಯಿದೆ. ನಿರೀಕ್ಷೆಗೂ ಮೀರಿ ಜಿಲ್ಲಾದ್ಯಾಂತ ಮುಂಗಾರು ಬಿದ್ದ ಕಾರಣ ಅವಧಿಗೆ ಮೊದಲೇ ಬಿತ್ತನೆ ಆರಂಭಿಸಿದ ರೈತರು ರಸಗೊಬ್ಬರಕ್ಕೆ ಮುಗಿಬಿದ್ದಿದ್ದಾರೆ. ಹಗಲು-ರಾತ್ರಿ ಎನ್ನದೆ ಗಂಡಸರು-ಹೆಂಗಸರು ಎಲ್ಲಾ ಗೋದಾಮು ಪ್ರಾಥಮಿಕ ಕೃಷಿ ಪತ್ತಿನ ಸೊಸೈಟಿಗಳಲ್ಲಿ ಜನತಾ ಬಜಾರ್, ಖಾಸಗಿ ಡೀಲರ್‌ಗಳಲ್ಲಿ ರೈತರು ಜಮಾಯಿಸುತ್ತಿದ್ದಾರೆ.

ಜಿಲ್ಲೆಗಾಗಿ ಕಳೆದ ವರ್ಷ ರಸಗೊಬ್ಬರದ ಕೊರತೆ ಕಾಡಲಿಲ್ಲ. ನಿರೀಕ್ಷೆಗೂ ಮೀರಿ ಗೊಬ್ಬರ ವಿತರಣೆ ಮಾಡಲಾಗಿತ್ತು. 108,390 ಟನ್ ವಿತರಣೆಯ ಗುರಿ ಇದ್ದರೂ ನಿರೀಕ್ಷೆ ಮೀರಿ 112,755 ಟನ್ ವಿತರಣೆ ಮಾಡಲಾಗಿತ್ತು. ಫ್ಯಾಕ್ಟ ಕಂಫನಿಯ 20:20:0 ಗೊಬ್ಬರವನ್ನು 26.950ಟನ್ ವಿತರಣೆ ಮಾಡಲಾಗಿತ್ತು. ಆದರೆ ಈ ವರ್ಷ ಅದರ ಅರ್ಧವನ್ನೂ ವಿತರಿಸಲಾಗಿಲ್ಲ.

ವ್ಯವಸಾಯ ಎಂದರೆ ಮುಂಗಾರಿನ ಜೊತೆಗೆ ಜೂಜಾಟ ಎಂದು ನಮಗೆಲ್ಲ ಪಾಠ ಹೇಳಿದ ಮೇಲೆ ಅಧಿಕಾರಿಗಳು ಮುಂಗಾರಿನ ಮುಂಚೆಗೆ ಬೀಜಗೊಬ್ಬರ ವಿತರಿಸಲು ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾಗಿತ್ತು. ಬೇಸಾಯ ಎಂದರೆ ವಾರಕ್ಕೊಂದು ಬಾರಿ ಫೈಲ್ ತಳ್ಳುವುದು ಅಂತ ತಿಳಿಕೊಂಡ್‌ರೇನೂ!

ಜಿಲ್ಲೆಗೆ ಬೇಕಾಗಿರುವ ಗೊಬ್ಬರದ ಪ್ರಮಾಣ 1,28,000 ಟನ್ ಅದರಲ್ಲಿ ಯೂರಿಯಾ 35,280 ಟನ್, ಡಿಎಪಿ 14,640 ಟನ್, ಎಂ.ಓ.ಪಿ.21,216 ಟನ್, 19:19:19 -3,360 ಟನ್, 15-15-15-4, 800 ಟನ್ 10:26:26:-1,800 ಟನ್, 16:20:0 - 3,240 ಟನ್, 20-20-32,156 ಟನ್, 17-17-17-3,240 ಟನ್, ಅಮೋನಿಯಾ, ಸಲ್ಫೇಟ್ 960 ಟನ್ ಸಿಎಎಸ್ 48 ಟನ್, ಅಮೋನಿಯಾ ಕ್ಲೋರೈಡ್ 480 ಟನ್, ರಾಕ್ ಫಾಸ್‌ಫೇಟ್ 2400 ಟನ್, ಎಸ್‌ಓಪಿ 300 ಟನ್, ಬೇಕು.

ಈ ಬಾರಿ ಸಮಸ್ಯೆ ಏನು ಅಂದರೆ ಒಟ್ಟು ಸರಬರಾಜು ಆಗಬೇಕಾದ ಗೊಬ್ಬರದಲ್ಲಿ ಅರ್ಧ ಮಾತ್ರ ಸರಬರಾಜಾಗಿದೆ. ವಿಶೇಷವಾಗಿ ಆಲೂ ಬೆಳೆಗೆ ಎಸಿಟಿ ಕಂಪನಿಯ 20:20 ಬಳಸಿ ರೂಢಿ. ಇದಕ್ಕೆ ಪರ್ಯಾಯ ರೂಢಿಯಲ್ಲಿ ಇಲ್ಲ. ಹಾಗಾಗಿ ಬೆಳೆಗೆ ಕೇಳಿದ ಬೆಲೆ ಅಂತೂ ಇಲ್ಲ. ಕೇಳಿದ ಗೊಬ್ಬರವಾದರೂ ಬೇಡ್ವ. 1,28,000 ಟನ್, ಬೇಕಾದರೆ 15,318 ಟನ್, ಮಾತ್ರ ಪೂರೈಕೆ ಮಾಡಿದರೆ ಹೇಗೆ. ಹೆಚ್ಚು ರೈತರು ಕಡಿಮೆ ಗೊಬ್ಬರ ಸಿಕ್ಕಿತು. ಇಲ್ಲವೋ ಮುನ್ನಾಲ್ಕು ದಿನಗಳಲ್ಲಿ ಗೊಬ್ಬರ ಬರುತ್ತೆ. ಬರುತ್ತೆ ಬರುತ್ತೆ... ಅಂತ ಕೇಳಿ ಕೇಳಿ ಗೊಬ್ಬರದ ದಾಸ್ತಾನು ಇರುವ ಕಡೆ ರೈತರು ನುಗ್ಗಿ ಗೊಬ್ಬರ ಚೀಲಗಳನ್ನು ಹೊತ್ತೊಯ್ದರು.

ವಿಜಯದ ಉನ್ಮಾದದಲ್ಲಿದ್ದ ಯಡಿಯೂರಪ್ಪ ದಿಲ್ಲಿಯಲ್ಲಿ ನಮ್ಮದು ಕಿಸಾನ್ ಪಾರ್ಟಿ ಎಂದು ಘೋಷಿಸಿ ದಿಲ್ಲಿ ಪತ್ರಕರ್ತರನ್ನು ಖುಷಿಗೊಳಿಸಿದರು. ರೈತರು ರಸಗೊಬ್ಬರಕ್ಕಾಗಿ ಲಾಠಿ ರುಚಿ ನೋಡುತ್ತಿದ್ದುದು ತಿಳಿಯಲಿಲ್ಲ. ಬೆಂಗಳೂರಿಗೆ ಬಂದಾಗ ನೆನಪಿಸಲಾಯಿತು. ಹೇಳಿದ್ದು ಅಪ್ಪಟ ಫ್ಯೂಡಲ್ ರೀತಿ. ಗೂಂಡಾ ಕಾಯ್ದೆ ಬಳಸಿ ಮಟ್ಟಹಾಕಿ ಅಂತ. ಹೀಗಿದೆ ಕಿಸಾನ್ ಪಾರ್ಟಿ ಮುಖ್ಯಮಂತ್ರಿಯ ಆದೇಶ. ಶುರು ನೋಡಿ ಗೊಬ್ಬರ ಕೂಡಿ ಅಂದರೆ ಲಾಠಿ ಬೀಸಿದರು.



ಇಪ್ಪೊಂದು ಪರದಾಟ ಏಕೆ?

ಅನುಕೂಲ ವಾತಾವರಣ ಇರುವುದು ಆಲೂಗಡ್ಡೆ ಬೆಳೆಗೆ ಅತಿಶೀವಾದರೆ ಕರಗಿಹೋಗುತ್ತದೆ. ಮೃಗಶಿರ ಮಳೆಯು ಸೋನೆಮಳೆ ವಾತಾವರಣ ಶೀತ ಹಿಡಿಯುತ್ತಿದೆ. ಅಷ್ಟರೊಳಗೆ ಮೊಳಕೆ ಮೇಲೆ ಬರಲೇಬೇಕು ಇಲ್ಲವಾದರೆ ಗೊಬ್ಬರದ ಶಕ್ತಿಗೆ ಮೊಳಕೆಯು ನೆಲದೊಳಗೆ ಕರಗಿ ಹೋಗುತ್ತದೆ. ಇದರಿಂದ ಆರಂಭದಿಂದಲೇ ರೈತ ಕಷ್ಟ ಪಡಬೇಕಾಗುತ್ತದೆ. ಯಾವ ಬ್ಯಾಂಕುಗಳು ಬೆಳೆ ಸಾಲ ನೀಡುತ್ತಿಲ್ಲ. ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕೆ ಹಣವನ್ನು ಮೀಟರ್ ಬಡ್ಡಿಗೆ ತರಬೇಕು. ಅನಿವಾರ್ಯವಾಗಿ ಅವರನ್ನೇ ಆಶ್ರಯಿಸಬೇಕು. ಇಲ್ಲವೇ ಮಾರವಾಡಿಗಳ ಬಳಿ ಗಿರವಿ, ಸಾಲ ತರಬೇಕು. ಆರಂಭದಲ್ಲೇ ಬೆಳೆ ಹಾಳಾದರೆ ಮತ್ತೆ ಬೆಳೆ ಮಾಡಲು, ಗಿರವಿ ಇಡಲು ಏನೂ ಉಳಿದಿರುವುದಿಲ್ಲ, ಹಾಗಾಗಿ ರೈತರು ಮತ್ತೆ ಮೀಟರ್ ಬಡ್ಡಿಗೆ ಹಣ ತರಬೇಕು. ವಸೂಲಿಗಾರರ ಆ ಕಿರುಕುಳಕ್ಕೆ ಒಂದೇ ಮನೆಯ 8 ಜನರು ಆತ್ಮಹತ್ಯೆಗೆ ಶರಣಾಗಿದ್ದ ಇತಿಹಾಸ ಮರುಕಳಿಸುತ್ತದೆ. ಒಳ್ಳೇ ಫಸಲು ಬಂದರೂ ಕೂಡ ಒಳ್ಳೆ ಬೆಲೆ ಸಿಗುವ ಸಾಧ್ಯತೆಗಳಿಲ್ಲ ಹಾಗಾಗಿ ಬೆರಗು ಸಿಕ್ಕಿದಾಗಲೋ ಬಿತ್ತನೆ ಮಾಡಬೇಕು. ಇದು ಫೈಲ್‌ಗಳ ಮಧ್ಯೆ ತೂಕಡಿಸುವ ಅಧಿಕಾರಿ ವರ್ಗಕ್ಕೆ ತಿಳಿಯುವುದಿಲ್ಲ.

ಇನ್ನೊಂದು ಮುಂದೆ ಗೊಬ್ಬರ ಸಿಗುವ ಅಸಂಭವತೆ. ಉದಾ: ಹಾಸ್ಟೆಲ್‌ಗಳಲ್ಲಿ ಕಡಿಮೆ ಅನ್ನ ಮಾಡಿ ಬಡಿಸಲು ಆರಂಭಿಸಿದಾಗ ಕುಳಿತಲ್ಲೆ ಇದ್ದರೆ ಅನ್ನ ಸಿಗುವುದಿಲ್ಲ ಎನಿಸಿ ವಿದ್ಯಾರ್ಥಿಗಳ ಸಿಕ್ಕಷ್ಟು ಬಾಚಿಕೊಳ್ಳುವ ರೀತಿಯಲ್ಲಿ ಮಾಡಲಾಗುತ್ತಿತ್ತು. ಅದೇ ರೀತಿಯಲ್ಲಿ ರೈತರಿಗೆ ಮಾಡಲಾಗಿತ್ತು.

ಏನ್ ಮಾಡಬಹುದಿತ್ತು?

ಯಡಿಯೂರಪ್ಪ ಅವರ ಬಳಗ, ಕೃಷಿ ಇಲಾಖೆಯ ಅಧಿಕಾರಿಗಳು 'ನನ್ನೊಳಗಿನ ಹಾಡು ಕ್ಯೂಬಾ' ಪುಸ್ತಕವನ್ನು ಓದಬೇಕು, ಕ್ಯೂಬಾದಲ್ಲಿ ಆರೋಗ್ಯ ವ್ಯವಸ್ಥೆಯ ಬಗ್ಗೆ ತಿಳಿದಿರಬೇಕು. ಪ್ರತಿ ಕುಟುಂಬಕ್ಕೂ ಒಂದು ಆರೋಗ್ಯ ಡೈರಿ ಇಟ್ಟು ಆ ಕುಟುಂಬದ ಆರೋಗ್ಯದ ವಾರ್ಷಿಕ ವರದಿಯು ಅದರಲ್ಲಿರುತ್ತದೆ. ಅದರ ಆಧಾರದ ಮೇಲೆ ಆ ಕುಟುಂಬಕ್ಕೆ ಮುನ್ನೆಚ್ಚರಿಕೆ ಕ್ರಮವಹಿಸಿ ಆ ಕುಟುಂಬದ ಆರೋಗ್ಯ ರಕ್ಷಣೆ ಮಾಡಲಾಗುತ್ತದೆ. ಅದೇ ರೀತಿಯಲ್ಲಿ ಕಳೆದ ವರ್ಷದ ಬೇಡಿಕೆ ಆಧಾರದಲ್ಲಿ ಈ ವರ್ಷವೂ ಪೂರ್ವಯೋಜಿತವನ್ನು ಎಲ್ಲಾ ಸಿದ್ಧತೆಗಳನ್ನೂ ಕೃಷಿ ಇಲಾಖೆ ಮಾಡಿಕೊಳ್ಳಬೇಕಾಗಿತ್ತು.

ರೈತರು ಬೆಳೆ ಸಾಲ, ಬೆಳೆ ವಿಮೆ ಹಾಗೂ ಬೀಜ ಗೊಬ್ಬರದ ಸಮರ್ಪಕ ವಿತರಣೆ ಹಾಗೂ ಬೆಲೆ ಸ್ಥಿರ ನಿಧಿ, ವೈಜ್ಞಾನಿಕ ಬೆಲೆ ನಿಗದಿ, ಎಪಿಎಂಸಿ ಮೂಲಕವೇ ಮಾರಾಟ ಹಾಗೂ ದಲ್ಲಾಳಿಗಳ ನಿಯಂತ್ರಣ ಜೊತೆಗೆ ಬಹುಮುಖ್ಯವಾಗಿ ಕೃಷಿಯ ಮೇಲೆ ಹೆಚ್ಚಿನ ಸಾರ್ವಜನಿಕ ಹೂಡಿಕೆಯನ್ನು ಮಾಡುವಂತೆ ಸರ್ಕಾರವನ್ನು ಒತ್ತಾಯಿಸಬೇಕು.

- ಲಿಂಗರಾಜು ಬಿ.ಎಸ್. ಹಾಸನ

ಕಟ್ಟಡ ಕಾರ್ಮಿಕರ ಸಮಾವೇಶ ಮತ್ತು ಗುರುತಿನಚೀಟಿ ವಿತರಣೆ ಸಮಾರಂಭ




ಸಾಮಾಜಿಕ ಭದ್ರತೆಗಾಗಿ ಕಟ್ಟಡ ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮದ ಕಾರ್ಡ್ ವಿತರಣೆ ಸಮಾರಂಭ ಮತ್ತು ಕಾರ್ಮಿಕರ ಸಮಾವೇಶ ಬೆಂಗಳೂರಿನ ಕಮಲಾನಗರದ 8ನೇ ಕ್ರಾಸ್‌ನಲ್ಲಿರುವ ಕುವೆಂಪು ರಂಗಮಂದಿರದಲ್ಲಿ ನಡೆಯಿತು. ಸಮಾರಂಭದಲ್ಲಿ ಕಾರ್ಡು ವಿತರಣೆಯನ್ನು ಸಿಐಟಿಯು ವಿನ ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಕೆ.ಎನ್.ಉಮೇಶ್ ರವರು ಮಾಡಿದರು. ಅವರು ಮಾತನಾಡುತ್ತ ಕಟ್ಟಡ ಕಾರ್ಮಿಕರು ಸಂಘಟಿತರಾಗುವ ಬಗ್ಗೆ ಒತ್ತಿ ಹೇಳಿದರು. ಸರ್ಕಾರದ ಕಲ್ಯಾಣಮಂಡಲಿಯಿಂದ ಸೌಲಭ್ಯಗಳನ್ನು ಪಡೆಯುವ ಬಗ್ಗೆ ವಿವರಣೆ ನೀಡಿದರು. ಸಮಾವೇಶದಲ್ಲಿ ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಸಂಚಾಲಕರಾದ ಕಾಂ.ಎಸ್.ಶಂಕರ್‌ರವರು ಹಾಜರಿದ್ದು ಬೆಂಗಳೂರು ಹಿಂದೆ, ಕೈಗಾರಿಕೆಯಲ್ಲಿ ವಸ್ತು ಉತ್ಪಾದನೆಯಾಗಿ ಆ ವಸ್ತುಗಳು ವಿತರಣೆಯಾಗುವ ಮೂಲಕ ಆರ್ಥಿಕ ಚಲನೆ ನಡೆಯುತ್ತಿದ್ದರೆ ಈಗ ಬೆಂಗಳೂರಿನ ಮುಖ್ಯ ಉತ್ಪಾದನೆ ಕಟ್ಟಡ ನಿರ್ಮಾಣ ಕೈಗಾರಿಕೆಯಾಗಿದೆ. ಈ ಕೈಗಾರಿಕೆಯಲ್ಲಿ ಶೇಕಡ 70ರಷ್ಟು ಜನ ಹೊರ ರಾಜ್ಯಗಳಿಂದ ಮತ್ತು ಹೊರ ಜಿಲ್ಲೆಗಳಿಂದ ಬಂದು ದುಡಿಯುತ್ತಿರುವ ಕಾರ್ಮಿಕರು. ಈ ಕಾರ್ಮಿಕರನ್ನು ಸಂಘಟಿಸಿ ಕಲ್ಯಾಣ ಮಂಡಳಿಯ ಸೌಲಭ್ಯಗಳನ್ನು ಕೊಡಿಸುವ ಬಗ್ಗೆ ಸೌಲಭ್ಯಗಳನ್ನು ಹೆಚ್ಚಿಸಲು ಕಾರ್ಮಿಕರನ್ನು ಸಂಘಟಿಸಬೇಕಾಗಿದೆ. ಕಟ್ಟಡ ನಿರ್ಮಾಣ ಮಾಡುವಾಗ ಅಪಘಾತವಾಗದಂತೆ ರಕ್ಷಣೆ ನೀಡುವಲ್ಲಿ ಕಟ್ಟಡ ನಿರ್ಮಾಣಗಾರರು ಗಮನಹರಿಸದ ಕಾರಣ ಅಫಘಾತ ಹೆಚ್ಚುತ್ತಿದೆ. ಈ ಬಗ್ಗೆ ಕಾರ್ಮಿಕರು ಸಂಘಟಿತರಾಗಿ ಪ್ರಶ್ನೆ ಮಾಡಬೇಕು ಎಂದರು.

ಸಭೆಯಲ್ಲಿ 150 ಕ್ಕೂ ಹೆಚ್ಚು ಜನ ಕಾರ್ಮಿಕರು ಹಾಜರಿದ್ದರು. ಸಭೆಯಲ್ಲಿ ಹೊಸ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ವೀರಮಣಿ ಕಾರ್ಯದರ್ಶಿಯಾಗಿ ಪಾರ್ಥಿಭನ್ ರನ್ನು ಆಯ್ಕೆ ಮಾಡಲಾಯಿತು.

ವರದಿ : ಎಸ್.ಶಂಕರ್

ಮತ್ತೆ 123



ಭಾರತ -ಅಮೆರಿಕಾ ನಾಗರಿಕ ಪರಮಾಣು ವ್ಯವಹಾರವನ್ನು ಮತ್ತೆ ಸುದ್ದಿಗೆಳೆಯುವ ಪ್ರಯತ್ನ ಆರಂಭವಾಗಿದೆ. ಈ ವ್ಯವಹಾರವನ್ನು ಕುದುರಿಸದಿದ್ದರೆ ಭಾರತದ ವಿದ್ಯುತ್ ಪೂರೈಕೆಗೆ ದೊಡ್ಡ ಅಡ್ಡಿ ಬರಲಿದೆ ಎಂಬ ಹಳೆಯ ತರ್ಕದೊಂದಿಗೆ, ಚೀನಾಕ್ಕೆ ಅನುಕೂಲ ವಾಗಲೆಂದು ಎಡಪಕ್ಷಗಳು ಇದನ್ನು ವಿರೋಧಿಸುತ್ತಿವೆ ಎಂಬ ಆರೋಪಗಳನ್ನು ಈಗ ಮಾಡಲಾಗುತ್ತಿದೆ. ಇಂಥವರು ಅಮೆರಿಕನ್ ಆಳರಸರ ಕೃಪಾಕಟಾಕ್ಷ ಗಿಟ್ಟಿಸುವ ಭರದಲ್ಲಿ ವಿಶ್ವ ರಾಜಕೀಯದಲ್ಲಿ ಭಾರತ ತನ್ನ ವಿಶಿಷ್ಟ ಸ್ಥಾನವನ್ನು ಕಳಕೊಳ್ಳುವ ಅಪಾಯವನ್ನು ಕಡೆಗಣಿಸುತ್ತಾರೆ.

ಅಮೆರಿಕಾ ಕೃಪೆಗೆ ಪ್ರಧಾನಿಗಳ ಕಾತರವೇಕೆ?

ನಮ್ಮ ದೇಶದಲ್ಲಿನ ಕೆಲವು ಸ್ಥಾಪಿತ ಹಿತಾಸಕ್ತಿಗಳು ಮತ್ತೆ ಭಾರತ-ಅಮೆರಿಕಾ ನಾಗರಿಕ ಪರಮಾಣು ವ್ಯವಹಾರದ ಪರವಾಗಿ ಗುಲ್ಲೆಬ್ಬಿಸಲು ಆರಂಭಿಸಿದ್ದಾರೆ. ವಿಶ್ವದಲ್ಲೆಲ್ಲಾ ತೈಲ ಬೆಲೆಗಳು ಗಗನಕ್ಕೆ ಏರುತ್ತಿರುವ ಹಿನ್ನೆಲೆಯಲ್ಲಿ ಅವರ ಹಳೆಯ ತರ್ಕಗಳಿಗೆ ಹೊಸ ರೂಪ ಕೊಡುವ ಪ್ರಯತ್ನ ನಡೆದಿದೆ, ಈ ವ್ಯವಹಾರವನ್ನು ವಿರೋಧಿಸುವವರು ಭಾರತ ತನ್ನ ವಿದ್ಯುತ್ ಪೂರೈಕೆಯನ್ನು ಹೆಚ್ಚಿಸುವಲ್ಲಿ ಅಡ್ಡಿಯಾಗುತ್ತಿದ್ದಾರೆ ಎಂದು ಮತ್ತೆ ಆಪಾದಿಸಲಾಗುತ್ತಿದೆ.

ಕೆಲವು ಸಂಗತಿಗಳನ್ನು ಗಮನಿಸೋಣ. ಭಾರತ ಈಗ 127 ಗಿಗಾವಾಟ್ ವಿದ್ಯುತ್ ಉತ್ಪಾದಿಸುತ್ತಿದೆ. ಈಗಿನ ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ)ದ ಬೆಳವಣಿಗೆ ದರದಲ್ಲಿ 2016-17ರ ವೇಳೆಗೆ ಇದು 337 ಗಿಗಾವಾಟ್‌ಗೆ ಏರಬೇಕು. ಇದು ಸಾಧ್ಯವಾಗದಿದ್ದರೆ ಭಾರತದ ಅಭಿವೃದ್ಧಿಯ ಓಟ ಕುಂಠಿತಗೊಳ್ಳುತ್ತದೆ. ಇದು ನಿಜ. ಈ ಬಗ್ಗೆ ಯಾರದ್ದೂ ತಕರಾರು ಇರಲು ಸಾಧ್ಯವಿಲ್ಲ. ಆದರೆ ಪರಮಾಣು ಶಕ್ತಿಯ ವಿಸ್ತರಣೆ ಮಾತ್ರವೇ ಇದಕ್ಕೆ ಪರಿಹಾರವೇ? ಇದಕ್ಕಿಂತ ಉತ್ತಮ, ಪರಿಣಾಮಕಾರಿಯಾದ ದಾರಿ ಬೇರೆ ಇಲ್ಲವೇ ಇಲ್ಲವೇನು? ಇವು ಈಗಾಗಲೆ ಹಲವು ಬಾರಿ ಕೇಳಿರುವ ಪ್ರಶ್ನೆಗಳು. ಇದಕ್ಕೆ ಅವರ ಬಳಿ ಹೊಸ ಉತ್ತರಗಳೇನೂ ಇಲ್ಲ.

ಏಕೈಕ ಪರಿಹಾರ ಅಲ್ಲ

2006ರಲ್ಲಿ ದೇಶದಲ್ಲಿ ಪರಮಾಣು ಶಕ್ತಿಯ ಉತ್ಪಾದನೆ 3.9 ಗಿಗಾವಾಟ್-ಇದು ಒಟ್ಟು ವಿದ್ಯುತ್ ಉತ್ಪಾದನೆಯ 3ಶೇ. ಮಾತ್ರ. ಅಮೆರಿಕಾದೊಂದಿಗೆ ಈ ವ್ಯವಹಾರವನ್ನು ಒಪ್ಪಿಕೊಂಡರೂ 2016ರ ವೇಳೆ ಪರಮಾಣು ಶಕ್ತಿಯ ಉತ್ಪಾದನೆ ಹೆಚ್ಚೆಂದರೆ 20 ಗಿಗಾವಾಟ್‌ಗೆ ಏರಬಹುದಷ್ಟೇ ಎಂದು ಅಂದಾಜು ಮಾಡಲಾಗಿದೆ. ಇದು ಆಗಿನ ಅಂದಾಜು ಉತ್ಪಾದನೆಯ 6ಶೇ. ಮಾತ್ರ. ಹೀಗಿರುವಾಗ ಇದು ಏಕೈಕ ಪರಿಹಾರ ಹೇಗಾದೀತು?

ಪರಮಾಣು ಶಕ್ತಿ ಅಗ್ಗದ ಪರಿಹಾರವೇ? ಅದೂ ಅಲ್ಲ. ವಾಸ್ತವವಾಗಿ ಇದು ಅತೀ ವೆಚ್ಚದಾಯಕ ಪರಿಹಾರ! ಈಗಾಗಲೇ ನಮ್ಮ ಓದುಗರಿಗೆ ತಿಳಿದಿರುವಂತೆ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಗೆ ಹೋಲಿಸಿದರೆ ಇದರ ವೆಚ್ಚ ಒಂದೂವರೆ ಪಟ್ಟು ಹೆಚ್ಚು. ಅನಿಲ ಆಧಾರಿತ ಉತ್ಪಾದನೆಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು ವೆಚ್ಚದಾಯಕ. ಜಲವಿದ್ಯುತ್ ಕೂಡಾ ಪರಮಾಣು ಶಕ್ತಿಗೆ ಹೋಲಿಸಿದರೆ ಬಹಳ ಅಗ್ಗವಾಗುತ್ತದೆ.

ಅಂದರೆ ವಿದ್ಯುತ್ ಉತ್ಪಾದನೆ ಹೆಚ್ಚಿಸಲಿಕ್ಕೆ ಇದು ಅತ್ಯುತ್ತಮ ಮಾರ್ಗವೂ ಅಲ್ಲ. ಭಾರತದಲ್ಲಿ ಕಲ್ಲಿದ್ದಲಿನ ಅಪಾರ ಭಂಡಾರವಿದೆ. ಭಾರತದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ತಾಪ ಶಕ್ತಿಯದ್ದೇ ಪ್ರಮುಖ ಪಾತ್ರವಿರುತ್ತದೆ ಎಂದು ಯೋಜನಾ ಆಯೋಗವೇ ಹೇಳಿದೆ. ಇನ್ನು, ಜಲವಿದ್ಯುತ್ತಿನ ಸಾಧ್ಯತೆ 150 ಗಿಗಾವಾಟ್ ಎಂದು ಅಂದಾಜು ಮಾಡಲಾಗಿದೆ. 2006ರ ವೇಳೆಗೆ ಇದರಲ್ಲಿ ಬಳಸಿರುವುದು 33 ಗಿಗಾವಾಟ್ ಮಾತ್ರ. ಅಲ್ಲದೆ ನೆರೆಯ ಭೂತಾನ್ ಮತ್ತು ನೇಪಾಳದಿಂದ 55ಸಾವಿರ ಮೆಗಾವಾಟ್ ಆಮದು ಮಾಡಿಕೊಳ್ಳಬಹುದು. ಈ ಜಲವಿದ್ಯುತ್ ಸಾಮರ್ಥ್ಯವನ್ನು ಪರಮಾಣು ಶಕ್ತಿಯ ಉತ್ಪಾದನೆಯ ಅರ್ಧದಷ್ಟು ಖರ್ಚಿನಲ್ಲಿ ಬಳಸಿಕೊಳ್ಳಬಹುದು. ಇದರಿಂದ ವಿದ್ಯುತ್ ಉತ್ಪಾದನೆಯ ಜತೆಗೆ ಪ್ರತಿ ವರ್ಷ ಸಾವಿರಾರು ಜೀವಗಳನ್ನು ಬಲಿ ತೆಗೆದುಕೊಳ್ಳುವ ಪ್ರವಾಹದ ಪ್ರಕೋಪಗಳನ್ನೂ ತಡೆಯಬಹುದು.

ಏಕೆ ಈ ಆತುರ?

ಹೀಗೆ, ಭಾರತ-ಅಮೆರಿಕ ಪರಮಾಣು ವ್ಯವಹಾರ ಭಾರತದ ವಿದ್ಯುತ್ ಆವಶ್ಯಕತೆಗಳನ್ನು ಪೂರೈಸಲು ಅನಿವಾರ್ಯ ಎಂಬ ವಾದಕ್ಕೆ ಗಟ್ಟಿ ನೆಲೆಯೇನೂ ಇಲ್ಲ. ಆದರೂ ಈ ವಾದವನ್ನು ಏಕೆ ಹೂಡಲಾಗುತ್ತಿದೆ, ಅದರಲ್ಲೂ ಕಾರ್ಪೊರೇಟ್ ವಲಯ ಏಕೆ ಈ ಬಗ್ಗೆ ಕಾತುರವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ಈ ವ್ಯವಹಾರ ಕುದುರಿದರೆ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳಿಗೆ ಪರಮಾಣು ರಿಯಾಕ್ಟರುಗಳ ಸಾವಿರಾರು ಕೋಟಿ ರೂಪಾಯಿಗಳ ಆರ್ಡರುಗಳು ಸಿಗುತ್ತವೆ. ಆ ಕಂಪನಿಗಳ ಬಾಲ ಹಿಡಿದಿರುವ ಭಾರತದ ಕಂಪನಿಗಳಿಗೂ ಇದರಲ್ಲಿ ಪಾಲಿನ ನಿರೀಕ್ಷೆಯಂತೂ ಇದೆ. ಅಮೆರಿಕಾದಲ್ಲೇ ಕಳೆದ ಮೂರು ದಶಕಗಳಿಂದ ಹೊಸ ಪರಮಾಣು ರಿಯಾಕ್ಟರುಗಳನ್ನು ನಿರ್ಮಿಸಿಲ್ಲ ಎಂಬುದನ್ನು ನೆನಪಿಸಿಕೊಳ್ಳಿ. ಹಾಗಿರುವಾಗ ಅಮೆರಿಕಾದ ಆರ್ಥಿಕ ಹಿತಾಸಕ್ತಿಗಳನ್ನು ಪೂರೈಸಲು ನಾವು ಈ ಒಪ್ಪಂದಕ್ಕೆ ಸಹಿ ಹಾಕಬೇಕೇ? ಪರಮಾಣು ಶಕ್ತಿಯ ಉತ್ಪಾದನೆಗೆ ಮಾಡುವ ಖರ್ಚನ್ನೇ ಜಲ, ತಾಪ. ಅನಿಲ ವಿದ್ಯುತ್ ಮತ್ತು ಸ್ವಚ್ಛ ಹಾಗೂ ನವೀಕರಿಸಬಹುದಾದ ಸೌರಶಕ್ತಿ ಮುಂತಾದವುಗಳಿಗೆ ಖರ್ಚು ಮಾಡಿದರೆ ಭಾರತ ಎಷ್ಟೋ ಹೆಚ್ಚು ಪಟ್ಟು ವಿದ್ಯುತ್ ಉತ್ಪಾದಿಸಬಹುದು. ಅದು ಬಿಟ್ಟು ಭಾರತವನ್ನು ಅಮೆರಿಕಾದ ಸಾಮರಿಕ ಜಾಲದಲ್ಲಿ ಸಿಲುಕಿಸುವ, ನಮ್ಮ ಸ್ವತಂತ್ರ ವಿದೇಶಾಂಗ ನೀತಿಗೆ ಕಂಟಕವಾಗುವ ಈ ವ್ಯವಹಾರವನ್ನು ಕುದುರಿಸಲು ಹಾತೊರೆಯುವುದೇಕೆ?

ಬುಡವಿಲ್ಲದ ಆಪಾದನೆ

ಭಾರತದ ಕಾರ್ಪೊರೇಟ್ ವಲಯದ, ದೊಡ್ಡ ಉದ್ದಿಮೆದಾರರ ಸಂಸ್ಥೆ ಫಿಕಿ(ಎಫ್‌ಐಸಿಸಿಐ)ಯ ಮಹಾಕಾರ್ಯದರ್ಶಿ ಡಾ. ಅಮಿತ್ ಮಿತ್ರ ಅಮೆರಿಕಾದೊಡನೆ ಪರಮಾಣು ವ್ಯವಹಾರವನ್ನು ವಿರೋಧಿಸುವವರು ಭಾರತದ ಉನ್ನತಿಯನ್ನು ಬುಡಮೇಲು ಮಾಡುತ್ತಿದ್ದಾರೆ ಎಂದು ಕೂಗಾಡಿದ್ದಾರೆ. ದೇಶದ ಸಾರ್ವಭೌಮತೆಗೆ ಸಂಚಕಾರ ತರುವುದರಿಂದ ಈ ವ್ಯವಹಾರ ಬೇಡ ಎಂದು ಎಡಪಕ್ಷಗಳು ಇದನ್ನು ವಿರೋಧಿಸುತ್ತಿದ್ದರೂ ಚೀನಾದ ಹಿತಾಸಕ್ತಿಗಳಿಗಾಗಿ ಹೀಗೆ ಮಾಡಲಾಗುತ್ತಿದೆ ಎಂಬುದು ಅವರ ಮೇಲೆ ಹಾಕುತ್ತಿರುವ ಆಪಾದನೆ. ಈ ಹಿಂದೆ ಪಾಕಿಸ್ತಾನದಲ್ಲಿ ಭಾರತದ ಹೈಕಮಿಶನರ್ ಆಗಿದ್ದ ಜಿ. ಪಾರ್ಥಸಾರಥಿ ಸಿಪಿಐ(ಎಂ) ಭಾರತವನ್ನು ಚೀನಾದ ಗಿರಾಕಿ ದೇಶವಾಗಿ ಮಾಡುವ ದೃಢನಿರ್ಧಾರ ಮಾಡಿದೆ ಎಂದು ಅಬ್ಬರಿಸಿದ್ದಾರೆ. ಭಾರತದ ಬೇಹುಗಾರಿಕೆ ವ್ಯವಸ್ಥೆಯಲ್ಲಿ ಈ ಹಿಂದೆ ಹಿರಿಯ ಅಧಿಕಾರಿಯಾಗಿದ್ದು ಈಗ ನಿವೃತ್ತರಾಗಿರುವ ಇನ್ನೊಬ್ಬರು ಚೀನಾದ ಆತಂಕಗಳಿಂದ ಪ್ರೇರಿತವಾಗಿ ಸಿಪಿಐ(ಎಂ) ಈ ರೀತಿ ವಿರೋಧಕ್ಕೆ ಇಳಿದಿದೆ ಎಂದಿದ್ದಾರೆ. ಅಷ್ಟೇ ಅಲ್ಲ, ಸಿಪಿಐ(ಎಂ) ಮುಖಂಡರ ಬಲವಂತದಿಂದಾಗಿ ಯುಪಿಎ ಸರಕಾರ 1000 ಚೀನೀ ಇಂಜಿನಿಯರುಗಳಿಗೆ ವೀಸಾಗಳನ್ನು ನೀಡಿದೆ ಎಂದು ಆಪಾದಿಸುವ ಮಟ್ಟಕ್ಕೂ ಹೋಗಿದ್ದಾರೆ! ದೇಶದ ಬೇಹುಗಾರಿಕೆ ವ್ಯವಸ್ಥೆಯಲ್ಲಿ ಇಂತಹ ತಪ್ಪು ಮಾಹಿತಿ ಕೊಡುವ ಅಧಿಕಾರಿಗಳಿರುವಾಗ ಹಂತಕರು ಒಬ್ಬ ಪ್ರಧಾನ ಮಂತ್ರಿಯನ್ನು, ಇನ್ನೊಬ್ಬರು ಮಾಜಿ ಪ್ರಧಾನ ಮಂತ್ರಿಯನ್ನು ಬಲಿತೆಗೆದುಕೊಳ್ಳಲು ಸಾಧ್ಯವಾಗಿರುವುದರಲ್ಲಿ, ಈಗಲೂ ನಾವು ಈ ವ್ಯವಸ್ಥೆಯ ಲೋಪಗಳಿಂದಾಗಿ ಭಾರೀ ಬೆಲೆ ತೆರಬೇಕಾಗಿ ಬರುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅದೃಷ್ಟವಶಾತ್ ಈ ಅಧಿಕಾರಿ ಈಗ ನಿವೃತ್ತರಾಗಿದ್ದಾರೆ.

ಚೀನಾದ ಆದೇಶದಂತೆ ಸಿಪಿಐ(ಎಂ) ಅಮೆರಿಕಾದೊಡನೆ ಪರಮಾಣು ವ್ಯವಹಾರವನ್ನು ವಿರೋಧಿಸುತ್ತಿದೆ ಎಂಬುದು ತರ್ಕಶೂನ್ಯ ಎನ್ನುವುದು ಸಿಪಿಐ(ಎಂ)ನ ಹುಟ್ಟು ಮತ್ತು ಇತಿಹಾಸದ ಸ್ವಲ್ಪವಾದರೂ ಜ್ಞಾನವಿರುವವರಿಗೆ ಅರ್ಥವಾಗುತ್ತದೆ ಸಿಪಿಐ(ಎಂ) ರಚನೆಗೊಂಡು ಸುಮಾರು ಎರಡು ದಶಕಗಳ ವರೆಗೂ ಎರಡೂ ದೊಡ್ಡ ಕಮ್ಯುನಿಸ್ಟ್ ಪಕ್ಷಗಳು ಅಂದರೆ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷ ವಿಭಿನ್ನ ಕಣ್ಣೋಟಗಳಿಂದ ಸಿಪಿಐ(ಎಂ)ನ ಧೋರಣೆಗಳನ್ನು ವಿರೋಧಿಸಿದ್ದವು. ಆದರೆ ಅಂದಿನಿಂದಲೂ ಸದಾ ಸಿಪಿಐ(ಎಂ)ನ ಧೋರಣೆಗಳನ್ನು ನಿರ್ಧರಿಸುತ್ತಿರುವುದು ಭಾರತದ ಮತ್ತು ಇಲ್ಲಿಯ ಜನಗಳ ಹಿತಾಸಕ್ತಿಗಳ ದೃಷ್ಟಿಯಿಂದ ಯಾವುದು ಅದಕ್ಕೆ ಸರಿಯೆನಿಸುತ್ತದೋ ಅದು ಮಾತ್ರ. ಆದ್ದರಿಂದ ಅಮೆರಿಕನ್ ಸಾಮ್ರಾಜ್ಯಶಾಹಿಯ ಎದುರು ಭಾರತದ ಸಾರ್ವಭೌಮತ್ವವನ್ನು ಸಮರ್ಪಿಸಲು ಸಿದ್ಧರಿರುವವರಿಂದ ಇಲ್ಲಿನ ಎಡಶಕ್ತಿಗಳಿಗೆ ದೇಶಪ್ರೇಮದ ಸರ್ಟಿಫಿಕೇಟಿನ ಅಗತ್ಯವಿಲ್ಲ. ಅವರಿಗೆ ನಿಜವಾಗಿಯೂ ಪರಮಾಣು ವ್ಯವಹಾರದ ಬಗ್ಗೆ ಪ್ರಾಮಾಣಿಕ ಚರ್ಚೆ ಬೇಕಿದ್ದರೆ ಇಂತಹ ಬುಡವಿಲ್ಲದ ದೂಷಣೆಗಳ ಮೊರೆ ಹೋಗದೆ ಸಿಪಿಐ(ಎಂ) ಮತ್ತು ಇತರ ಎಡಶಕ್ತಿಗಳು ಎತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಡಲಿ.

ಸ್ಥಾನಮಾನ ಉಳಿಸಿಕೊಳ್ಳಲು

ಭಾರತದ ಪರಮಾಣು ಸಾಮರಿಕ ಸಾಮರ್ಥ್ಯಕ್ಕೆ ಮಿತಿ ಹಾಕಿದರೆ ಅದರಿಂದ ಪಾಕಿಸ್ತಾನ ಮತ್ತು ಚೀನಕ್ಕೆ ಭಾರೀ ಪ್ರಯೋಜನ ದಕ್ಕುತ್ತದೆ ಎಂಬ ವಾದವಿದೆ. ಹಾಗಿದ್ದರೆ ಭಾರತ-ಅಮೆರಿಕಾ ಪರಮಾಣು ವ್ಯವಹಾರ ಕುದುರಿ ಭಾರತದ ಒಟ್ಟು ಸಾಮರಿಕ ಸಾಮರ್ಥ್ಯಕ್ಕೆ ಮಿತಿ ಬಂದರೆ ಅದರಿಂದ ಪ್ರಯೋಜನ ದಕ್ಕುವುದು ಯಾರಿಗೆ? ಅಂದರೆ ಈ ಪರಮಾಣು ಒಪ್ಪಂದವಾಗಬೇಕು ಎನ್ನುವವರೇ ನಿಜವಾಗಿ ಚೀನ ಮತ್ತು ಪಾಕಿಸ್ತಾನದ ಆದೇಶವನ್ನು ಈಡೇರಿಸುತ್ತಿದ್ದಾರೆ ಎಂದೂ ಆಪಾದಿಸಬಹುದಲ್ಲವೇ?

ಈ ಹಿಂದೆ ಹಲವು ಬಾರಿ ಹೇಳಿರುವಂತೆ ಸಿಪಿಐ(ಎಂ) ಮತ್ತು ಇತರರು ಇದನ್ನು ವಿರೋಧಿಸುತ್ತಿರುವುದು ಅದು ನಮ್ಮ ಸಾರ್ವಭೌಮತೆಯನ್ನು ಮೊಟಕುಗೊಳಿಸುತ್ತದೆ, ನಮ್ಮ ಸ್ವತಂತ್ರ ವಿದೇಶಾಂಗ ನೀತಿಗೆ ಅಡ್ಡಿ ತರುತ್ತದೆ, ಜತೆಗೆ ನಮ್ಮ ಅಮೂಲ್ಯ ಸಂಪನ್ಮೂಲಗಳನ್ನು ಪೋಲು ಮಾಡುತ್ತದೆ ಎಂಬ ಕಾರಣಕ್ಕಾಗಿ. 'ನಮ್ಮ ಆಕ್ಷೇಪ 123 ಒಪ್ಪಂದದ ಬಗ್ಗೆ, ಅದು ಅಮೆರಿಕನ್ ಕಾನೂನು ಹೈಡ್ ಆಕ್ಟ್ ಗೆ ಒಳಪಟ್ಟಿದೆ ಎಂಬುದು' ಎಂದು ಯುಪಿಎ-ಎಡಪಕ್ಷಗಳ ಸಮಿತಿಯ ಸದಸ್ಯರಾದ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚುರಿ ಹಾಗೂ ಸಿಪಿಐ ಮುಖಂಡ ಡಿ.ರಾಜಾ ಪುನರುಚ್ಚರಿಸಿದ್ದಾರೆ. ಈ ಆಕ್ಷೇಪಕ್ಕೆ ಉತ್ತರ ಕೊಡುವ ಬದಲು ಅರ್ಥವಿಲ್ಲದ ಕುತರ್ಕಗಳಿಗಿಳಿಯುವುದು ಎಷ್ಟು ಸರಿ? ಅಂತಹವರು ನಿವೃತ್ತಿಯ ನಂತರ ಏನೋ ಹುದ್ದೆಗಳನ್ನು ಗಿಟ್ಟಿಸಿಕೊಳ್ಳಲು, ಸಾಮ್ರಾಜ್ಯಶಾಹಿಯ ಕೃಪಾಕಟಾಕ್ಷಕ್ಕಾಗಿ ಅಥವಾ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭತರಿಸಿ ಅದರಲ್ಲಿ ಪಾಲು ಪಡೆಯಲು ಹೀಗೆ ಮಾಡುತ್ತಿದ್ದಾರೆ ಎಂದೇ ಹೇಳಬೇಕಾಗುತ್ತದೆ.

ಈಗಿನ ಸಂದರ್ಭದಲ್ಲಿ, ಶೀತಲ ಯುದ್ಧದ ಎರಡು ಧ್ರುವಗಳ ಜಾಗತಿಕ ಪರಿಸ್ಥಿತಿ ಮುಗಿದಿರುವಾಗ ಸಹಜವಾಗಿಯೇ ಅಂತರ್ರಾಷ್ಟ್ರೀಯ ಸಂಬಂಧಗಳು ಬಹುಧ್ರುವೀಯತೆಯತ್ತ ಸಾಗಬೇಕು. ಅಮೆರಿಕ ಹೇಗಾದರೂ ಮಾಡಿ ಇದನ್ನು ಬುಡಮೇಲು ಮಾಡಿ ಕೇವಲ ತನ್ನ ಪ್ರಾಬಲ್ಯವಿರುವ ಏಕಧ್ರುವೀಯತೆಯನ್ನು ಹೇರಲು ಪ್ರಯತ್ನಿಸುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತ ತನ್ನ ಜಾಗತಿಕ ಸ್ಥಾನಮಾನವನ್ನು ಉಳಿಸಿಕೊಳ್ಳಬೇಕಾದರೆ, ಅಭಿವೃದ್ಧಿಶೀಲ ದೇಶಗಳ ನಾಯಕನಾಗಿ ಉಳಿಯಬೇಕಾದರೆ ಅದು ಬಹುಧ್ರುವೀಯತೆಯನ್ನು ಪ್ರತಿಪಾದಿಸಬೇಕು. ಏಕಧ್ರುವೀಯತೆಯನ್ನು ಹೇರಲು ಕಟಿಬದ್ಧವಾಗಿರುವ ಅಮೆರಿಕಾದೊಡನೆ ಭಾರತ ಯಾವುದೇ ರೀತಿಯಲ್ಲಿ ಜೊತೆಯಾದರೆ ವಿಶ್ವ ರಾಜಕೀಯದಲ್ಲಿ ಅದರ ವಿಶಿಷ್ಟ ಸ್ಥಾನಮಾನಕ್ಕೆ ಭಾರೀ ಧಕ್ಕೆ ಬರುತ್ತದೆ. ಹೀಗಾಗಬಾರದೆಂಬುದೇ ಅಮೆರಿಕಾದ ಆಂತರಿಕ ಕಾನೂನಿಗೆ ಬದ್ಧವಾದ ಭಾರತ-ಅಮೆರಿಕಾ ನಾಗರಿಕ ಪರಮಾಣು ವ್ಯವಹಾರವನ್ನು ವಿರೋಧಿಸುತ್ತಿರುವವರ ಆಶಯ. ಏಕೆಂದರೆ ಇದು ಭಾರತದ ಮತ್ತು ಭಾರತೀಯರ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು.

ಜನಶಕ್ತಿ ಕನ್ನಡ ವಾರಪತ್ರಿಕೆ

ಜೂನ್ 22, 2008

ಎಚ್ಚರಗೇಡಿ ಬಿಜೆಪಿ ಸರ್ಕಾರಕ್ಕೆ ಮುಗ್ಧ ರೈತರ ಬಲಿ

ಆರ್.ರಾಮಕೃಷ್ಣ

ರೈತನೇ ತನ್ನ ಉಸಿರು ಎನ್ನುವ ಯಡಿಯೂರಪ್ಪ ಸರ್ಕಾರವು ತನ್ನ ಬಲಿಖಾತೆಯನ್ನು ತೆರೆದಿದೆ. ಅದರ ಮೊದಲ ಬಲಿ ಗೊಬ್ಬರ ಕೇಳಿದ ರೈತ ಎನ್ನುವುದು ಕೇವಲ ಆಕಸ್ಮಿಕ ಅಲ್ಲ

ಬಿಜೆಪಿ ಸರ್ಕಾರದ ರಕ್ತಸಿಕ್ತ ಅಧ್ಯಾಯವು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವಾರ ಒಪ್ಪತ್ತಿನಲ್ಲೇ ಆರಂಭವಾಗೇ ಬಿಟ್ಟಿತು. ಹಾವೇರಿಯಲ್ಲಿ ರಸಗೊಬ್ಬರದ ಕೊರತೆ ವಿರುದ್ಧ ಪ್ರತಿಭಟಿಸುತ್ತಿದ್ದ ರೈತ ಸಿದ್ದಲಿಂಗಪ್ಪ ಚೂರಿ ಯಡಿಯೂರಪ್ಪ ಸರ್ಕಾರದ ಗುಂಡೇಟಿಗೆ ಪ್ರಾಣ ಕಳೆದುಕೊಂಡಿದ್ದಾರೆ. ಇನ್ನೂ ನಾಲ್ಕೈದು ಜನ ರೈತರು. ಹೊಟ್ಟೆ, ಕೈ ಕಾಲುಗಳಲ್ಲಿ ಸರ್ಕಾರದ ಉಚಿತ ಗುಂಡೇಟು ತಿಂದು ಆಸ್ಪತ್ರೆಯಲ್ಲಿ ಮಲಗಿದ್ದಾರೆ.

ರೈತನ ಹೆಸರಿನಲ್ಲಿ ಚುನಾವಣೆ ಎದುರಿಸಿ, ರೈತನ ಹೆಸರಲ್ಲೇ ಪ್ರಮಾಣ ವಚನ ಸ್ವೀಕರಿಸಿ ಹೆಗಲ ಮೇಲೆ ಹಸಿರು ಶಾಲು ಹೊದ್ದುಕೊಂಡೇ ಫೋಟೋಗಳಿಗೆಲ್ಲಾ ಫೋಸುಕೊಟ್ಟ ಯಡಿಯೂರಪ್ಪನವರ ಸರ್ಕಾರದ ಪರಿಸ್ಥಿತಿ ಹೇಗಿದೆಯೆಂದರೆ ಗುಂಡು ಹಾರಿಸಿ 4 ದಿನಗಳು ಕಳೆದರೂ ಗುಂಡು ಹಾರಿಸಿದವರು ಯಾರು ಎಂದು ಹೇಳಲು ಸಾಧ್ಯವಾಗಿಲ್ಲ. ಯಾರ ಆದೇಶದ ಮೇಲೆ ಪೋಲೀಸರು ಗುಂಡು ಹಾರಿಸಿದರು? ಉಹೂಂ ಅದನ್ನು ಕೂಡ ಹೇಳಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.!!!

ಯಡಿಯೂರಪ್ಪ ತಮ್ಮನ್ನು ರೈತನ ಮಗ ಎಂದು ಕರೆದುಕೊಳ್ಳುತ್ತಾರೆ. ತಾವು ರೈತ ಹೋರಾಟಗಾರ ಎಂದು ಘೋಷಿಸಿಕೊಳ್ಳುತ್ತಾರೆ. ಯಡಿಯೂರಪ್ಪ ನಿಜವಾಗಿಯೂ ರೈತ ಮಗನೇ ಆಗಿದ್ದರೆ, ಯಡಿಯೂರಪ್ಪ ನಿಜಕ್ಕೂ ರೈತ ಹೋರಾಟಗಾರರೇ ಆಗಿದ್ದರೆ, ಅಧಿಕಾರ ಕೈಗೆ ಸಿಕ್ಕ ಕೂಡಲೇ ಅವರು ಮಾಡಬೇಕಿದ್ದ ಮೊತ್ತ ಮೊದಲು ಕೆಲಸ ರೈತರಿಗೆ ತುರ್ತು ಅಗತ್ಯವಾಗಿದ್ದ ಬಿತ್ತನೆ ಬೀಜ, ರಸಗೊಬ್ಬರ ವ್ಯವಸ್ಥೆ ಮಾಡುವುದಾಗಿತ್ತು.

ರಾಜ್ಯದಲ್ಲಿ ಚುನಾವಣಾ ಫಲಿತಾಂಶ ಪ್ರಕಟಗೊಂಡ ಸಂದರ್ಭಕ್ಕಾಗಲೇ ರಾಜ್ಯದಲ್ಲಿ ರಸಗೊಬ್ಬರದ ಅಭಾವದ ಕಾರಣಕ್ಕಾಗಿ ತತ್‌ಕ್ಷಣ ಅರ್ಥವಾಗುತ್ತಿತ್ತು. ಆದರೆ ಅವರ ಎದೆಯಲ್ಲಿದ್ದುದ್ದೇ ಬೇರೆ. ಬಹುಮತ ಸಾಬೀತು ಮಾಡಿದ ನಂತರ ಮಾತ್ರ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುತ್ತೇನೆ ಎಂದ ರಾಜ್ಯಪಾಲರ ಜೊತೆಗೆ ಅನಗತ್ಯವಾಗಿ ಕ್ಯಾತೆ ತೆಗೆದು ಜಗಳವಾಡಲು ಅವರ ಮನಸ್ಸು ಒಂದೇ ಸಮ ತುಡಿಯುತ್ತಿತ್ತು. ಎಷ್ಟಾದರೂ ರಾಜ್ಯಪಾಲರು ಕೇಂದ್ರ ಸರ್ಕಾರದ ಪ್ರತಿನಿಧಿ ತಾನೆ.

ಹೆತ್ತವಳಿಗೇ ಗೊತ್ತು ಹೆರಿಗೆ ನೋವು

ನಮ್ಮ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ದೆಸೆಯಿಂದಾಗಿ ಮತ್ತು ಪ್ರಾಕೃತಿಕ ಕಾರಣಗಳಿಗಾಗಿ ಹೆಣ್ಣು ಅನುಭವಿಸುವ ನೋವುಗಳು ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂಥದ್ದಲ್ಲ. ಹಾಗೆಯೇ ಈ ದೇಶದ ರೈತನ ನೋವುಗಳು ಕೂಡ. ಅವನನ್ನು ಕಾಡುವ ತಲ್ಲಣಗಳು ನೂರಾರು.

'ಬೇಸಾಯ - ಮನೆ ಮಂದಿಯಲ್ಲಾ ಸಾಯ' ಅನ್ನೋ ಮಾತು ಜಾಗತೀಕರಣ ಅನ್ನೋದು ನಮ್ಮಲ್ಲಿ ಪ್ರವಾಹ, ಬೆಳೆಗಳಿಗೆ ರೋಗ, ಕಳಪೆ ಬೀಜ, ಕಳಪೆ ಔಷಧಿ... ಇವೆಲ್ಲಾ ತೊಂದರೆಗಳನ್ನು ಮೀರಿ ಏನಾದರೂ ಅಷ್ಟಿಷ್ಟು ಬೆಳೆ ಕೈಗೆ ಬಂದರೂ ಬೆಲೆ ಕುಸಿತ...., ಮತ್ತೇನೋ. ಒಟ್ಟು ಆತಂಕದಲ್ಲೇ ಇಡೀ ಬದುಕು. ಬದುಕೇ ಅನಿಶ್ಚಿತತೆ.

ಇಂತಹ ಪರಿಸ್ಥಿತಿಯಲ್ಲಿ ಈ ವರ್ಷ ಮುಂಗಾರು ಪೂರ್ವ ಮಳೆ ಚೆನ್ನಾಗಿ ಆಗಿದ್ದನ್ನು ನೋಡಿ ರೈತರ ಆಸೆ ಚಿಗುರಿತು. ಹೊಲ ಹದ ಮಾಡಿಕೊಂಡು ರೈತರು ಗೊಬ್ಬರದ ಅಂಗಡಿಗಳಿಗೆ ಬಂದರು. ಕೃಷಿ ಇಲಾಖೆಯೇ ಸಾರುವಂತೆ ಡಿಎಪಿ ಇತ್ಯಾದಿ ಗೊಬ್ಬರವನ್ನು ಬಿತ್ತನೆಯ ಜೊತೆ ಜೊತೆಗೆ ಹಾಕಬೇಕು. ಆಹಾರ ಧಾನ್ಯಗಳ ಬೆಲೆಯೂ ಏರಿಕೆಯಾಗಿರುವಾಗ ಏನಾದರೂ ಬೆಳೆ ಕೈಗೆ ದಕ್ಕಿದರೆ ನಾಲ್ಕು ಕಾಸನ್ನಾದರೂ ನೋಡಬಹುದು ಅಂತ ರೈತರು ಆಸೆಪಟ್ಟಿದ್ದರಲ್ಲಿ ತಪ್ಪೇನಿದೆ. ಗೊಬ್ಬರದ ಅಂಗಡಿಗಳಲ್ಲಿ ರೈತರಿಗೆ ಸಿಕ್ಕಿದ್ದು ಗೊಬ್ಬರವಲ್ಲ ಆಘಾತ. ಗೊಬ್ಬರ ಇಲ್ಲ ಎಂಬ ಬೋರ್ಡು. ಹಲವಾರು ಕಡೆ ವ್ಯಾಪಾರಿಗಳು ದುಬಾರಿ ಹಣ ಕೇಳಿದ್ದಾರೆ. ರೈತರು ಗೊಬ್ಬರ ಇಲ್ಲ ಇದು ಬಾರಿ ಎಂದು ಹತಾಶರಾಗಿ, ಆತಂಕಕ್ಕೆ ಒಳಗಾಗಿದ್ದರೆ, ಅಧಿಕಾರಕ್ಕೆ ಬಂದವರ ಆತಂಕಗಳೇ ಬೇರೆಯಾಗಿದ್ದವು.

ಪ್ರಮಾಣವಚನ ಸ್ವೀಕರಿಸಿ ವಾರ ಕಳೆದರೂ ಖಾತೆ ಹಂಚಿಕೆ ಆಗಲಿಲ್ಲ. ಯಡಿಯೂರಪ್ಪನವರಿಗೆ ತಮ್ಮ ವಿರೋಧಿ ಗುಂಪಿನವರನ್ನು ಯಾರ್ಯಾರನ್ನು ಮಟ್ಟ ಹಾಕಬೇಕು ಅಂತ ಯೋಚನೆಯಾದರೆ ಕೋಟಿ ಸಿಗದವರು ಬೊಬ್ಬೆ ಹೊಡೆಯುತ್ತಾರೆ. ಮೈಸೂರಿನಲ್ಲಿ ಆನೇಕಲ್ ಗದ್ದಲ, ಬಂದ್ ಏನೇನೂ ಅವಾಂತರಗಳು.

ಭಿನ್ನಮತ ಸ್ಫೋಟಿಸುತ್ತದೆ ಯಡಿಯೂರಪ್ಪನವರಿಗೆ ಕುರ್ಚಿ ಅಲುಗಾಡುವುದು ಎಂದರೆ ಅವರ ಗುಂಡಿಗೆಯೇ ಒಡೆದು ಹೋದಂತಾಗುತ್ತದೆ.

ಸಂಕಟ ಬಂದಾಗ ವೆಂಕಟರಮಣ!!!

ಮಠಾಧೀಶರು, ಜಾತಿ ಗುರುಗಳು, ಮನೆದೇವರು ಎಲ್ಲರೂ ನೆನಪಾಗುತ್ತಾರೆ. ಯಡಿಯೂರಪ್ಪನವರಿಗೆ ಗೆಲ್ಲಿಸಲು ನೆರವಾದ ಮಠ ಮಾನ್ಯಗಳದ್ದು ಏನೇನು ಷರತ್ತುಗಳಿವೆಯೋ? ಏನೇನು ಆದೇಶಗಳಿವೆಯೋ ಏನೋ ಯಾರಿಗೆ ಗೊತ್ತು!!! ಪೇಪರ್‌ಗಳಲ್ಲಿ ಟಿ.ವಿ.ಗಳಲ್ಲಿ ನೋಡುವವರಿಗೆ ಕಾಣುವುದು ಮಾತ್ರ ಆಶೀರ್ವಾದ ಪಡೆಯುತ್ತಿರುವ ಚಿತ್ರ.

ರಸಗೊಬ್ಬರಕ್ಕಾಗಿ ರಾಜ್ಯದ ಹಾಸನ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಚಿಕ್ಕಮಗಳೂರು, ಹಾವೇರಿ, ಬೀದರ್ ಮುಂತಾದ ಕಡೆ ಹಾಹಾಕಾರವೆದ್ದಿರುವಾಗ ಯಡಿಯೂರಪ್ಪ ಮಾಡಿದ್ದಾದರೂ ಏನು?

ಅವರ ಎರಡೆಳೆ ನಾಲಿಗೆ ಏನೇನೋ ಮಾತಗಳನ್ನಾಡಿತು. ಒಮ್ಮೆ ಯಾವ ರೈತರು ಆತಂಕಪಡುವ ಅಗತ್ಯವಿಲ್ಲ. ಸಾಕಷ್ಟು ರಸಗೊಬ್ಬರದ

ವಿಜಯೋತ್ಸವ ಸಂಭ್ರಮ



ಕುರ್ಚಿಗೆ ಪೂಜೆ



ಮನೆ ದೇವರಿಗೆ ಶರಣು



ಮುಗಿಯದ ಸಂಭ್ರ





ಮಳೆ ಬಂತು, ನೆಲ ಹದವಾಯ್ತು, ಹಾಸನ



ರಸಗೊಬ್ಬರಕ್ಕೆ ಸಾಲು, ಬೀದರ್



ಗೊಬ್ಬರ ಸಿಗುತ್ತಿಲ್ಲ -ವಿಜಯೋತ್ಸವಕ್ಕೆ ತಡೆ ಹಾಕಿದ ರೈತರು, ದಾವಣಗೆರೆ



...ತರ ಮೇಲೆ ಲಾಠಿ ಪ್ರಹಾರ ಯಡಿಯೂರಪ್ಪನವರ ಪೊಲೀಸರಿಂದ, ದಾವಣಗೆರೆ

ಪ್ರತಿಭಟನೆಗಳು ನಡೆಯುತ್ತಿದ್ದವು. 29 ಸಚಿವರೊಂದಿಗೆ ಮೇ ಮೂವತ್ತಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಪ್ರಮಾಣ ವಚನ ಸ್ವೀಕರಿಸುವ ಕಾಲಕ್ಕಾಗಲೇ ರಸಗೊಬ್ಬರದ ಅಭಾವದಿಂದ ರೈತರು ತಾಳ್ಮೆ ಕಳೆದುಕೊಂಡು ಆಕ್ರೋಶದಿಂದ ಕುದಿಯುತ್ತಿದ್ದರು.

ಎದೆಯಲ್ಲಿದ್ದುದೇ ಬೇರೆ

ಇವರ ಬಾಯಿಮಾತಿನ ರೈತ ಕಾಳಜಿಯ ಕಾಲುಭಾಗವಾದರೂ ಎದೆಯಲ್ಲಿದ್ದಿದ್ದರೆ ಇವೆಲ್ಲಾ ಅವತರಿಸೋದಕ್ಕೆ ಎಷ್ಟೋ ಮೊದಲಿಂದ ರೂಢಿಯಲ್ಲಿದೆ. ಇನ್ನೂ ಉದಾರೀಕರಣ, ಜಾಗತೀಕರಣ ನೀತಿಗಳು ಬಂದ ಮೇಲೆ ಮುಗಿದೇ ಹೋಯಿತು.

ಭಾರತದ ರೈತನ ಬದುಕು ಮಾನ್ಸೂನ್ ಜೊತೆ ಒಂದು ಜೂಜು ಎನ್ನುವ ಮಾತಿದೆ. ಅದು ಜೂಜು ಅಷ್ಟೇ ಅಲ್ಲ. ಅದಕ್ಕಿಂತ ಹೆಚ್ಚೇ ಆಗಿ ಹೋಗಿದೆ. ಸಕಾಲಕ್ಕೆ ಮಳೆ ಬರುವುದೇ ಕಷ್ಟ. ಯಾವಾಗಲಾದರೂ ಮಳೆ ಕೈಕೊಡಬಹುದು. ಇಲ್ಲ ಕೋಟಿ ಸುರಿದು ಗೆದ್ದು ಎಂದ ಧುರೀಣರಿಗೆ 'ಸಂಪದ್ಭರಿತ' ಖಾತೆಗಳನ್ನು ಬಾಚಿಕೊಳ್ಳುವ ಆತುರ. ಅದಕ್ಕಾಗಿ ವಶೀಲಿ ಬಾಜಿ.

ರೆಡ್ಡಿ ಸಹೋದರರು ತಮಗೆ ಗಣಿಖಾತೆ, ಅರಣ್ಯ ಖಾತೆ ಮತ್ತು ಅಂತಹ ದೊಡ್ಡ ದೊಡ್ಡ ಖಾತೆ ಕೊಡಿ, ಅಂತ, ಮತ್ತೆ ಉಪಮುಖ್ಯಮಂತ್ರಿ ಪಟ್ಟ ಕೊಡಿ ಅಂತ ಪಟ್ಟು ಹಿಡಿಯುತ್ತಾರೆ. ಜಗದೀಶಶೆಟ್ಟರ್ ನಾನು ಸ್ಪೀಕರ್ ಆಗಲಾರೆ ಅಂತಾರೆ. ಅವರ ಬೆಂಬಲಿಗರು ಹುಬ್ಬಳ್ಳಿಯಲ್ಲಿ ಬಸ್ ಸುಡುತ್ತಾರೆ. ಮಂತ್ರಿ ಸ್ಥಾನ ದಾಸ್ತಾನು ಇದೆ ಎಂದರು. ಇದನ್ನೇ ಸುಮಾರು ದಿನ ಸಾರಿದರು. ಆದರೆ ಸಮಸ್ಯೆ ತೀವ್ರ ಆಗುತ್ತಾ ನಡೆದಂತೆ ಅವರು ಮಾಡಿದ್ದೇನು. ಪ್ರತಿಭಟನೆಯ ಹಿಂದೆ ರಾಜಕೀಯ ಇದೆ. ರೈತರನ್ನು ದಾರಿ ತಪ್ಪಿಸುತ್ತಿದ್ದಾರೆ ಅಂದರು. ರಸಗೊಬ್ಬರ ಸಿಕ್ಕಿ ಬಿಟ್ಟ ಮೇಲೂ, ಪ್ರತಿಭಟನೆ ನಡೆಸುವಂತೆ ಪ್ರಚೋದಿಸುವುದಕ್ಕೆ ರೈತರೇನು ಬೆರಳು ಚೀಪುವ ಮಕ್ಕಳೇ?

ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದಗೌಡರು ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಭಟನೆಗಳ ಹಿಂದೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಕೇಶವ ಶಿಲ್ಪದಲ್ಲಿ ಏನು ಹೇಳಿದರು?

ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಒಂದೇ ಉಸುರಿಗೆ ಆರೆಸ್ಸೆಸ್ ಆತ್ಮ ಕೇಂದ್ರವಾದ ಕೇಶವ ಕೃಪಕ್ಕೆ ಓಡಿದರು. ಭೇಟಿ ನೀಡಿದ್ದು ಮಾತ್ರವಲ್ಲ ಸಂಘದ ಮಾರ್ಗದರ್ಶನದಲ್ಲೇ ಆಡಳಿತ ನಡೆಸುವುದಾಗಿ ಘೋಷಿಸಿದರು. ಆ ಸಂಘದವರಾದರೂ ಏನು ಮಾರ್ಗದರ್ಶನ ನೀಡಿರಬಹುದು. ರಸಗೊಬ್ಬರ ಕೊರತೆಯಾಗಿದೆ, ಅದನ್ನು ಸರಿಪಡಿಸಿ ಅಂತ ಹೇಳೋದಕ್ಕೆ ಆರೆಸ್ಸೆಸ್‌ನ ಚಡ್ಡಿ ನಾಯಕರಿಗೆ ಬೇಸಾಯದ ಗಂಧ ಗಾಳಿಯಾದರೂ ಗೊತ್ತಿರಬೇಕಲ್ಲ.

ಅವರಾದರೂ ಏನೂ ಹೇಳಿಕೊಟ್ಟಿರಬಹುದು. ಜೆಡಿ(ಯು) ಎಂಬ ಪಕ್ಷವನ್ನು ನುಂಗಿದಂತೆ ಮತ್ಯಾವ ಪಕ್ಷವನ್ನು ನುಂಗಬಹುದು. ಬಾಬಾಬುಡನ್‌ಗಿರಿ ಮತ್ತು ಅಂತಹ ವಿಷಯಗಳನ್ನು ಹೇಗೆ 'ನಿಬಾಯಿಸ' ಬೇಕು ಅಂತ ಹೇಳಿಕೊಟ್ಟಿರಬಹುದೇ? ಗುಜರಾತ್ ಮಾದರಿ 'ಅಭಿವೃದ್ಧಿ' ಸಾಧಿಸುವುದು ಹೇಗೆ ಅಂತ ಯಡಿಯೂರಪ್ಪನ ಕಿವಿಯಲ್ಲಿ ಏನಾದರೂ 'ಗಾಯಿತ್ರಿ ಮಂತ್ರ' ಉಸುರಿರಬಹುದು ಅಲ್ಲವೇ?

ಂಗ್ರೆಸ್ ಪಕ್ಷದ ಪಿತೂರಿ ಇದೆ ಅಂತ ೋಷಿಸಿಬಿಟ್ಟರು. ದಕ್ಷಿಣ ಭಾರತದಲ್ಲಿ ಪ್ರಥಮ ಾರಿಗೆ ಅಧಿಕಾರಕ್ಕೆ ಬಂದ ಸಂಭ್ರಮ, ಜಯೋತ್ಸವದ ಭರಾಟೆಯಲ್ಲಿ ಜನತೆಗೆ ಕೊಟ್ಟ ಚನವನ್ನೇ ಮರೆತರು ಯಡಿಯೂರಪ್ಪ, ಅಧಿಕಾರಕ್ಕೆ ದ 24 ಗಂಟೆಯೊಳಗೆ ರೈತರಿಗೆ ಉಚಿತ ವಿದ್ಯುತ್ ತ್ತೇವೆ ಎಂದಿದ್ದ ಯಡಿಯೂರಪ್ಪ ಮೇ 31 ಂದು ಹೇಳುತ್ತಾರೆ "ಮೂರು ತಿಂಗಳು ಕಾಯಿರಿ, ಷಿ ಅಗತ್ಯ ಸೌಲಭ್ಯ, ನೀಡುತ್ತೇವೆ"

ಚ್ಚರಗೇಡಿತನ

ಈ ನಡುವೆ ದೆಹಲಿಯಲ್ಲಿ ನಡೆದ ಬಿಜೆಪಿ ಷ್ಟ್ರೀಯ ಕಾರ್ಯಕಾರಣಿಯಲ್ಲಿ ಬಿಜೆಪಿ ುಖಂಡರು 'ಕರ್ನಾಟಕದಲ್ಲಿ ಬಿಜೆಪಿ .ಎಂದರೆ ಸಾನ್ ಪಕ್ಷ' ಎಂದು ಘೋಷಿಸುವಾಗ ಅತ್ತ ಅರಬ್ಬೀ ಮುದ್ರದಿಂದ ಕೇರಳದ ಮೇಲೆ ಮುಂಗಾರಿನ ೋಡಗಳು ಕರ್ನಾಟಕ ಗಡಿ -ಕೊಡಗಿನತ್ತ ವಿಸಿಬರುತ್ತಿದ್ದವು. ಈ ಬಾರಿ ಮುಂಗಾರು ಬೇಗ ರಲಿದೆ ಎಂದೂ ಎಷ್ಟೋ ತಿಂಗಳ ಮೊದಲೇ ಜ್ಞರು ಸಾರಿದ್ದರು.

ಮುಂಗಾರು ಕರ್ನಾಟಕಕ್ಕೆ ಕಾಲಿಟ್ಟ ದಿನ ಾವಣಗೆರೆಯಲ್ಲಿ ಬಿಜೆಪಿ ವಿಜಯೋತ್ಸವಕ್ಕೆ ೊರಟ್ಟಿದ್ದ ಬಿಜೆಪಿಯ ಮುಖಂಡರನ್ನೂ ಮುತ್ತಿಗೆ ಕಿದ ರೈತರು ದಿಗ್ಬಂಧನ ವಿಧಿಸಿದರು. ಎಂದರೆ ಾರ ಅದ್ಯತೆ ಏನೂ ಅಂತ ಸುಲಭವಾಗಿ ಹಿಸಬಹುದು.

ಜೂನ್ 2ಕ್ಕೆ ಯಡಿಯೂರಪ್ಪ ಪ್ರಧಾನಿಯನ್ನು ೇಟಿ ಮಾಡಿದ್ದಾರೆ. ಅದು 10 ನಿಮಿಷದ ಮಾತುಕತೆ. ತ್ತೇ ನಿಮಿಷದಲ್ಲಿ ಬೆಂಗಳೂರು ವಿಮಾನ ನಿಲ್ದಾಣದ ಷಯ, ಮುಸ್ಲಿಂ ವ್ಯಕ್ತಿಯೊಬ್ಬರಿಗೆ ಸಚಿವ ಸ್ಥಾನ ಟ್ಟಿರುವುದು, (ಅದಕ್ಕಾಗಿ ಯಡಿಯೂರಪ್ಪನ ತಮ್ಮ ನ್ನು ತಾವೆ ತಟ್ಟಿಕೊಂಡಿದ್ದಾರೆ) ಕರ್ನಾಟಕ ಭಿವೃದ್ಧಿಗೆ ಕೇಂದ್ರ ಸಹಾಯ ಮಾಡಬೇಕಾದ ವಿಷಯ ಎಲ್ಲವನ್ನೂ ಮಾತಾಡಿದ್ದಾರೆ.

ಕೊನೆಗೆ ರಸಗೊಬ್ಬರ ಕೂಡಿ ಅಂತ ಒಂಚೂರು ಒಗ್ಗರಣೆ ಹಾಕಿದ್ದಾರೆ. ಎಷ್ಟುಬೇಕು, ಎಷ್ಟುಕೊರತೆ ಇದೆ. ಸಮಸ್ಯೆ ಗಂಭೀರತೆ ಏನು. ಏನು ವಿವರಿಸಿದರು! ಯಡಿಯೂರಪ್ಪನವರಿಗೆ ಗೊತ್ತಿದ್ದರಲ್ಲವೇ ಅವರು ವಿವರಿಸುವುದು.!!!

ಅವರ ಹಿಂದಕ್ಕೆ ರಾಜ್ಯಪಾಲರ ಆಡಳಿತದಲ್ಲಿ ಕೃಷಿ ಅಧಿಕಾರಿಗಳು ಮಾಡಿರುವುದೂ ಅದನ್ನೇ: ಮುಂಗಾರು, ಮಳೆ 'ರೈತರು' ಕೃಷಿ ಎಲ್ಲವನ್ನೂ ಮರೆತು ನೆಮ್ಮದಿಯಾಗಿದ್ದು ಬಿಟ್ಟರು. ಅವರ್ಯಾರು ಚುನಾಯಿತರೂ ಅಲ್ಲ, ರೈತರ ಹೆಸರಿನಲ್ಲಿ ಪ್ರಮಾಣ ಮಾಡಿದವರೂ ಅಲ್ಲ. ಹಾಗೇ ಮಾಡಿದವರಿಗಾದರೂ ಎಚ್ಚರ ಬೇಡವೇ?

ಆರು ಜನ ಪಕ್ಷೇತರರ ಹಂಗಿನಲ್ಲಿರುವ ಸರ್ಕಾರ ಇದು ಎಂಬ ಸೂಕ್ಷ್ಮ ಎಚ್ಚರವಹಿಸಿದ ಯಡಿಯೂರಪ್ಪ, ವಿರೋಧಪಕ್ಷಗಳ ಮುಖಂಡರಾದ, ಖರ್ಗೆ, ಧರಂ, ದೇವೇಗೌಡ, ಕುಮಾರಸ್ವಾಮಿ, ಬಂಗಾರಪ್ಪ ಮುಂತಾದವರ ಮನೆಗಳಿಗೆ ನುಗ್ಗಿ ಅವರಿಂದ 'ಸಹಕಾರ, ಆಶೀರ್ವಾದ ಬೇಡುತ್ತಿದ್ದರು. ಇದನ್ನೆಲ್ಲಾ ಮಾಡಿಕೊಳ್ಳಲಿ. ಯಾರೂ ಬೇಡಾಂತ ಅಂತಾರೆ. ಮಾಡಬೇಕಾದ ಕೆಲಸವನ್ನು ಅವರು ತುರ್ತಾಗಿ ಮಾಡಲಿಲ್ಲವಲ್ಲ ಎಂಬುದಷ್ಟೇ ಆಕ್ಷೇಪ ಇರುವುದು.

ರೈತರು ನೇಣು ಬಿಗಿದುಕೊಂಡರೆ ಕೇಳುವವರಿಲ್ಲ

ಜೂನ್ 7 ರಂದು ಮಧ್ಯರಾತ್ರಿ ಖಾತೆ ಹಂಚಿಕೆ ಆಗುತ್ತದೆ. ಅದೇ ದಿನ ಹೊಳೆನರಸೀಪುರ ತಾಲ್ಲೂಕಿನ ದಾಸೇಗೌಡನ ಕೊಪ್ಪಲಿನಲ್ಲಿ ಸಣ್ಣ ನಂಜಪ್ಪ ಎಂಬ ರೈತ ಸಾಲಬಾಧೆ ತಾಳದೆ ಸಾವಿಗೆ ಶರಣಾಗುತ್ತಾರೆ. ಮುಖ್ಯಮಂತ್ರಿ, ಮಂತ್ರಿಗಳು ಯಾರಾದರೂ ರೈತರ ಬಗೆಗೆ ಮಾತನಾಡಿದರಾ? ಮನೆಗೆ ಭೇಟಿ ನೀಡಿ ಸಾಂತ್ವಾನ ಹೇಳಿದರಾ? ಉಹುಂ ಎಲ್ಲರೂ ಖಾತೆ ಕ್ಯಾತೆಯಲ್ಲಿಯೇ ಮುಳುಗಿದರು. ಇದು ರೈತ ಪರ ಕಾಳಜಿಯ ಸರ್ಕಾರದ ಕತೆ.

ಜೂನ್ 8 ರಂದು ಏನಾಯ್ತು. ಪಿರಿಯಾಪಟ್ಟಣ ತಾಲ್ಲೂಕಿನ ದೊರೆಕೆರೆ ಗ್ರಾಮದ ರೈತ ತಿಮ್ಮೇಗೌಡ ಸಾಲಬಾಧೆ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ ಇಲ್ಲಿ ಅಧಿಕಾರಸ್ಥರು ಏನು ಮಾಡುತ್ತಾರೆ.

ಕೆ.ಎಸ್. ಈಶ್ವರಪ್ಪನವರಿಗೆ ಜಲ 'ಸಂಪನ್ಮೂಲ' ದೊರೆಯಲಿಲ್ಲ ಅಂತ ಅಸಮಾಧಾನ. ಪಕ್ಷೇತರರಿಗೆ ಸೂಕ್ತ 'ಸಂಪನ್ಮೂಲಭರಿತ' ಖಾತೆ ಸಿಕ್ಕಿಲ್ಲ ಅಂತ ಅಸಮಾಧಾನ. ಅತೃಪ್ತರೆಲ್ಲಾ ಸೇರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡುತ್ತಾರೆ.

ಜೂನ್ 9 ರಂದು ಕೂಡ ರಸಗೊಬ್ಬರದ ಸಮಸ್ಯೆ ಕುರಿತು ಮುಖ್ಯಮಂತ್ರಿ ಕೃಷಿ ಮಂತ್ರಿ ತದ್ವಿರುದ್ಧ ಹೇಳಿಕೆ ಕೊಡುತ್ತಾರೆ. ಸಚಿವರು ರಸಗೊಬ್ಬರ ಕೊರತೆ ಇದೆ ಎಂದರೆ, ಸಿ.ಎಂ. ಇಲ್ಲಾ ಅಂತಾರೆ. ನಂತರ ಮುಖ್ಯಮಂತ್ರಿಗಳಾದರೋ ಒಂದೇ ಬಾರಿ 63 ಜನ ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡುತ್ತಾರೆ. ಹಿಂದಿನ ಸರ್ಕಾರದ ತೀರ್ಮಾನವಾದ ಕುರಿಗಳಿಗೆ ವಿಮೆ ನೀಡುವ ಜನಶ್ರೀ ವಿಮಾ ಯೋಜನೆ ರದ್ದು ಮಾಡುತ್ತಾರೆ. ಇದು ಅವರ ತುರ್ತು ಆದ್ಯತೆ.

ಜೂನ್ 10 ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ರಸಗೊಬ್ಬರ ಕೊರತೆ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದೆ. ಮಧ್ಯಾಹ್ನದ ಹೊತ್ತಿಗಾಗಲೇ ಹಾವೇರಿಯಿಂದ ಬಂದೇ ಬಿಟ್ಟಿತು ಮರಣವಾರ್ತೆ. ರೈತರು ಪೋಲೀಸ್ ವಾಹನದ ಮೇಲೆ ಕಲ್ಲು ತೂರಿದರೆ ಪ್ರತಿಯಾಗಿ ಪೋಲೀಸ್ ಅಶ್ರುವಾಯು ಸಿಡಿಸದೇ, ಗಾಳಿಯಲ್ಲೂ ಗುಂಡು ಹಾರಿಸದೇ ನೇರವಾಗಿ ರೈತರಿಗೆ ಗುಂಡು ಹಾರಿಸಿಬಿಟ್ಟರು. ರಾಜ್ಯ ಬಿಜೆಪಿ ಸರ್ಕಾರದ ಖಾತೆ ತೆರೆಯಿತು!! ಮುಖ್ಯಮಂತ್ರಿಗಳು ಮೃತರ ಕುಟುಂಬದವರನ್ನು ಸಂತೈಸಿಸಲು ತೀರ್ಮಾನಿಸಿದರಾ? ಇಲ್ಲ. ಸಂಜೆ ಪತ್ರಿಕಾ ಗೋಷ್ಠಿಯಲ್ಲಿ 'ಹಾವೇರಿಗೆ ಭೇಟಿ ನೀಡುವ ಯೋಚನೆ ಇಲ್ಲ' ಎನ್ನುತ್ತಾರೆ. ಗೃಹ ಸಚಿವರಾದ ಮೇಲೆ ಬರೀ ಗುಡಿ, ಗುಡಾರ ಗಳಿಗೆ ಭೇಟಿ, ಸನ್ಮಾನ ಸಮಾರಂಭಗಳಲ್ಲಿ ಕಾಲ ಕಳೆದ ಡಾ: ವಿ.ಎಸ್. ಆಚಾರ್ಯರು ಮತ್ತೆ ಹತ್ತು ದಿನಗಳಲ್ಲಿ ರಸಗೊಬ್ಬರ ಪರಿಸ್ಥಿತಿ ಸರಿಯಾಗುತ್ತದೆ ಎನ್ನುತ್ತಾರೆ? ಅವರಿಗೆ ತಮ್ಮ ಗೃಹ ಇಲಾಖೆ ವ್ಯಾಪ್ತಿಯ ಪೋಲಿಸರ ಮೇಲೆ ಯಾವ ಹಿಡಿತವೂ ಇಲ್ಲ. ಸತ್ತವರು ಗುಂಡೇಟು ತಿಂದವರ ಬಗೆಗೆ ಕಾಳಜಿ, ಸಂತಾಪದ ಸೂಚನೆಯೂ ಇವರ ಧ್ವನಿಯಲ್ಲಿಲ್ಲ.

ಯಡಿಯೂರಪ್ಪ ಏನೆಂದರೂ ಗೋಲಿಬಾರ್ ಬಗ್ಗೆ ಗೊತ್ತೇ? "25-30 ವರ್ಷದಲ್ಲಿ ರಸಗೊಬ್ಬರ ಬಿತ್ತನೆ ಬೀಜದ ಕೊರತೆ ಕಾರಣಕ್ಕೆ ಬಸ್ ಬೆಂಕಿ ಹಚ್ಚಿರಲಿಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರು ತರಲು ವ್ಯವಸ್ಥಿತ ಪಿತೂರಿ ನಡೆದಿದೆ" ಅಂತ.

ಪಾಪ ರೈತ ಮುಖಂಡರಾದ ಯಡಿಯೂರಪ್ಪನವರಿಗೆ 1992 ರಲ್ಲಿ ದಾವಣಗೆರೆಯಲ್ಲಿ ಗೊಬ್ಬರದ ವಿಷಯಕ್ಕೆ ಹೋರಾಟ ನಡೆದು ಇಬ್ಬರು ರೈತರು ಪ್ರಾಣ ಕಳೆದುಕೊಂಡಿದ್ದರು ಅನ್ನೋದು ನೆನಪಲ್ಲೇ ಇಲ್ಲ.

ಅದೇನು ಮನಸ್ಸು ಪರಿವರ್ತನೆ ಆಯ್ತೋ ಏನೋ ಯಡಿಯೂರಪ್ಪನವರಿಗೆ. ಇಲ್ಲ ಹೊಸದಾಗಿ ಏನಾದರೂ ಜ್ಞಾನೋದಯ ವಾಯ್ತೋ ಗೊತ್ತಿಲ್ಲ. ಅಂತೂ ರಾತ್ರಿ. ಹೊತ್ತಿಗೆ-ಅವರು ಮಾರನೇ ದಿನ ಹಾವೇರಿಗೆ ಭೇಟಿ ನೀಡಲು ತೀರ್ಮಾನ ಮಾಡುತ್ತಾರೆ.

ಏನು ಮಾಡಬಹುದಿತ್ತು?

ರಾಜ್ಯಪಾಲರೊಂದಿಗೆ ಅನಗತ್ಯ ಕದನಕ್ಕಿಳಿಯದೇ ಅಧಿಕಾರ ಸಿಕ್ಕ ಕೂಡಲೇ ತುರ್ತು ಕ್ರಮ ವಹಿಸಿ ಗೊಬ್ಬರ ಕದ್ದು ಮುಚ್ಚಿ ಇಟ್ಟವರ ಮೇಲೆ ಕ್ರಮ ವಹಿಸಿದ್ದರೆ ಮಂತ್ರಿಗಳು, ಶಾಸಕರು ಮುಖ್ಯಮಂತ್ರಿಗಳು ಪ್ರತಿಭಟನಾಕಾರರ ಬಳಿಗೆ ತೆರಳಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭರವಸೆ ತುಂಬಿದ್ದರೆ ಭ್ರಷ್ಟ ಅಧಿಕಾರಿಗಳ ಬೆನ್ನಿಗೆ ಚಾವಟಿ ಏಟು ಕೊಟ್ಟು ಚುರುಕು ಮುಟ್ಟಿಸಿದ್ದರೆ ಹಾವೇರಿ ಗೋಲಿಬಾರ್ ಆಗುತ್ತಿತ್ತೇ?

11ನೇ ತಾರೀಖು ಸಿದ್ದಲಿಂಗಪ್ಪ ಚೂರಿಯ ತಾಯಿಯನ್ನು ಕಂಡು ಮಾತನಾಡುವಾಗ ಯಡಿಯೂರಪ್ಪ ಗಳಗಳನೆ ಅತ್ತು ಬಿಟ್ಟರಂತೆ. ರಸಗೊಬ್ಬರಕ್ಕೆ ಕೇಂದ್ರ ಸರ್ಕಾರ ಕೊಡಬೇಕಾದ ಸಹಾಯಧನ ಬಿಡುಗಡೆ ಮಾಡಿಲ್ಲ, ಅದರಿಂದಾಗಿ ಉತ್ಪಾದನೆ ಕುಂಠಿತವಾಗಿದೆ. ಹೀಗಾಗಿ ಕೊರತೆ ಎನ್ನುವ ಯಡಿಯೂರಪ್ಪ, ತಮ್ಮ ಸಚಿವರಿಗೆ, ವಾಸ್ತುತಜ್ಞರು, ಜ್ಯೋತಿಷಿಗಳೇ ಬಳಿ ಎಡತಾಕುವುದನ್ನು ಬಿಟ್ಟು ರೈತರ ಬಳಿಗೆ ಹೋಗಿ ಅವರ ಕಷ್ಟ ಕೇಳಿ ಎಂದು ತಾಕೀತು ಮಾಡಬಹುದಿತ್ತು. ಹಾಗಾಗಿದ್ದರೆ ರೈತರು ರೊಚ್ಚಿಗೆದ್ದು ಪೋಲಿಸ್ ವಾಹನಕ್ಕೆ ಕಲ್ಲು ತೂರಾಟ ಮಾಡುವ ಪ್ರಸಂಗ ಬರುತ್ತಿರಲಿಲ್ಲ ಎಂದು ಯಾರು ಹೇಳಬೇಕು.

ಎಂ.ಸಿ.ಉದಾಸಿ ಎಂಬ ಆ ಊರಿನ ಮಂತ್ರಿ ಅಂದು ಜಿಲ್ಲಾ ಕೇಂದ್ರ ಹಾವೇರಿಯಲ್ಲಿಯೇ ಇದ್ದರು. ಪ್ರತಿಭಟನಾಕಾರರನ್ನು ಕೇಳುವವರಿಲ್ಲ. ರೈತರಾದರೂ ಏನು ಮಾಡುತ್ತಾರೆ. ಬದುಕನ್ನೇ ಪಣವಾಗಿ ಕೃಷಿಗೆ ಇಟ್ಟವರಿಗೆ ಸಿಟ್ಟುಬರದೇ ಇರುತ್ತದೆಯೇ?

ಪ್ರತಿಭಟನೆ ನಡೆಸಿ ವಾಪಸ್ ಹೊರಟವರ ಮೇಲೆ ಪೋಲೀಸರೇನೂ ಗುಂಡು ಹೊಡೆದು ಬಿಟ್ಟರು. ಆದರೆ ತತ್‌ಕ್ಷಣ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸುವ ಕೆಲಸವನ್ನಾದರೂ ಮಾಡಿದರಾ? ಮಾಧ್ಯಮದವರು ಸಾರ್ವಜನಿಕರು, ಯಾರನ್ನೂ ಆ ಜಾಗಕ್ಕೆ ಹತ್ತಿರ ಬಿಡದೆ ಓಡಿಸಿದರು. ತಾವೂ ಹತ್ತಿರ ಸುಳಿಯಲಿಲ್ಲ. ಜಿಲ್ಲಾ ಕೇಂದ್ರದಲ್ಲಿ ಒಂದು ಆಂಬುಲೆನ್ಸ್ ಗತಿಯಿಲ್ಲವೇ?

ರೈತರ ಜೀವ ಎಂದರೆ ತರಕಾರಿ ಮಾರುವ ತಳ್ಳು ಗಾಡಿಯ ಮೇಲೆ ತಳ್ಳಿಕೊಂಡು ಹೋಗುವಷ್ಟು ಅಗ್ಗವೇ ಅದು. ಡಿ.ಸಿ., ಎ.ಸಿ., ಎಸ್.ಪಿ, ಎಸ್.ಐ., ಎಎಸ್ಐ, ತಹಶೀಲ್ದಾರ್, ಏನೇನೋ ಹತ್ತಾರು ಹೆಸರಿನ ಅಧಿಕಾರಿಗಳು ಇದ್ದರಲ್ಲ!! ಉಹುಂ ಅವರ್‍ಯಾರಿಗೂ ಪ್ರತಿಭಟನಾ ಸ್ಥಳಕ್ಕೆ ಬರಲು ಪುರುಸೊತ್ತೇ ಇಲ್ಲ ಪಾಪ.

ಮಾತೆತ್ತಿದ್ದರೆ ವಿಡಿಯೋ ಕಾನ್‌ಫರೆನ್ಸ್ ಎನ್ನಲು ಶುರು ಮಾಡಿಕೊಂಡಿರುವ ಮುಖ್ಯಮಂತ್ರಿಗಾದರೂ ಇದನ್ನೆಲ್ಲಾ ಟಿವಿಯಲ್ಲಿ ನೋಡಿ, ಕೇಳಿ ತತ್‌ಕ್ಷಣ ಏನೂ ಮಾಡಬೇಕು ಅನ್ನಿಸಲಿಲ್ಲವೇ?

ಪುರೋಹಿತರ ಓಲೈಕೆ



ಧರ್ಮಸ್ಥಳ ಶ್ರೀ ಭೇಟಿ



ಕೊನೆಗೆ ಕಣ್ಣೀರು





ಅಶ್ರುವಾಯು ಧಾರವಾಡದಲ್ಲಿ



ಖಾತೆ ತೆರೆಯಿತು - ಹಾವೇರಿ

ಕಣ್ಣೀರ ಕೋಡಿ ನೋಡಿ ಮರುಳಾಗಬೇಡಿ

ಕೊನೆಯದಾಗಿ ಒಂದು ಮಾತನ್ನು ಎಲ್ಲರೂ ನೆನಪಿಡಬೇಕು. ಮಂತ್ರಿ ಮಂಡಲ ಸಭೆ ನಡೆಸಿ ಇನ್ನೆಂದೂ ರೈತರ ಮೇಲೆ ಗೋಲಿಬಾರ್ ಮಾಡುವುದಿಲ್ಲ ಎಂದು ತೀರ್ಮಾನಿಸಿದೆಯಂತೆ.

ಇದೇ ಯಡಿಯೂರಪ್ಪ ಇನ್ನೊಂದು ಮಾತನ್ನು ಜಾಣ್ಮೆಯಿಂದ ಹೇಳಿದ್ದಾರೆ. ರೈತರು ಹಿಂಸಾಚಾರ ಮಾಡಿಲ್ಲ. ಕಿಡಿಗೇಡಿಗಳು ಹಿಂಸಾಚಾರ ಮಾಡಿದ್ದಾರೆ. ಕಾನೂನು ಕೈಗೆತ್ತಿಕೊಳ್ಳುವವರನ್ನು ಸುಮ್ಮನೆ ಬಿಡುವುದಿಲ್ಲ ಅಂತಾರೆ ಅವರು. ಪೋಲೀಸ್ ವ್ಯಾನಿಗೆ ಕಲ್ಲು ತೂರಿದ್ದು ಗೊಬ್ಬರದ ಅಂಗಡಿ ಲೂಟಿ ಮಾಡಿದ್ದು, ದಾವಣಗೆರೆ ಬಂದ್ ಮಾಡಿದೆಲ್ಲಾ ರೈತರೇ ಅಂತ ಅವರಿಗೂ ಗೊತ್ತು. ಅವರ ಆಕ್ರೋಶಕ್ಕೆ ಕಾರಣ ಏನೂ ಅಂತ ಗುರುತಿಸದೇ ಜಾಣ್ಮೆಯಿಂದ ಅವರನ್ನು ಕಿಡಿಗೇಡಿಗಳು ಅಂತ ಕರೆದು ಕಿಡಿಗೇಡಿಗಳನ್ನು ಬಗ್ಗು ಬಡೀತೀವಿ ಅಂತ ಹೇಳಿರೋ ಅರ್ಥ, ರೈತರನ್ನು ಬಡೀತೀವಿ ಅಂತಲೇ ಕಣ್ಣೀರು ನೋಡಿ ಮರುಳಾಗಬಾರದು.

ಹಾವೇರಿ ಗೋಲಿಬಾರ್ ವಿರುದ್ಧ ಪ್ರತಿಭಟನೆ

ರಸಗೊಬ್ಬರದ ಅಭಾವ, ಅಸಮರ್ಪಕ ಪೂರೈಕೆಯನ್ನು ಪ್ರತಿಭಟಿಸುತ್ತಿರುವ ರೈತರ ಮೇಲೆ ಗೋಲಿಬಾರ್ ನಡೆಸಿ ಒಬ್ಬ ರೈತನನ್ನು ಕೊಂದು ಹಲವರನ್ನು ಗಂಭೀರ ಸ್ಥಿತಿಗೆ ತಳ್ಳಿರುವ ರಾಜ್ಯ ಬಿಜೆಪಿ ಸರ್ಕಾರದ ಕೃತ್ಯವನ್ನು ಖಂಡಿಸಿ, ಬೆಂಗಳೂರು ಮಹಾತ್ಮಗಾಂಧಿ ಪ್ರತಿಮೆ ಮುಂದೆ ಪ್ರತಿಭಟನಾ ಧರಣಿ ನಡೆಸಲಾಯಿತು.



ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ಎಡಪಕ್ಷಗಳು, ಸರ್ವೋದಯ ಕರ್ನಾಟಕ ಪಕ್ಷಗಳಿಂದ

ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್‌ಪಿಐ, ಕರ್ನಾಟಕ ಸರ್ವೋದಯ ಪಕ್ಷ, ದಲಿತ ಸಂಘರ್ಷ ಸಮಿತಿ, ಮುಂತಾದ ಸಂಘಟನೆ, ಪಕ್ಷಗಳ ಮುಖಂಡರು ಕಾರ್ಯಕರ್ತರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ ರವರು ಮಾತನಾಡಿ ಬಾರಿ ರೈತ ವಿರೋಧಿ ಎಂಬ ಕುಖ್ಯಾತಿ ಗಳಿಸಿದ ಗೂಂಡೂರಾವ್ ಸರ್ಕಾರ ಸಹ ತನ್ನ ಅವಧಿಯ ಕೊನೆಯಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿತು. ಯಡಿಯೂರಪ್ಪ ಸರ್ಕಾರ ಬಂದ ಮೊದಲ ದಿನಗಳಲ್ಲೇ ರೈತರನ್ನು ಕೊಂದ ಸರ್ಕಾರ ಎಂಬ ಹಣೆಪಟ್ಟಿ ಹೊತ್ತುಕೊಂಡಿದೆ ಎಂದರು. ಇಂತಹ ಸರ್ಕಾರ 4-5 ವರ್ಷ ಆಡಳಿತ ಮಾಡಿದರೆ ಏನೆಲ್ಲ ಆಗಬಹುದು ಎಂದು ಆತಂಕ ವ್ಯಕ್ತಪಡಿಸಿದರು. ಈ ಬಾರಿ ಮುಂಗಾರು ಮುಂಚಿತವಾಗಿ ಸುರಿಯುತ್ತಿದೆ. ಈ ಬಗ್ಗೆ ಹವಾಮಾನ ಇಲಾಖೆಯ ಮುನ್ಸೂಚನೆ ಸಹ ಇತ್ತು ಆದರೂ ಗೊಬ್ಬರ, ಬೀಜ ಪೂರೈಕೆಗೆ ಸರಿಯಾದ ಗಮನ ಕೊಡಲಿಲ್ಲ. ಮಂತ್ರಿ ಮಂಡಲ ರಚನೆಯಾದರೂ ಖಾತೆ ಹಂಚಿಕೆ ಮಾಡದೇ ವಿಳಂಬ ಮಾಡಲಾಯಿತು ಎಂದರು.

ಹಿರಿಯ ಸಿಪಿಐ ಮುಖಂಡರಾದ ವೆಂಕಟರಮಣ ಅವರು ಮಾತನಾಡಿ, ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಮಂತ್ರಿ ಮಂಡಳ, ಖಾತೆ ಹಂಚಿಕೆಯ ಗೊಂದಲದಲ್ಲೇ ಮುಳುಗಿ ಕಾಲಹರಣ ಮಾಡಿತು. ರಸಗೊಬ್ಬರ ಬೀಜಗಳ ಪೂರೈಕೆ ಬಗೆಗೆ ಗಮನ ಕೊಡಲಿಲ್ಲ. ಅವ್ಯವಸ್ಥೆ ಪ್ರತಿಭಟಿಸಿದ ರೈತರ ಮೇಲೆ ಗೋಲಿಬಾರ್ ಮಾಡಿದ್ದು ಖಂಡನಾರ್ಹ ಎಂದರು.

ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಮುಖಂಡರಾದ ಕೆ.ಸಿ.ವೆಂಕಟೇಶ ಮಾತನಾಡಿ ರೈತರ ಮೇಲೆ ಗೋಲಿಬಾರ್ ಅನಿರೀಕ್ಷಿತ ವಾರದ್ದೇನಲ್ಲ. ಅದು ನೀರಿಕ್ಷಿತ ಎಂದರು.


ಕೂರುವ ಕುರ್ಚಿಗೆ ಪೂಜೆ ಮಾಡಿದ ಯಡಿಯೂರಪ್ಪನವರು ಈಗ ಬಂದೂಕಿಗೆ ಪೂಜೆ ಮಾಡುವರೇ ಎಂದು ಪ್ರಶ್ನಿಸಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಹಾವೇರಿ ಜಿಲ್ಲಾಧಿಕಾರಿಯು ಗೋಲಿಬಾರ್ ಮಾಡೇ ಇಲ್ಲ ಎಂದಿರುವುದನ್ನು ಖಂಡಿಸಿದರು. ನರಗುಂದ, ನವಲಗುಂದ ರೈತ ಚಳುವಳಿಯು ರಾಜ್ಯದಲ್ಲಿ ಅಂದಿನ ಗೂಂಡೂರಾವ್ ರವರ ಸರ್ಕಾರವನ್ನು ಕೊನೆಗಾಣಿಸಿದ್ದನ್ನು ನೆನಪಿಸಿದ ವಿಜೆಕೆ ನಾಯರ್ ಬಿಜೆಪಿ ಸರ್ಕಾರಕ್ಕೆ ಗೋಲಿಬಾರ್, ಲಾಠಿ ಚಾರ್ಜ್‌ಗಳ ವಿರುದ್ಧ ಎಚ್ಚರಿಕೆ ನೀಡಿದರು.

ದಲಿತ ಸಂಘರ್ಷ ಸಮಿತಿಯ ಸಂಘಟನಾ ಸಂಚಾಲಕರಾದ ವೆಂಕಟೇಶ್ ಮೃತರ ಕುಟುಂಬಕ್ಕೆ 10 ಲಕ್ಷ ಪರಿಹಾರಕ್ಕೆ ಆಗ್ರಹಿಸಿದರು. ಆರ್.ಪಿ.ಐ ಮುಖಂಡ ವೆಂಕಟಸ್ವಾಮಿ ಮಾತನಾಡಿ ಗೋಲಿಬಾರ್‌ಖಂಡಿಸಿದರು.

ರಾಜ್ಯದ ವಿವಿಧೆಡೆ ಪ್ರತಿಭಟನೆ

ಹಾವೇರಿ ಗೋಲಿಬಾರ್ ಖಂಡಿಸಿ ಗುಲ್ಬರ್ಗಾ, ಮೈಸೂರು, ತುಮಕೂರು, ಬಳ್ಳಾರಿಯಲ್ಲಿ ಪ್ರತಿಭಟನೆಗಳು ನಡೆದಿವೆ. ಹೊಸಪೇಟೆಯಲ್ಲಿ ರಸ್ತೆ ತಡೆ ನಡೆದಿದೆ. ಮಂಗಳೂರು, ಪುತ್ತೂರು, ಕೋಲಾರ, ಶ್ರೀನಿವಾಸಪುರ, ಬಾಗೇಪಲ್ಲಿ, ಗುಡಿಬಂಡೆ, ಗದಗಗಳಲ್ಲಿಯೂ ಪ್ರತಿಭಟನೆಗಳು ತೀವ್ರವಾಗಿ ನಡೆದಿವೆ. ಅಂಕೋಲದಲ್ಲಿ ಮುಖ್ಯಮಂತ್ರಿ ಪ್ರತಿಕೃತಿ ದಹನ, ದಾಂಡೇಲಿಯಲ್ಲಿ ಮಾನವಸರಪಳಿ-ರಸ್ತೆ ತಡೆ ನಡೆದಿದೆ. ರಾಯಚೂರು, ಸಿಂಧನೂರು, ಕೊಪ್ಪಳ, ಗಂಗಾವತಿಗಳಲ್ಲೂ ಪ್ರತಿಭಟನೆ ನಡೆದಿದೆ.

ಮಂಡ್ಯದಲ್ಲಿ ರಸ್ತೆ ತಡೆ ಸಿಪಿಐ(ಎಂ), ಕರ್ನಾಟಕ ರಾಜ್ಯ ರೈತ ಸಂಘ ಸೇರಿ ಬೆಂಗಳೂರು-ಮೈಸೂರು ಹೆದ್ದಾರಿ ತಡೆ ನಡೆದಿದೆ. ಈ ಮೇಲಿನ ವಿವಿ[illegible] ಸ್ಥಳಗಳಲ್ಲಿ ಹಲವೆಡೆ ಸಿಪಿಐ(ಎಂ), ಸಿಪಿ[illegible] ಸರ್ವೋದಯ ಕರ್ನಾಟಕ ಪಕ್ಷಗಳು ಸೇರಿ ಪ್ರತಿಭಟ[illegible] ನಡೆಸಿವೆ. ದಲಿತ ಸಂಘಟನೆಗಳಲ್ಲದೆ ಹಲವಾ[illegible] ಸ್ಥಳೀಯ ಸಂಘಟನೆಗಳು ಪ್ರತಿಭಟನೆಯ[illegible] ಪಾಲ್ಗೊಂಡಿವೆ.


ರಸಗೊಬ್ಬರ ಕೊರತೆ ವಿರುದ್ಧ ಬೆಂಗಳೂರಿನಲ್ಲಿ ಪ್ರಾಂತ ರೈತ ಸಂಘ[illegible] ನೇತೃತ್ವದಲ್ಲಿ ಪ್ರತಿಭಟನೆ - ಜೂನ್ 10

ಸಿದ್ದಲಿಂಗಪ್ಪ ಚೂರಿಯ ಮನೆಗೆ ನಿಯೋಗ

ಕರ್ನಾಟಕ ಪ್ರಾಂತ ರೈತ ಸಂಘ, ಸಿಪಿಐ(ಎಂ) ಪಕ್ಷ ಇವುಗಳ ರಾಜ್ಯ ನಿಯೋಗವು ಜೂನ್ 14 ರಂದು ಹಾವೇರಿಗೆ ಭೇಟಿ ನೀಡಿತ್ತು. ಮೃತರ ಮನೆಗೆ ಮತ್ತು ಸಮಾಧಿಗೆ ಭೇಟಿ ನೀಡಿತು. ಕುಟುಂಬ ವರ್ಗ[illegible] ಸಾಂತ್ವನ ಹೇಳಿತು. ನಂತರ ಪತ್ರಿಕಾಗೋಷ್ಠಿ ನಡೆ[illegible] ಕುಟುಂಬಕ್ಕೆ 10 ಲಕ್ಷ, ಗಾಯಗೊಂಡವರಿಗೆ ಹೆಚ್ಚಿ[illegible] ಚಿಕಿತ್ಸೆ ಮತ್ತು ಐದು ಲಕ್ಷ ಪರಿಹಾರಕ್ಕೆ ಹಾಗು ಬಂಧಿಸಿದ ರೈತರ ಬಿಡುಗಡೆಗೆ ಒತ್ತಾಯಿಸಿತು. ನಂತ[illegible] ಧಾರವಾಡದ ಕೇಂದ್ರೀಯ ಜೈಲಿನ[illegible] ಇರಿಸಲಾಗಿರುವ 84 ಜನ ಬಂಧಿತ ರೈತರನ್ನು ಭೇ[illegible] ಮಾಡಿತು. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿರು[illegible] ಗಾಯಾಳುಗಳ ಆರೋಗ್ಯ ವಿಚಾರಿಸಿತ[illegible] ನಿಯೋಗದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿಮಾನ್ಪಡೆ, ಜಿ.ಸಿ.ಬಯ್ಯಾರೆಡ್ಡಿ, ವಿದ್ಯಾರ್ಥಿ ಮುಖ[illegible] ವಿಜಯಕುಮಾರ್ ದೊಡ್ಡಮನಿ, ರೈತ ಮು[illegible] ಸೊಪ್ಪಿನ್, ಫಕೀರಪ್ಪಹೋತನಹ[illegible] ಮುಂತಾದವರಿದ್ದಾರೆ. ಜೂನ್ 19 ರಂದು ಬೃಹತ್ ರ್ಯಾಲಿ ನಡೆಸಲು ತೀರ್ಮಾನಿಸಲಾಗಿದೆ.

ರಸಗೊಬ್ಬರ ಕೊರತೆ: ಅಂಕಿ ಸಂಖ್ಯೆಗಳು ಏನು ಹೇಳುತ್ತಿವೆ

ಅಧಿಕಾರಿಗಳು ಬಿಡುಗಡೆ ಮಾಡಿದ ಅಂಕಿ ಸಂಖ್ಯೆಯಂತೆ ರಾಜ್ಯದಲ್ಲಿ ಕಳೆದ ವರ್ಷ ಏಪ್ರೀಲ್ - ಮೇ ತಿಂಗಳಲ್ಲಿ ಪೂರೈಸಲಾದ ಗೊಬ್ಬರ 2,68,452 ಟನ್‌ಗಳಿದ್ದರೇ 2008 ರಲ್ಲಿ ಇದೇ ಏಪ್ರೀಲ್ - ಮೇ ತಿಂಗಳಿನಲ್ಲಿರುವ ಸರಬರಾಜು 2,91,895 ಟನ್ ಇರುವುದನ್ನು ತಿಳಿಸುತ್ತದೆ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ 23,443 ಟನ್ ಹೆಚ್ಚುವರಿ ಇದೆ. ಕೋಷ್ಟಕ ಗಮನಿಸಿ ಭಾರತ ಸರ್ಕಾರದ ಎಫ್.ಎಂ.ಎಸ್.ನಿಂದ ಪಡೆಯಲಾಗಿದೆ.

ರಸಗೊಬ್ಬರದ ಆಹಾಕಾರ ಶುರುವಾದ ಹಾಸನದಲ್ಲಿ 2007ರ ಈ ಎರಡು ತಿಂಗಳುಗಳಲ್ಲಿ ಇದ್ದುದಕ್ಕಿಂತ ಈ ಬಾರಿ 5000 ಟನ್ ಹೆಚ್ಚು ಬಿಡಲಾಗಿದೆ. ಗೋಲಿಬಾರ್ ನಡೆದ ಹಾವೇರಿ ಜಿಲ್ಲೆಯಲ್ಲಿ ಸುಮಾರು 2820 ಟನ್ ದಾವಣಗೆರೆಯಲ್ಲಿ ಸುಮಾರು 5000 ಟನ್ ಹೆಚ್ಚುವರಿ ಇದೆ. ಹಾಗಿದ್ದರೆ ಇಷ್ಟೆಲ್ಲಾ ದಾಸ್ತಾನಿದ್ದರೂ ಅಭಾವವಿದೆ ಎಂದರೆ ಎಲ್ಲಿ ಅವಿತುಕೊಂಡಿತು, ಯಾವ ಮಳಿಗೆ ಗೋಡಾನು ನುಂಗಿತ್ತು. ಈ ಅಂಕಿ ಅಂಶಗಳು ರಾಜ್ಯ ಸರ್ಕಾರದ ಮಂತ್ರಿಗಳು ನೀಡುವ ವಿವಿಧ ಅಭಿಪ್ರಾಯಗಳಿಗೆ ಯಾವ ಉತ್ತರ ನೀಡುತ್ತವೆ?.

ಮಂತ್ರಿಗಳ ವಿವಿಧ ಅಭಿಪ್ರಾಯಗಮನಿಸಿದರೆ ಸಾಕು, ಎಲ್ಲಾ ಹೇಳಿಕೆಗಳು ಏನನ್ನೋ ಮುಚ್ಚಿಡುವಂತೆ ಕಾಣುತ್ತಿವೆ!.ಅದನ್ನೇ ಈ ಅಂಕಿ ಸಂಖ್ಯೆ ಬಹಿರಂಗ ಪಡಿಸುತ್ತವೆ. ಅದರ ಮೇಲೆಯೇ ರೈತರ ದಾಳಿ ಕೇಂದ್ರೀಕೃತಗೊಂಡಿದ್ದು!?.

- ಯು.ಬಸವರಾಜು

2007- ಹಾಗೂ 2008ರ ಏಪ್ರೀಲ್ - ಮೇ ತಿಂಗಳಲ್ಲಿ ಲಭ್ಯವಿದ್ದ ಗೊಬ್ಬರದ ಜಿಲ್ಲಾವಾರು ವಿವರ (ಟನ್ ಗಳಲ್ಲಿ)

ಕ್ರ.ಸಂ.	ಜಿಲ್ಲೆಗಳು	2007 (ಟನ್‌ಗಳಲ್ಲಿ)			2008 (ಟನ್‌ಗಳಲ್ಲಿ)		
		ಏಪ್ರೀಲ್	ಮೇ	ಒಟ್ಟು	ಏಪ್ರೀಲ್	ಮೇ	ಒಟ್ಟು
1)	ಬಾಗಲಕೋಟೆ	2957	4436	7393	4498	3925	8423
2)	ಬಳ್ಳಾರಿ	139	6903	7052	7759	4049	11808
3)	ದಾವಣಗೆರೆ	1461	1210	2671	3255	4883	8138
4)	ಧಾರವಾಡ	1369	5492	6861	1588	3882	5470
5)	ಹಾಸನ	516	3950	4466	5952	3514	9466
6)	ಹಾವೇರಿ	1000	1739	2739	2163	3396	5559
7)	ರಾಯಚೂರು	3210	2592	5802	3065	5854	8919
8)	ತುಮಕೂರು	522	1206	1728	1147	2986	4133

ಹೆಡೆ ಬಿಚ್ಚಿರುವ ಹಿಡನ್ ಅಜೆಂಡಾ.....

ಪುಟ 3 ರಿಂದ

ಕಣ್ಮರೆ. ಬಿಜೆಪಿ ಸರ್ಕಾರ ರಚಿಸಲಿದೆ ಎಂದು ಹೇಳಿದ ಸ್ವಾಮೀಜಿಗೆ ಅನಾಹುತ ಸಂಭವಿಸುತ್ತದೊ ಇಲ್ಲವೊ ತಿಳಿಯಲ್ಲಿಲ್ಲ ಎಂಬುದು ಹಾಸ್ಯಾಸ್ಪದವಲ್ಲದೆ ಮತ್ತೇನು. ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಸಮಾಜವನ್ನು ನಿರಂತರವಾಗಿ ಅಂಧಕಾರದಲ್ಲಿ ಇರಿಸಬೇಕೆಂದಿರುವ ಶಕ್ತಿಗಳು ಎಂದೂ ವಿಜ್ಞಾನದ ಬೆಳವಣಿಗೆಯನ್ನು ಬಯಸುವುದಿಲ್ಲ. ವೈಜ್ಞಾನಿಕ ಸತ್ಯಗಳನ್ನು ಹೇಳುವುದಿಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಕೋಟ್ಯಂತರ ಯಹೂದಿಗಳ ಹತ್ಯೆ ಮಾಡಿದ ನಾಜಿ ಹಿಟ್ಲರ್‌ನ ಫ್ಯಾಸಿಸ್ಟ್ ಎಲಿಮೆಂಟ್‌ಗಳು ರಾಜ್ಯದಲ್ಲಿ ಹೆಡೆ ಬಿಚ್ಚಿವೆ. ಮುಂದಿನ ದಿನಗಳಲ್ಲಿ ವಿಧಾನಸೌಧದಲ್ಲಿ ಆಸ್ಥಾನ ಪುರೋಹಿತರು, ಆಸ್ಥಾನ ಪಂಡಿತರು, ಜ್ಯೋತಿಷಿಗಳನ್ನು ನೇಮಿಸುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಚಿದಾನಂದ ಮೂರ್ತಿ, ಎಸ್.ಎಲ್. ಭೈರಪ್ಪನಂತವರು ಕರ್ನಾಟಕ ರತ್ನಗಳಾಗುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು. ನಾಳೆ ಮನುಸ್ಮೃತಿ ಸಂವಿಧಾನವಾದರೂ ಆಶ್ಚರ್ಯ ಪಡಬೇಕಾಗಿಲ್ಲ. ಹಾವೇರಿಯಲ್ಲಿ ನಡೆದ ಗೋಲಿಬಾರ್ ಪ್ರಕರಣವನ್ನು ಜನರ ಮನಸ್ಸಿನಿಂದ ಮರೆ ಮಾಚಲು ಸಂಘಪರಿವಾರದವರು ರೂಪಿಸುತ್ತಿರುವ ಪಿತೂರಿಗಳ ಕುರಿತು ಎಚ್ಚರಿಕೆಯಿಂದಿರಬೇಕು. ಒಂದು ದೇ[illegible] ಒಂದು ಧರ್ಮ ಎನ್ನುವ ಗೋಲ್ವಾಲ್‌ಕರ[illegible] ಅಜೆಂಡಾನೆ ಬಿಜೆಪಿ ಸಂವಿಧಾನ ಮ[illegible] ಕಾರ್ಯಕ್ರಮ. ಸುಳ್ಳೊಂದನ್ನು ಗಟ್ಟಿದ್ವನಿಯಲ್ಲಿ [illegible] ಪದೇ ಹೇಳುತ್ತಿದ್ದರೆ, ಸುಳ್ಳು ನಿಜವಾಗುತ್ತದೆ ಎಂ[illegible] ಹಿಟ್ಲರ್‌ನ ಕಾರ್ಯದರ್ಶಿ ಗೊಬಲ್ಸ್‌ನ ತಂತ್ರಗ[illegible] ಸಂಘಪರಿವಾದದ ಪ್ರಚಾರ ಸಾಮಗ್ರಿ. ಸಂವೇದ[illegible] ಶೀಲ ಜನ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯ[illegible] ಅಚಲ ನಂಬಿಕೆ ಹೊಂದಿರುವವರ ಮೇ[illegible] ಹಿಂದೆಂದಿಗಿಂತಲೂ ಹೆಚ್ಚು ಜವಾಬ್ದಾರಿಯಿ[illegible] ಮ್ಯಾಕ್ಸ್ ಮುಲ್ಲರ್ ಅವರ ಜನಪ್ರಿಯ-ತತ್ವವನ್ನು [illegible] ಸ್ಮರಿಸುವುದು ಉಚಿತವೆನಿಸುತ್ತದೆ. ನಾಜಿಗ[illegible] ಪ್ರೊಟೆಸ್ಟಂಟ್‌ರನ್ನು ಕೊಲ್ಲಲು ಬಂದರು ನಾ[illegible] ಸುಮ್ಮನಿದ್ದೆ, ಏಕೆಂದರೆ ನಾನು ಪ್ರೊಟೆಸ್ಟಂ[illegible] ಆಗಿರಲಿಲ್ಲ. ಕ್ಯಾಥೊಲಿಕ್‌ರನ್ನು ಕೊಲ್ಲಲು ಬಂದ[illegible] ನಾನು ಸುಮ್ಮನಿದ್ದೆ, ಏಕೆಂದರೆ ನಾನು ಕ್ಯಾಥೊಲಿ[illegible] ಆಗಿರಲಿಲ್ಲ. ಯಹೂದಿಗಳನ್ನು ಕೊಲ್ಲಲು ಬಂದ[illegible] ನಾನು ಸುಮ್ಮನಿದ್ದೆ ಏಕೆಂದರೆ ನಾನು ಯಹೂ[illegible] ಆಗಿರಲಿಲ್ಲ. ಕೊನೆಗೆ ನನ್ನನ್ನೇ ಕೊಲ್ಲಲು ಬಂದ[illegible] ನನಗಾಗಿ ಬರಲು ಯಾರೂ ಇರಲಿಲ್ಲ.

ಇದೊಂದು ಬಹುರಾಷ್ಟ್ರೀಯ ಕಂಪನಿ. ಕೆಲಸದ ಪರಿಸ್ಥಿತಿ . ಅಪಾಯಕಾರಿ. ಕಾರ್ಮಿಕರು ಸಂಘಟಿತರಾದರೆ, ಸಂರಕ್ಷಣೆ ಕೇಳಿದರೆ ಮಾಲೀಕವರ್ಗಕ್ಕೆ ಉರಿಯೋ ಉರಿ!

ಕಂಪನಿ ತಯಾರಿಸುವ ಗಾಳಿಯಂತ್ರದ ರೆಕ್ಕೆ



ಬಹುರಾಷ್ಟ್ರೀಯ ಕಂಪನಿಯೊಂದರ ದಬ್ಬಾಳಿಕೆ

ನರಸಿಂಹಮೂರ್ತಿ

ಎಲ್‌ಎಂ ಗ್ಲಾಸ್ ಫೈಬರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆಯು 1995ರ ಮಾರ್ಚ್‌ನಲ್ಲಿ ಪ್ರಾರಂಭವಾದ ಡೆನ್ಮಾರ್ಕ್ ಮೂಲದ ಬಹುರಾಷ್ಟ್ರೀಯ ಕಂಪನಿ.

ನೈಸರ್ಗಿಕವಾಗಿ ಬೀಸುವ ಗಾಳಿಯ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುವ ಗಾಳಿಯಂತ್ರದ ರೆಕ್ಕೆಗಳ ನಿರ್ಮಾಣದಲ್ಲಿ ವಿಶ್ವದಲ್ಲಿ ಅಗ್ರಸ್ಥಾನದಲ್ಲಿರುವ ಕಂಪನಿ.

ಆರೋಗ್ಯಕ್ಕೆ ಅಪಾಯಕಾರಿ

ಈ ಕಂಪನಿಯಲ್ಲಿ ಉತ್ಪಾದಿಸುವ ರೆಕ್ಕೆ (ಬ್ಲೇಡ್) ಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವ ವಿಧಾನ ಪರಿಸರ ಸ್ನೇಹಿಯೆನಿಸಿದ್ದರೂ, ಈ ರೆಕ್ಕೆ ಗಳ ತಯಾರಿಕೆಗೆ ಬಳಸುವ ವಸ್ತುಗಳು ಗ್ಲಾಸ್ ಫೈಬರ್, ರೆಸಿನ್ಸ್, ಗ್ಲೂ, ಹಾರ್ಡ್‌ನರ್, ಜೆಟ್‌ಕೋಟ್, ನ್ಯಾನೋಕೋಟ್, ಡೈಕೋಟ್, ಐಸೋಸಯನೈಡ್ ಹೀಗೆ ರಾಸಾಯನಿಕಗಳು ಮತ್ತು ರಾಸಾಯನಿಕ ಸಂಯುಕ್ತಗಳು. ಇವುಗಳ ಸಮೀಪ ಕೆಲಸ ಮಾಡುವವರಿಗೆ ನಿರ್ದಿಷ್ಟ ಸಂರಕ್ಷಣ ಪರಿಕರಗಳ ಅಗತ್ಯವಿದ್ದು, ಸುರಕ್ಷಣ ಪರಿಕರಗಳ ಬಳಸಿದರೂ ಇಡೀ ಕಾರ್ಖಾನೆ ಹಾಗೂ ಕಾರ್ಖಾನೆ ಸುತ್ತ ಮೇಲಿನ ರಾಸಾಯನಿಕಗಳು ಹಾಗೂ ಅವುಗಳ ಸಂಯುಕ್ತಗಳ ಹವೆ, ಹೊಗೆ, ಧೂಳಿನಿಂದ ಗ್ಲಾಸ್ ಫೈಬರ್‌ಗಳ ಸೂಕ್ಷ್ಮತಿ ಸೂಕ್ಷ್ಮ ಎಳೆಗಳಿಂದ ಇಡೀ ಪರಿಸರ ಕಲುಷಿತವಾಗಿರುತ್ತದೆ. ಈ ಕಾರ್ಖಾನೆಯ ಕೆಲಸದಲ್ಲಿ ತೊಡಗುವುದು ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿಯಾಗಿರುತ್ತದೆ.

ಎಲ್‌ಎಂ ಗ್ಲಾಸ್ ಫೈಬರ್ ಕಂಪನಿ ಡೆನ್ಮಾರ್ಕ್, ಸ್ಪೈನ್, ಹಾಲೆಂಡ್, ಅಮೇರಿಕಾ, ಚೈನಾ, ಭಾರತ ಹೀಗೆ ಬೇರೆ ದೇಶಗಳಲ್ಲಿ ತನ್ನ ಪ್ರತ್ಯೇಕ ಉತ್ಪಾದನೆ ನಡೆಸುತ್ತಿರುವ ಬಹುರಾಷ್ಟ್ರೀಯ ಕಂಪನಿ, ವಿದೇಶಗಳಲ್ಲಿರುವ ಈ ಕಂಪನಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಪ್ರತಿ ಕೆಲಸಕ್ಕೂ ನಿರ್ದಿಷ್ಟವಾದ ಸುರಕ್ಷಣಾ ಪರಿಕರಗಳನ್ನು ವಿನ್ಯಾಸಗೊಳಿಸಿ ಅಲ್ಲಿಯ ಕೆಲಸದ ಅಪಾಯದ ಅನುಸಾರ ಕೆಲಸದ ಸಮಯ, ವಿಶ್ರಾಂತಿ ಸಮಯಗಳನ್ನು ನಿರ್ದಿಷ್ಟಗೊಳಿಸಿ ಕಾರ್ಮಿಕರಿಗೆ ಆರೋಗ್ಯದ ಯಾವುದೇ ತೊಂದರೆಯಾಗದಂತೆ ಕೆಲಸ ಮಾಡಿಸುತ್ತಾರೆ.

ಸುರಕ್ಷತೆ ಇಲ್ಲ

1995 ಮಾರ್ಚ್‌ನಲ್ಲಿ ಪ್ರಾರಂಭವಾದ ಹೊಸಕೋಟೆ ಕಾರ್ಖಾನೆ ಆಡಳಿತ ಮಂಡಳಿಯು ಕಾರ್ಮಿಕರಿಗೆ ನಿರ್ದಿಷ್ಟ ಕೆಲಸಕ್ಕೆ ಬೇಕಾದ ಸುರಕ್ಷಣ ಪರಿಕರಗಳನ್ನು ನೀಡದೆ, ಇಲ್ಲಿಯ ಕಾರ್ಮಿಕ ಕಾನೂನುಗಳು ಲೋಪ, ಅಧಿಕವಾಗಿ ಸಿಗುವ ನಿರುದ್ಯೋಗಿಗಳ ದುರ್ಲಾಭ ಪಡೆಯಲು, ಸರಿಯಾದ ಸುರಕ್ಷತೆಯಿಲ್ಲದೆ ಕಡಿಮೆ ವೇತನಕ್ಕೆ ದಿನದಲ್ಲಿ 8 ಗಂಟೆಗಳಿಗಿಂತಲೂ ಅಧಿಕವಾಗಿ ದುಡಿಸಿಕೊಂಡು ಅಧಿಕ ಲಾಭ ತೋರಿಸಿ ತಮ್ಮ (ಆಡಳಿತವರ್ಗದವರ) ವೇತನ ಭತ್ಯೆಗಳ ಯತೇಚ್ಛವಾಗಿ ಹೆಚ್ಚಿಸಿಕೊಳ್ಳುತ್ತಾ ಸಾಗಿದರು.

ಸಂಘ ಶುರು

ಇದರಿಂದೆಲ್ಲಾ ಕಂಗೆಟ್ಟು ಕಾರ್ಮಿಕರು 2005/2006 ರಲ್ಲಿ ಸಂಘಟಿತರಾಗಿ 'ಎಲ್‌ಎಂ ಗ್ಲಾಸ್ ಫೈಬರ್ ಜನರಲ್ ಎಂಪ್ಲಾಯೀಸ್ ಯೂನಿಯನ್' ಅನ್ನು ನೋಂದಾಯಿಸಿ ವೇತನ ತಾರತಮ್ಯ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ಮುಂತಾದ ಬೇಡಿಕೆ ಇಟ್ಟು ಮಾತುಕತೆ ಮಾಡಲು ಕೋರಿದರು. ಇದರಿಂದ ಕ್ರೋಧಗೊಂಡ ಆಡಳಿತ ವರ್ಗ ತಕ್ಷಣವೇ 10 ವರ್ಷಗಳಿಂದ ಇಲ್ಲದ ಪ್ರಮೋಷನ್ ಅನ್ನು 25 ಜನ ಕಾರ್ಮಿಕರಿಗೆ ನೀಡಿದರು. ನಾವು ಬಡ್ತಿ ನೀಡಿರುವ ಕಾರ್ಮಿಕರು ಸಂಘದ ಸದಸ್ಯರಾಗಿದ್ದಾರೆ. ಸಂಘ ಕಾನೂನು ಬಾಹಿರವಾದದ್ದು ಇದರ ನೋಂದಣಿಯನ್ನು ಕೂಡಲೇ ರದ್ದುಗೊಳಿಸಿ ಎಂದು ನೋಂದಣಿ ಮಾಡಿದ ಸಹಾಯಕ ಕಾರ್ಮಿಕ ಆಯುಕ್ತರಲ್ಲಿ ಕೇಳಿಕೊಂಡಿತು.

ಸಂಘದ ನೋಂದಣಿಯನ್ನು ಮಾನ್ಯ ಆಯುಕ್ತರೊಂದಿಗೆ ಚರ್ಚಿಸಿ ಕಾನೂನುಬದ್ಧವಾಗಿದೆಯೆಂದು ತಿಳಿದ ಮೇಲೆಯೇ ನೋಂದಾವಣೆ ಮಾಡಿರುವುದು ಅದನ್ನು ರದ್ದುಗೊಳಿಸಲು ಬರುವುದಿಲ್ಲ ಎಂದು ಮಾನ್ಯ ಅಧಿಕಾರಿಗಳು ತಿಳಿಸಿದಾಗ ಈ ವಿಚಾರವಾಗಿ ಸುಮ್ಮನಾದರು.

ಕಿರುಕುಳ



ಪ್ರತಿಭಟನಾ ನಿರತ ಕಾರ್ಮಿಕರು

ಆದರೆ ಕಾರ್ಖಾನೆಯೊಳಗೆ ಸಂಘದ ಪದಾಧಿಕಾರಿಗಳಿಗೆ ಕಿರುಕುಳ ನೀಡಲು ಮುಂದಾದರು. ಕೆಲಸ ಮಾಡುತ್ತಿದ್ದರೆ, ಟಿ ಕುಡಿಯುವಲ್ಲಿ, ಊಟ ಮಾಡುವಲ್ಲಿ, ವೇತನ ನೀಡುವಲ್ಲಿ ಹೀಗೆ ಎಲ್ಲಾ ಕಡೆ ತೀವ್ರವಾದ ಮಾನಸಿಕ ಕಿರುಕುಳ ನೀಡುತ್ತಾ ಇಡೀ ಕಾರ್ಮಿಕರಿಗೆ ಭಯದ ವಾತಾವರಣ ನಿರ್ಮಿಸುತ್ತಾ ಸಾಗಿದರು. ಉದ್ದೇಶಪೂರ್ವಕವಾಗಿ ಕೆಲಸದ ಸಾಮಗ್ರಿಗಳನ್ನು ಸರಿಯಾಗಿ ನೀಡದೆ, ಸುರಕ್ಷಣ ಪರಿಕರಗಳನ್ನು ಮತ್ತಷ್ಟು ಕಡಿಮೆಗೊಳಿಸಿ ವೇತನ ತಾರತಮ್ಯವನ್ನು ಮತ್ತಷ್ಟು ಹೆಚ್ಚಿಸಿ ಕಾರ್ಮಿಕ ಮುಖಂಡರನ್ನು ಸ್ಥಿಮಿತಗೆಡುವಂತೆ ಪ್ರಚೋದಿಸುತ್ತಾ ಸಾಗಿತು. ಇದರಿಂದ ಕಂಗೆಟ್ಟು ಬಡ್ತಿ ಪಡೆದಿದ್ದ ಕಾರ್ಮಿಕರು ಒಂದೇ ತಿಂಗಳಲ್ಲಿ ನಮಗೆ ಬೇಡವೆಂದು ವಾಪಸ್ಸು ಬರೆದರು. ಅದಕ್ಕೆ ಬಡ್ತಿ ವಾಪಸ್ಸು ಪಡೆಯಲಾಗುವುದಿಲ್ಲ ಬೇಕಾದರೆ ಕೆಲಸ ಬಿಟ್ಟು ಹೋಗಿ ಎಂದು ತಿಳಿಸಿದರು.

ಇದರಿಂದೆಲ್ಲಾ ತಮ್ಮ ತಾಳ್ಮೆ ಕಳೆದುಕೊಳ್ಳದ ಸಂಘ 2006 ಜನವರಿಯಲ್ಲಿ ಆಡಳಿತ ಮಂಡಳಿ ಕಾರ್ಮಿಕರಿಗೆ ಇಲ್ಲಿಯವರೆಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡುತ್ತಿಲ್ಲಾ ಸರಿಯಾದ ಸುರಕ್ಷತೆಯಿಲ್ಲದೆ ಕೆಲಸ ಮಾಡಿಸುತ್ತಿರುವ ಬಗ್ಗೆ ಇಲಾಖಾ ಅಧಿಕಾರಿಗಳ ಮುಂದೆ ದೂರು ನೀಡಿದರು. ಆದರೆ ಆಡಳಿತ ಮಂಡಳಿಯವರು ದೂರು ನೀಡಿದ ಪದಾಧಿಕಾರಿಗೆ Charge sheet cum show cause notice ನೀಡಿ ಕಿರುಕುಳ ಮತ್ತಷ್ಟು ಹೆಚ್ಚಿಸಿದರು.

ಸಂಘದ ಪ್ರತಿ ಸದಸ್ಯರಿಗೂ ಬೇರೆ ಬೇರೆ ರೀತಿಯ ದೌರ್ಜನ್ಯ ಮಾನಸಿಕ ಕಿರುಕುಳಗಳನ್ನು ತೀವ್ರಗೊಳಿಸಿತು. ಸಂಘದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿಯಾಗಿದ್ದವರನ್ನು 2006 ಆಗಸ್ಟ್‌ನಲ್ಲಿ ಅಮಾನತ್ತುಗೊಳಿಸಿತು. ಮತ್ತು ವೇತನ ಬೇಡಿಕೆ ಪತ್ರದ ಮೇಲೆ ಒಮ್ಮೆಯೂ ಮಾತುಕತೆ ನಡೆಸಲಿಲ್ಲ.

ಬೇಡಿಕೆ ಪತ್ರದ ಮೇಲೆ ಮಾತುಕತೆ ನಡೆಸದೆ ವೇತನ ಪರಿಷ್ಕರಣೆ ಮಾಡಿ ಮತ್ತಷ್ಟು ತಾರತಮ್ಯದ ವೇತನ ನೀಡಿತು. ಇದನ್ನು ಇಲಾಖಾ ಅಧಿಕಾರಿಗಳ ಮುಂದೆ ಪ್ರಶ್ನಿಸಿದಾಗ ಇಲಾಖೆ ಅಧಿಕಾರಿಗಳ ಮುಂದೆ ತಂದಾಗ ನೆಪಕ್ಕೆ ಮಾತುಕತೆ ಮಾಡುವುದು ಉಳಿದಂತೆ ಯಾವುದೇ ಕ್ರಮವಹಿಸದೆ ಸುಮ್ಮನಿರುವುದು. ನಂತರ 2006ರ ಬೇಡಿಕೆ ಪತ್ರದ ಮಾತುಕತೆಯಿಂದ ಸಂಘ ಹಿಂದೆ ಸರಿಯುವಂತೆ ಮಾಡಲು ಮತ್ತೆ ಅಮಾನತ್ತು ವಿಚಾರಣೆ ಹೇರುವುದನ್ನು ಮುಂದುವರೆಸಿತು. ಮತ್ತೊಮ್ಮೆ ಸಂಘದ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿದ್ದ 6 ಜನರನ್ನು ವಿವಿಧ ಪಾಳಿಗಳಲ್ಲಿದ್ದವರನ್ನು ಒಂದು ವಿಭಾಗದ ಒಂದು ಪಾಳಿಗೆ ಕರೆಸಿಕೊಂಡು 18 ಜನ ಕೆಲಸ ಮಾಡುವ ಸ್ಥಳದಲ್ಲಿ ಉದ್ದೇಶಪೂರ್ವಕವಾಗಿ ಅವರ ಮೇಲೆ ಸುಳ್ಳು ಆರೋಪ ಹೊರಿಸಿ 6 ಜನ ಸಂಘದ ಸದಸ್ಯರನ್ನು ಅಮಾನತ್ತುಗೊಳಿಸ ಲಾಯಿತು.

ಪ್ರತಿ ಹಂತದಲ್ಲೂ ನಿರ್ಲಕ್ಷ್ಯ ತೋರುವ ಇಲಾಖಾ ಅಧಿಕಾರಿಗಳು ಹಾಗೂ ಕಾರ್ಮಿಕರ ಮೇಲೆ ಮಿತಿ ಮೀರಿದ ದೌರ್ಜನ್ಯ ಕಿರುಕುಳ ನೀಡುವ ಕಾರ್ಖಾನೆ ಆಡಳಿತ ವರ್ಗದವರ ಕಾಠಿಣ್ಯಗಳಿಗೆ ತಲೆಬಾಗಿದ ಸಂಘ ಉತ್ಪಾದನಾ ಪ್ರಕ್ರಿಯೆ ಸಂರಕ್ಷಣಾ ಪರಿಕರಗಳು ಕೆಲಸದ ಸಮಯ ಕುರಿತು ಸರಿಯಾದ ಒಪ್ಪಂದಕ್ಕೆ ಬರಲು ಸಾಧ್ಯವಾಗದಿದ್ದರೂ ಆಡಳಿತ ವರ್ಗದವರು 1 ತಿಂಗಳೊಳಗೆ ಎಲ್ಲಾ ಅಮಾನತ್ತು/ ವಜಾ ಪ್ರಕರಣಗಳನ್ನು ಸೌಹಾರ್ದಯುತವಾಗಿ ಸಂಘದೊಂದಿದೆ ಮಾತುಕತೆ ನಡೆಸಿ ಇತ್ಯರ್ಥಪಡಿಸುವುದಾಗಿ ತಿಳಿಸಿದ ಹಿನ್ನಲೆಯಲ್ಲಿ ವೇತನ ಒಪ್ಪಂದಕ್ಕೂ ಸಹಿ ಮಾಡಲಾಯಿತು.

ಮಾತುಕತೆ ಇಲ್ಲ

ವೇತನ ಒಪ್ಪಂದವಾದ 1 ತಿಂಗಳೊಳಗೆ 6/5 ಇತ್ಯರ್ಥಗೊಳಿಸುವುದಾಗಿ ತಿಳಿಸಿದ್ದ ಆಡಳಿತ ಮಂಡಳಿ 6 ತಿಂಗಳಿಂದಲೂ ಸಂಘದೊಂದಿಗೆ ಯಾವುದೇ ಮಾತುಕತೆ ನಡೆಸಲಿಲ್ಲ. ಸಂಘವು ಈ ಕುರಿತು ಮಾಡಿದ ಮನವಿಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ನಂತರ ಸಂಘವು ಜನವರಿ 2008 ರಲ್ಲಿ ಪ್ರತಿಭಟನಾ ಪತ್ರ ನೀಡಿ ಪ್ರಕರಣಗಳ ಇತ್ಯರ್ಥಪಡಿಸಲು ಕೋರಿತು. ಸಂಘವು ಕಪ್ಪು ಬ್ಯಾಡ್ಜ್ ಧರಿಸುವುದು, ಘೋಷಣೆ ಕೂಗುವುದೂ, ಬಾಯಿಗೆ ಕಪ್ಪು ವಸ್ತ್ರ ಕಟ್ಟುವುದು. ಹೀಗೆ ಹಲವು ಹಂತಗಳ ಪ್ರತಿಭಟನೆಗೆ ಮುಂದಾಯಿತು. ಆಡಳಿತ ಮಂಡಳಿ ಇವುಗಳಿಗೆಲ್ಲಾ ಸೊಪ್ಪು ಹಾಕದೆ ಕುಳಿತಾಗ ಸಂಘದ, ಸದಸ್ಯರೆಲ್ಲ ಉಪವಾಸದಿಂದ ಕೆಲಸ ಮಾಡಲು ತೊಡಗಿದರು. ಇದಕ್ಕೂ ಯಾವುದೇ ಪ್ರತಿಕ್ರಿಯೆ ನೀಡದೆ ಇದ್ದಾಗ 10.03.08 ರಂದು 1 ದಿನದ ಸಾಂಕೇತಿಕ ಮುಷ್ಕರಕ್ಕೆ ಮುಂದಾಯಿತು. ಆಗ ಆಡಳಿತ ಮಂಡಳಿಯು 08.03.08 ರಂದು ಪತ್ರ ನೀಡಿ 10.03.08 ರಂದು ನಡೆಸುವ ಸಾಂಕೇತಿಕ ಮುಷ್ಕರ ಕಾನೂನು ಬಾಹಿರ ಈ ಮುಷ್ಕರದಿಂದ ಕಾರ್ಖಾನೆಗೆ ತುಂಬಲಾಗದ ನಷ್ಟವಾಗುವುದಾಗಿ ತಿಳಿಸಿತು. ಕಾರ್ಖಾನೆಯ ಉತ್ಪಾದನೆಗೆ ಧಕ್ಕೆ ತರುವ ಉದ್ದೇಶ ಸಂಘಕ್ಕಿಲ್ಲಾ ಇಲಾಖಾ ಅಧಿಕಾರಿಗಳ ಮುಂದೆ ನಡೆಸಿದ ಮಾತುಕತೆಯಂತೆ ಎಲ್ಲಾ ಅಮಾನತ್ತು/ ವಜಾ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕೆಂದು ಅದಕ್ಕಾಗಿ ಮಾತುಕತೆ ಮಾಡಲು ಸಮಯ ನೀಡಿ ತನ್ನ 1 ದಿನದ ಮುಷ್ಕರವನ್ನು 17.03.08 ಕ್ಕೆ ಮುಂದೂಡಿತು. ಆಗ ಆಡಳಿತ ಮಂಡಳಿಯು 14.03.08 ರಂದು ಮಾತುಕತೆ ನಡೆಸಿ 1 ವಾರದಲ್ಲಿ ಎಲ್ಲಾ ಪ್ರಕರಣಗಳ ಇತ್ಯರ್ಥಪಡಿಸುವುದಾಗಿ ತಿಳಿಸಿತು. ನಂತರ ಸಂಘವು 17.03.08ರ ಮುಷ್ಕರ ಮುಂದೂಡಿತು. ಆದರೆ 2 1/2 ತಿಂಗಳುಗಳು ಕಳೆದರೂ ಯಾವುದೇ ಸಕಾರಾತ್ಮಕ ಮಾತುಕತೆ ನಡೆಸದೆ 2008ರ ವೇತನ ಹೆಚ್ಚಳದಲ್ಲಿ ಸಂಘದೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ

ಪುಟ 12 ಕ್ಕೆ

ಕನ್ನಡಿ

ಕೆ.ಎಸ್.ವಿಮಲ

ಜಾಹೀರಾತುಗಳೂ ಮತ್ತು ಅಸಭ್ಯತೆಯೂ

ಕಾರಿನ ಜಾಹಿರಾತಿಗೆ ಅರೆಬೆತ್ತಲೆ ಹೆಣ್ಣುಗಳೇ ಬೇಕು. ಪತ್ರಿಕೆಯೊಂದರ ಜಾಹಿರಾತು ಒಳ ಉಡುಪುಗಳ ಜಾಹಿರಾತನ್ನೂ ನಾಚಿಸುವಂತಿದ್ದರೆ ಅದಕ್ಕೆ ಏನನ್ನಬೇಕು?

ಇತ್ತೀಚೆಗೆ ಬ್ರಿಟನ್ ದೂತಾವಾಸ ತನ್ನ ದೇಶದಿಂದ ಭಾರತಕ್ಕೆ ತೆರಳಬಯಸುವ ಮಹಿಳಾ ಪ್ರವಾಸಿಗರಿಗೆ ಕೆಲವು ಸುರಕ್ಷಾ ಸೂಚನೆಗಳನ್ನು ನೀಡಿದೆ ಎಂದು ಪತ್ರಿಕೆಯಲ್ಲಿ ವರದಿಯಾಯಿತು. ಅದರ ಪ್ರಕಾರ ಭಾರತದಲ್ಲಿ ಅಡ್ಡಾಡುವಾಗ ಸಾಧ್ಯವಾದಷ್ಟು ಭಾರತೀಯ ಉಡುಗೆ ತೊಡುವುದು, ಒಬ್ಬಂಟಿಗಳಾಗಿ ಸಂಚರಿಸದಿರುವುದು ಇತ್ಯಾದಿ. ಇದಕ್ಕೆ ಕಾರಣವಿಷ್ಟೆ.


ಗೋವಾದ ಕಡಲ ತೀರದಲ್ಲಿ ಸ್ಕಾರ್ಲೆಟ್ ಎಂಬ ಯುವತಿಯ ಅಸಹಜ ಸಾವು ಮತ್ತು ಅದಕ್ಕೆ ಮುಂಚೆ ಕೂಡ ದೇಶದ ವಿವಿಧ ಭಾಗಗಳಲ್ಲಿ ವಿದೇಶಿ ಮಹಿಳೆಯರ ಮೇಲೆ ನಡೆದ ಅತ್ಯಾಚಾರ, ಮಾನಭಂಗ, ಕೊಲೆಯಂತಹ ಪ್ರಕರಣಗಳು.

ಸ್ಕಾರ್ಲೆಟ್‌ಳ ಸಾವಂತೂ ರಾಜ್ಯಸಭೆಯಲ್ಲಿ ಕೂಡ ಚರ್ಚೆಗೆ ಕಾರಣವಾಯಿತು. ಅಷ್ಟೇ ಅಲ್ಲ ಸಾವಿನ ಕಾರಣ, ಕಾರಣರಾದವರ ಮೇಲೆ ಕ್ರಮಗಳು, ಮುಂದೆ ನಡೆಯದಂತೆ ಮುಂಜಾಗರೂಕತೆಯ ಕ್ರಮಗಳು ಕುರಿತು ಚರ್ಚೆಯಾಗುವ ಬದಲು-ಸ್ಕಾರ್ಲೆಟ್‌ಳ ತಾಯಿ ಅವಳ ಮಗಳನ್ನು ಬೆಳೆಸಿದ ರೀತಿ ಸರಿ ಇಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು. ಈ ಸುದ್ದಿಯ ಬೆನ್ನಲ್ಲೇ ಪ್ರಕಟವಾದ ಸುದ್ದಿ ಗೋವಾ ಕಡಲ ತೀರದಲ್ಲಿ ನಡೆಯುತ್ತಿರುವ ಮಾದಕ ದ್ರವ್ಯ ಮಾಫಿಯಾದ ಪ್ರಮುಖ ವ್ಯಕ್ತಿಗಳು ಅಲ್ಲಿಯ ಪ್ರಭಾವೀ ವ್ಯಕ್ತಿಗಳೆಂದೂ ಇತ್ತು.

ಈ ನಾಲ್ಕು ಅಕ್ಷರ ಬರೆಯುತ್ತಿರುವಾಗಲೇ ಸುದ್ದಿ ವಾಚಕರು ಬಿತ್ತರಿಸುತ್ತಿರುವ ಸುದ್ದಿ-ಚಿಕ್ಕಮಗಳೂರಿನಲ್ಲಿ ವೃದ್ಧೆಯ ಮೇಲೆ ವಿಕೃತಕಾಮಿಯ ಅತ್ಯಾಚಾರ. ಹೀಗೆ-ಪ್ರತಿದಿನ ಪತ್ರಿಕೆ, ಸುದ್ದಿ-ದೃಶ್ಯ ಮಾಧ್ಯಮಗಳಲ್ಲಿ, ಎಳೆ ಹಸುಳೆಗಳ ಮೇಲೆ, ಹದಿಹರೆಯದ ಯುವತಿಯರ ಮೇಲೆ, ವಯಸ್ಕ, ವೃದ್ಧೆ ಹೀಗೆ ಮಹಿಳಾ ಕುಲದ ಮೇಲೆ ನಿರಂತರವಾಗಿ ಅತ್ಯಾಚಾರಗಳು ನಡೆಯುತ್ತಲೇ ಇರುವ ಸುದ್ದಿಗಳು ಪ್ರಕಟವಾಗುತ್ತಿವೆ. ಘಟನೆಗೆ ಪ್ರತಿರೋಧ, ಕ್ರಮ, ಶಿಕ್ಷೆ ಇತ್ಯಾದಿಗಳು ನಡೆಯುತ್ತವೆ ನಡೆಯಬೇಕು ಕೂಡ.

ಆದರೆ ಕೇವಲ ಘಟನೆ ನಡೆದ ಮೇಲೆ ನಡೆಯುವ ಪ್ರತಿಕ್ರಿಯೆ ಪ್ರತಿರೋಧ ಅಷ್ಟೇ ಸಾಕೇ? ಘಟನೆಗೆ ಕಾರಣಗಳನ್ನೂ ಹುಡುಕಬೇಕಲ್ಲವೇ?

ಮಹಿಳೆಗೆ ಸ್ವತಂತ್ರ ಅಸ್ತಿತ್ವವಿಲ್ಲವೆಂದು ಪ್ರತಿಪಾದಿಸುವ, ಭೋಗವಸ್ತುವೆಂದೇ ಪರಿಗಣಿಸುವ ಮೌಲ್ಯಗಳ ಮಧ್ಯೆ ಇಂತಹ ಘಟನೆಗಳೂ ಹುಟ್ಟು ಪಡೆದುಕೊಳ್ಳುತ್ತವೆ. ಅದಕ್ಕೆ ಇಂಬು ಕೊಡುವ ಹಾಗೆ ಉದಾರೀಕರಣದ ನೀತಿಗಳು ಕೂಡ ಜಾರಿಯಲ್ಲಿವೆ.



ಇದೊಂದು ಕಾರಿನ ಜಾಹಿರಾತು!
ಕಾರು ನಿಮಗೇನಾದರೂ ಕಾಣುತ್ತದೆಯೇ?

ಈ ಪ್ರಶ್ನೆಗಳಿಗೆ ಪರಿಹಾರ ಹುಡುಕುತ್ತಾ, ಹೋರಾಟದ ದಾರಿಯಲ್ಲಿ ಸಾಗುತ್ತಲೇ ಇಂತಹ ಘಟನೆಗಳಿಗೆ ತಮ್ಮದೇ ಗುರುತರ ಕೊಡುಗೆ ನೀಡುವ ಇತರ ಅಂಶಗಳನ್ನು ಪರಿಗಣಿಸುವ ಅಗತ್ಯವಿದೆ.

ಒಂದು ದಿನ ಮುಂಜಾನೆಯ 6.30ಕ್ಕೆ ತಣ್ಣಗಿನ ಗಾಳಿ, ರಸ್ತೆ ಎರಡನ್ನೂ (ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಎರಡೂ ಅಲಭ್ಯ) ಅನುಭವಿಸುತ್ತಾ ಎಂದಿನಂತೆ ಕಛೇರಿಯತ್ತ ಹೆಜ್ಜೆ ಹಾಕುತ್ತಿದ್ದೆ. ಒಬ್ಬ ಸೈಕಲ್ ಸಹಾರ ಬಂದದ್ದನ್ನು ಗಮನಿಸಿ ಮುಂದೆ ಸಾಗುವ ಹೆಜ್ಜೆ ಹಾಕುವಾಗ -ಹೆಚ್ಚೆಂದರೆ 16 ರಿಂದ 18 ರೊಳಗಿನ ವಯಸ್ಸಿನ ಆಟದ ಸಮವಸ್ತ್ರದಲ್ಲಿದ್ದ ಆ ಹುಡುಗ ಮಾಡಿದ ಅಸಹ್ಯ ಪ್ರದರ್ಶನಕ್ಕೆ ಬೆಚ್ಚಿ ನಿಂತು ಬಿಡುವ ಹಾಗಾಯಿತು. ಏನೆಂದು ವಿಚಾರಿಸುವಷ್ಟರಲ್ಲಿ ಎರಡು ಮಾರು ಮುಂದೆ ಹೋಗಿ ಮತ್ತದೇ ಕ್ರಿಯೆಯ ಪುನರಾವರ್ತನೆ. ನನ್ನೊಳಗೆ ಸೃಷ್ಟಿಸಿದ ಭಾವನೆಗಳು ವ್ಯಕ್ತಪಡಿಸಲು ಸಾಧ್ಯವಿಲ್ಲ. ಈ ಘಟನೆಯ ಹಿಂದೆ ಪಾಳೆಯಗಾರಿ ಮೌಲ್ಯ ಮಾತ್ರವಲ್ಲ. ಬದಲಿಗೆ ಇಂದು ನಮ್ಮ ಸುತ್ತ ನಡೆಯುತ್ತಿರುವ ವಿದ್ಯಮಾನಗಳು. ಈ ಎಳೆಯ ಮನಸ್ಸುಗಳು ಉದ್ರೇಕಕಾರೀ ವರ್ತನೆಗೆ ಒಳಗಾಗುವಂತೆ ಮಾಡುವ ಅಂಶಗಳತ್ತ ಗಮನಹರಿಸಬೇಕಿದೆ. ಇಲ್ಲಿ ಮಾಧ್ಯಮಗಳ ಪಾತ್ರ ಅತಿ ಮಹತ್ವದ್ದಾಗಿದೆ. ಹಣ ಗಳಿಕೆಗೆ ಯಾವ ಮಾರ್ಗವಾದರೂ ಸರಿ. ಅದರಿಂದಾಗಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಎಂತಹುದೇ ತೊಂದರೆಯಾದರೂ ಸರಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯವಿಲ್ಲವೆಂಬ ಮನೋಧರ್ಮ ಕಂಡುಬರುತ್ತಿದೆ. ಹಾಗೆಂದೇ ಮಾರಾಟವಾಗಬೇಕಿರುವ ವಸ್ತುವಿಗೂ ಜಾಹೀರಾತಿಗೆ ಬಳಸುವ ಹೆಣ್ಣಿಗೂ ಯಾವ ಸಂಬಂಧವೇ ಇಲ್ಲದಿದ್ದರೂ ಯಾವುದೇ ಎಗ್ಗು ಸಿ..ದೇ ಹೆಣ್ಣಿನ ನಗ್ನ, ಅರೆನಗ್ನ ಜಾಹೀರಾತುಗಳು ಪ್ರ..ರ್ಶನವಾಗುತ್ತಿವೆ.

ಡೆಕ್ಕನ್ ಕ್ರಾನಿಕಲ್‌ನಂತಹ ಪತ್ರಿಕೆ ಬೆಂಗಳೂರಿನಲ್ಲಿ ಬಿಡುಗಡೆಯಾಗಲಿದೆ ಎಂದರೆ ಪತ್ರಿಕೆ ತನ್ನ ಪತ್ರಿಕಾಧರ್ಮದ ಕುರಿತು ಭರವಸೆ ಮೂಡಿಸುವ ಜಾಹೀರಾತು ಬಳಸಬೇಕು. ನಿರ್ಭೀಡೆಯ ಸುದ್ದಿ ಪ್ರಸಾರ ಮಾಡುತ್ತೇವೆ ಎಂಬ ಜಾಹೀರಾತಿಗೆ ಬದಲಾಗಿ ನಗ್ನವೇ ಎನ್ನಬಹುದಾದ ಯುವತಿಯ ಮೈ ಮೇಲೆ-ತನ್ನ ಬಗ್ಗೆ ಬರೆದುಕೊಳ್ಳುವ ಮೂಲಕ ತನ್ನ ಕೀಳು ಅಭಿರುಚಿಯ ಪ್ರದರ್ಶನ ಮಾಡಿದೆ. ಈ ಜಾಹೀರಾತು ಬೆಂಗಳೂರಿನ ಪ್ರಮುಖ ಬೀದಿಗಳಲ್ಲಿ ಅದರಲ್ಲೂ ಹದಿಹರೆಯದ ಹುಡುಗರನ್ನು ಆಕರ್ಷಿಸುವ ರೀತಿಯಲ್ಲಿ ಕಾಲೇಜುಗಳ ಮುಂದೆ ಹಾಕಿರುವುದು ಒಂದೆಡೆಯಾದರೆ ನಗರ ಸಾರಿಗೆಯ ಸುಖಸೀನ ಹವಾ ನಿಯಂತ್ರಿತ ಬಸ್ಸುಗಳ ಮೇಲೆ ಕೂಡ ಇದೇ ಜಾಹೀರಾತು. ಎಂದರೆ ಸರ್ಕಾರವೂ ಕೂಡ ಹಣ ಸಿಗುವುದಾದರೆ ಏನೂ ಮಾಡಲು ಸಿದ್ಧ ಎಂದಾಯಿತಲ್ಲ.

ಅಂತೆಯೇ ಪ್ರತಿನಿತ್ಯ ಟಿ.ವಿ. ಮಾಧ್ಯಮದಲ್ಲಿ ಪ್ರಕಟವಾಗುವ ಜಾಹೀರಾತುಗಳು, ಸಿನಿಮಾಗಳು, ಇತ್ತೀಚೆಗೆ ಧಾರವಾಹಿಗಳೂ ಕೂಡ ಇಂತಹುದೇ ರೋಚಕತೆಗೆ ಪ್ರಾಧಾನ್ಯತೆ ನೀಡುತ್ತಿವೆ.

ಅತ್ಯಾಚಾರದಂತಹ ಘಟನೆಗಳು ನಡೆದ ತಕ್ಷಣ ಹುಡುಗಿಯರ ಉಡುಪು, ಹಾವ-ಭಾವ, ಕೊನೆಗೆ ತಾಯಿ ಸಾಕಿದ್ದೇ ಸರಿ ಇಲ್ಲ ಎಂದೂ ಹೇಳಿಬಿಡುವ ಈ ಸಮಾಜ ಕನಿಷ್ಠ ಒಮ್ಮೆ ತಪ್ಪೆಸಗಿದ ವ್ಯಕ್ತಿಗಳ ನಡತೆಯ ಕುರಿತು, ಅದಕ್ಕೆ ಕಾರಣವಾಗುತ್ತಿರುವ ಸಂಗತಿಗಳ ಕುರಿತು ಯೋಚಿಸುವುದೂ ಇಲ್ಲ.

ಈ ನೆಲದಲ್ಲಿ ಕಾನೂನುಗಳಿಗೆ ಕೊರತೆ ... ಜಾಹೀರಾತುಗಳ ಮೇಲೆ ಕೂಡ ನಿರ್ಬಂಧ ವಿಧಿಸುವ ಅವಕಾಶವಿರುವ ಕಾನೂನುಗಳಿವೆ. ಆದರೆ ರಕ್ಷಕರೇ ಭಕ್ಷಕರಾಗುವ ಇಲ್ಲಿ ಯಾರನ್ನೂ ಕೇಳಬೇಕು.

ಮೊಬೈಲ್ ಕುರಿತ ಒಂದು ಜಾಹೀರಾತು ಮೊಬೈಲ್‌ನ ಮೇಲ್ಪದರ ಕನ್ನಡಿಯಂತೆ ಪ್ರತಿಫಲಿ ತೋರಿಸುವ ಹರಳನ್ನೂ ಹೊಂದಿದೆ. ಅದನ್ನು ಬೃಹತ್ ಕಟ್ಟಡದ ಮೇಲೆ ಇಟ್ಟುಕೊಂಡು ಪುಟ್ಟ ಹುಡುಗ ಉತ್ಸುಕತೆಯಿಂದ ನೋಡುತ್ತಾ ಕುಳಿತಿದ್ದಾನೆ ಮೇಲಿನ ಮೆಟ್ಟಿಲಿನಿಂದ ತುಂಡು ಲಂಗ ಧರಿಸಿದ ಯುವತಿ ಕೆಳಗಿಳಿದು ಬರುತ್ತಾಳೆ. ಇಂತಹ ಜಾಹೀರಾತುಗಳು ಎಂತಹ ಮೌಲ್ಯಗಳನ್ನು ಬಿತ್ತಬಲ್ಲವು. ಇದು ಯೋಚಿಸಬೇಕಾದ ಅಂಶವಲ್ಲವೇ?

ಇವುಗಳ ನಿಯಂತ್ರಣಕ್ಕೆ ಅನುಕೂಲ ವಾಗಬೇಕೆಂದೇ ಸೆನ್ಸಾರ್ ನಿಯಮಗಳ ಕುರಿತು ರಾಷ್ಟ್ರವ್ಯಾಪಿ ಚರ್ಚೆ ನಡೆಸಿ ಸ್ವಯಂ ನಿರ್ಬಂಧಗಳನ್ನೂ ಸೇರಿಸಿಕೊಂಡಂತೆ ಹಲವು ತಿದ್ದುಪಡಿಗಳೊಂದಿಗೆ ಪ್ರಸ್ತಾಪ ವೊಂದು ಕೇಂದ್ರ ಸಚಿವಾಲಯದ ಮುಂದಿದೆ. ಅದು ಬೆಳಕು ಕಂಡೀತೆಂದು ಹಂಬಲಿಸುತ್ತಲೇ ಕಂಡರೂ ಮಹಿಳೆಯರನ್ನು ಅಸಭ್ಯವಾಗಿ ಚಿತ್ರಿಸುವುದನ್ನೂ ನಿಷೇಧಿಸುವ ಕಾನೂನಿನಂತೆ ಹಲ್ಲಿಲ್ಲದ ಹಾವಾದರೇ?

.... ಕಂಪನಿಯೊಂದರ ದಬ್ಬಾಳಿಕೆ

ಪುಟ 11 ರಿಂದ

ನೀಡದೆ ವಿಪರೀತ ಏರಿಳಿತ ಮಾಡಿ ಕಾರ್ಮಿಕರುಗಳನ್ನು ಉದ್ದೇಶಪೂರ್ವಕವಾಗಿ ಪ್ರಚೋದಿಸಲು ಮುಂದಾಯಿತು. ವೇತನ ಏರಿಳಿತಗಳ ಕುರಿತು ಸಂಘದ ಪದಾಧಿಕಾರಿಗಳು ಆಡಳಿತ ವರ್ಗದವರನ್ನು ಕೇಳಲು ಹೊರಟರೆ 02.06.08ರಂದು ರಾತ್ರಿ 10.30ಕ್ಕೆ ಸಂಘದ ಉಪಾಧ್ಯಕ್ಷ ಹಾಗೂ 03.06.08ರಂದು ಬೆಳಿಗ್ಗೆ 5.30ಕ್ಕೆ ಸಂಘದ ಪದಾಧಿಕಾರಿಗಳನ್ನು ಅಮಾನತ್ತುಗೊಳಿಸಿತು. ಸಂಘದ ಮುಖ ... ಪದಾಧಿಕಾರಿಗಳನ್ನು ಅಮಾನತ್ತುಗೊಳಿಸಿದ್ದಕ್ಕೆ ಸಂಘದ ಎಲ್ಲಾ ಸದಸ್ಯರು ಕೂಡಲೇ ಕಾರ್ಖಾನೆ ಕಛೇರಿ ಮುಂದೆ ಮುಷ್ಕರ ಕುಳಿತರು. 02.06.08 ರಂದು ರಾತ್ರಿ 10.30 ರಿಂದ ಕಾರ್ಖಾನೆ ಹಾಜರಾದ ಎಲ್ಲಾ ಕಾರ್ಮಿಕರು ಮುಷ್ಕರಕ್ಕೆ ಕುಳಿತಾದ 04.06.08 ರಂದು ಪೊಲೀಸ್ ಇನ್ಸ್‌ಪೆಕ್ಟರ್ ಮೂಲಕ ಮುಷ್ಕರ ಕೈ ಬಿಡುವಂತೆ ಹಾಗೂ ಮೇಲ್ ಕಳಿಸುವುದಿಲ್ಲ ಎಂದು ಬರೆದು ಕೊಡಲು ತಿಳಿಸಿ ಎಲ್ಲರನ್ನು ಒಳಗೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಈ ಕುರಿತು ಇನ್ಸ್‌ಪೆಕ್ಟರ್‌ರವರು ಕೇಳಿದಂತೆ, ಪತ್ರ ನೀಡಿದಾಗ ಈ ಪತ್ರ ಸಾಕಾದರೂ ಎಲ್ಲರೂ Under Taking ಬರೆದುಕೊಡಬೇಕು, ಅಮಾನತ್ತು ಗೊಂಡಿರುವವರೂ ವಾಪಸ್ಸು ತಪ್ಪಾಯಿತೆಂದು ಇ ಮೇಲ್ ಕಳುಹಿಸಬೇಕು. ಬೇರೆ ತಪ್ಪೊಪ್ಪಿಗೆ ಪತ್ರ ಬರೆದುಕೊಡಬೇಕು. ಮುಂತಾಗಿ ಕೇಳಿ ಅಲ್ಲಿಯವರೆಗೆ ಕಾರ್ಖಾನೆಯ ಒಳಗೆ ಬಿಡುವುದಿಲ್ಲ ಎಂದು ಅಕ್ರಮ ಬೀಗಮುದ್ರೆ ಮಾಡಿದರು.

ಈ ಕಾನೂನುಬಾಹಿರ Lock out ಪ್ರಶ್ನಿಸಿ ಸಂಘ ಪತ್ರ ನೀಡಿದಾಗ ಆಡಳಿತ ಮಂಡಳಿ ತಾನು ಹಾಗೆ ಕೇಳೇ ಇಲ್ಲಾ ಅಮಾನತ್ತುಗೊಂಡವರನ್ನು ಬಿಟ್ಟು ಉಳಿದವರೆಲ್ಲರೂ ಕೆಲಸಕ್ಕೆ ಹಾಜರಾಗ ಬಹುದು ಎಂದು ತನ್ನ ರಾಗ ಬದಲಾಯಿಸಿದೆ.

... ಸಂಘದ ಸದಸ್ಯರು 06.06.08 ರಿಂದ ಕೆಲಸಕ್ಕೆ ಹಾಜರಾಗಿರುತ್ತಾರೆ. ಅಮಾನತ್ತು ವಜಾಗೊಂಡಿರುವವರ ಸಂಖ್ಯೆ 4 ಕ್ಕೆ ಏರಿದೆ. ಈಗ 09.06.08 ರಂದು ಕಾರ್ಮಿಕ ಭವನದ ಆಯುಕ್ತರಲ್ಲಿ ಆಡಳಿತ ಮಂಡಳಿಯು ಸಂಘ ಕಾನೂನು ಬಾಹಿರ ಮುಷ್ಕರ ನಡೆಸಿದೆ ಎಂದು ಪತ್ರ ನೀಡಿ ಸಂಧಾನಕ್ಕೆ ಕರೆದಿದೆ. ಇದು ಹೊಸಕೋಟೆ ಕೈಗಾರಿಕಾ ಪ್ರದೇಶದ ಎಲ್‌ಎಂ ಕಾರ್ಖಾನೆ ಕಾರ್ಮಿಕರು ಸಂಘಟಿತರಾಗಿ ಕಾರ್ಖಾನೆ ಆಡಳಿತ ಮಂಡಳಿ ಮುಂದೆ ತಮ್ಮ ಬೇಡಿಕೆಗಳ ಇಟ್ಟಿದ್ದಕ್ಕೆ ಪಡೆಯುತ್ತಿರುವ ಸವಲತ್ತುಗಳು.

ಖಾಸಗೀ ಕಾರ್ಖಾನೆಗಳಲ್ಲಿ ಖಾಯಂ ಕೆಲಸಗಾರರೆಸಿಕೊಂಡವರ ಪಡಿಪಟಾಲು ಸಂಘಟಿತರಾಗ ಹೋದರೆ ಅನುಭವಿಸಬೇಕಿರುವ ಮಾನಸಿಕ ಕಿರುಕುಳಗಳು.

ಮಕ್ಕಳ ಆರೋಗ್ಯ ಸಂರಕ್ಷಣೆಯಲ್ಲಿ ಮಹತ್ತರ ಪಾತ್ರವಹಿಸುವ ಲಸಿಕೆ(ವ್ಯಾಕ್ಸಿನ್)ಗಳ ತಯಾರಿಕೆಯ ಇತಿಹಾಸವೇನು? ಭಾರತ ಈ ನಿಟ್ಟಿನಲ್ಲಿ ಸಾಧಿಸಿದ್ದನ್ನು ಕಳೆದುಕೊಂಡು ಹಿಂದೆ ಹೆಜ್ಜೆ ಇಡುವಂತಹ ಪರಿಸ್ಥಿತಿಗೆ ಕಾರಣ ಏನು? ಯಾರು?

ದೇಶಕ್ಕೆ ಆರೋಗ್ಯವಂತ ಮಕ್ಕಳು ಬೇಡವೇ?

ಲಸಿಕಾ ಕ್ಷೇತ್ರದಲ್ಲಿ ನಡುಕ ಹುಟ್ಟಿಸಿದ ಭಾರತದ ಡ್ರಗ್ ಕಂಟ್ರೋಲ್ ಜನರಲ್

ಸಿಕೆಗಳು ರೋಗ ತಡೆಗಟ್ಟುವಿಕೆಗೆ ಹಾಗು ರೋಗ್ಯ ರಕ್ಷಣೆಗೆ ಉಪಯುಕ್ತವಾದ ಸಾಧನ, ಷ್ಟ್ರೀಯ ಆರೋಗ್ಯ ರಕ್ಷಣೆಯ ಪ್ರಾಥಮಿಕ ರೋಗ್ಯ ವ್ಯವಸ್ಥೆಯಲ್ಲಿ ಉಪಯೋಗಿಸಲಾಗುವ ಧನ. ನಮ್ಮ ದೇಶದಲ್ಲಿ ಈ ಲಸಿಕೆಗಳನ್ನು ಯಾರಿಸಲು ರಾಷ್ಟ್ರೀಯ ನೀತಿಯಿದೆಯೇ, ಲಸಿಕೆ ಯಾರಿಕೆಯಲ್ಲಿ ನಾವು ಸ್ವಾವಲಂಭಿ ಳಾಗಿದ್ದೇವೆಯೇ? ಇತ್ಯಾದಿ ಗಳನ್ನು ಈ ೇಖನದಲ್ಲಿ ನೋಡೋಣ.

ಭಾರತದಲ್ಲಿ 1978 ರವರೆಗೆ ಔಷಧ ೀತಿ, ಲಸಿಕಾ ನೀತಿಯಾಗಲಿ ಇರಲೇ ಲ್ಲವೆಂದರೆ ಆಶ್ಚರ್ಯವಾಗ ುದಲ್ಲವೇ? ಬ್ರಿಟೀಷರು ಭಾರತದಲ್ಲಿ ಮ್ಮ ಸೈನಿಕರ ಆರೋಗ್ಯ ಕಾಪಾಡಲು ಸಿಕೆಗಳ ಸಂಶೋಧನೆ ಮಾಡಲು ುಮಾರು 15 ಲಸಿಕಾ ಕೇಂದ್ರಗಳನ್ನು 890 ರ ಸುಮಾರಿಗೆ ಪ್ರಾರಂಭಿಸಿದರು. ಹ್ಯಾಫ್‌ಕಿನ್ ಂಬವರು 1897 ರಲ್ಲಿ ಭಾರತದಲ್ಲಿ ಮೊಟ್ಟ ೊದಲನೆ ಬಾರಿಗೆ ಪ್ಲೇಗ್ ಲಸಿಕೆಯನ್ನು ಮುಂಬೈನ ೆಗ್ ಪ್ರಯೋಗಾಲಯದಲ್ಲಿ ತಯಾರಿಸಿದರು. ಇಂದು ಹ್ಯಾಫ್‌ಕಿನ್ ಕೇಂದ್ರವೆಂಬ ಹೆಸರು ಡೆದಿದೆ. ಇದೇ ವೇಳೆಗೆ ಕೊಲ್ಕೊತ್ತಾದಲ್ಲಿ ್ಯಾನ್‌ಸನ್ ಅವರು ಕಾಲರಾ ಲಸಿಕೆಯನ್ನು ಕಂಡು ಡಿದರು.

ನಂತರದ ದಿನಗಳಲ್ಲಿ ಭಾರತದಲ್ಲಿ ಟಿಟೆನಸ್ ಾಕ್ಸಾಯ್ಡ, ಡಿಫ್ತೀರಿಯಾ ಟಾಕ್ಸಾಯ್ಡ, ಡಿ ಪಿ ಟಿ ುಂತಾದುವುಗಳನ್ನು ತಯಾರಿಸಲಾಯಿತು. ದರೆ ಈ ಬೆಳವಣಿಗೆ ಬಹಳ ದಿನಗಳವರೆಗೆ ುಂದುವರೆಯಲಿಲ್ಲ. ಬ್ರಿಟೀಷರು ಭಾರತೀಯ ಜ್ಞಾನಿಗಳಿಗೆ ಮಹತ್ವ ಕೊಡಲಿಲ್ಲ ಹಾಗೂ ಅವರನ್ನು ೂರವಿಟ್ಟರು. 1947 ರ ಸುಮಾರಿಗೆ, ಭಾರತ ಲಸಿಕಾ ಂಶೋಧನೆಯಲ್ಲಿ ಹಿಂದೆ ಬಿದ್ದಿತು. ಭಾರತ ೆಕ್ಟೇರಿಯಾದಿಂದ ತಯಾರಾಗುವ ಲಸಿಕೆಗಳನ್ನು ಮದು ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಯಿತು.

ಸ್ವಾತಂತ್ರ್ಯ ಬಂದ ಮೇಲೆ ಭಾರತ, ವಿಶ್ವ ಆರೋಗ್ಯ ಂಸ್ಥೆ ಹಾಗೂ ಯುನಿಸೆಫ್‌ನ ಸದಸ್ಯತ್ವ ಪಡೆಯಿತು. ದರೂ ಭಾರತದ ಲಸಿಕಾ ನೀತಿ 1978 ರವರೆಗೆ ೊಮುಗೊಳ್ಳಲಿಲ್ಲ. 1978 ರಲ್ಲಿ ವಿಶ್ವ ಆರೋಗ್ಯ ಂಸ್ಥೆ, 2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ ಂಬ ಘೋಷಣೆಯನ್ನು ಜಾರಿ ಮಾಡಿತು, ಅದನ್ನು ಾರತ ಅನುಷ್ಠಾನಕ್ಕೆ ತರಲು ಪ್ಪಿಕೊಂಡಿತು. ಈ ಸಮಯದಲ್ಲಿ ಕ್ಕಳಲ್ಲಿ ಕಂಡು ಬರುವ ಆರು ಾರಣಾಂತಿಕ ರೋಗದ ತೋಟಿಗೆ ತಂದ ಕಾರ್ಯಕ್ರಮವೇ ಇ. ಪಿ.ಐ.. ಇದರಲ್ಲಿ ಕ್ಷಯ, ಟಿಟೆನೆಸ್, ಡಿಫ್ತೀರಿಯಾ, ರ್ಟುಸಿಸ್, ಪೋಲಿಯೋ, ೈಫಾಯಿಡ್ ವಿರುದ್ಧ ಲಸಿಕೆಯನ್ನು ೊಡಲಾಗುವುದು. ಆದರೆ 1985 ಲ್ಲಿ ಲಸಿಕಾ ನೀತಿಯಲ್ಲಿ ದಲಾವಣೆ ತರಲಾಯಿತು. ದನ್ನು ಯು.ಐ. ಪಿ ಎಂದು ರೆಯಲಾಯಿತು. ಈ ಕಾರ್ಯಕ್ರಮದಲ್ಲಿ ೈಫಾಯಿಡ್ ಬದಲಿಗೆ ಮೀಸಲ್ಸ (ಧಡಾರ) ಲಸಿಕೆಯನ್ನು ಸೇರಿಸಿ ಕೊಳ್ಳಲಾಯಿತು.



ಡಾ. ಪ್ರಕಾಶ್ ಸಿ ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

ಭಾರತದಲ್ಲಿ ಲಸಿಕೆ ತಯಾರಿಕೆ ಪ್ರಯತ್ನಗಳು

ಾಶ್ಚರ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(ಪಾ.ಇ.ಇ):

ಈ ಕಂಪನಿ 100 ವರ್ಷಗಳಿಂದ ಲಸಿಕೆಗಳನ್ನು ತಯಾರಿಸುತ್ತ ಬಂದಿದೆ. ಇಲ್ಲಿ ಪೊಲಿಯೊ, ಡಿ.ಪಿ.ಟಿ, ಟಿ.ಟಿ, ಆಂಟೀ ರೇಬೀಸ್‌ವ್ಯಾಕ್ಸಿನ್ (ಹುಚ್ಚು ನಾಯಿ ಕಡಿತದ ರೋಗ) ಗಳನ್ನು ತಯಾರಿಸಲಾಗುತ್ತಿದೆ ಹಾಗು ರೇಬಿಸ್, ಜಾಪನೀಸ್ ಎಂಸೆಫೆಲೈಟಿಸ್ ಲಸಿಕೆಯ ಸಂಶೊಧನೆಯಾಗುತ್ತಿದೆ. ಲಸಿಕೆ ತಯಾರಿಕೆಗೆ ಇಲ್ಲಿ ತರಬೇತಿ ಕೊಡಲಾಗುವುದು. ಈ ಕೇಂದ್ರದಲ್ಲಿ ರೇಬಿಸ್ ಕಾಯಿಲೆಗೆ 24 ಘಂಟೆ ಚಿಕಿತ್ಸಾ ಕೇಂದ್ರವಿದೆ. ಇಲ್ಲಿ ರಾಷ್ಟ್ರೀಯ ಪೋಲಿಯೋ ಪ್ರಯೋಗಾಲಯವೂ ಇದೆ. ಈ ಕೇಂದ್ರ ಯು.ಐ.ಪಿ. ಕಾರ್ಯಕ್ರಮಕ್ಕೆ ನಿರಂತರವಾಗಿ ಲಸಿಕೆಯನ್ನು ಒದಗಿಸಿದೆ. ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿ.ಆರ್.ಐ): ಈ ಕಂಪನಿ 103 ವರ್ಷಗಳಿಂದ ಲಸಿಕೆಗಳನ್ನು ತಯಾರಿಸುತ್ತಾ ಬಂದಿದೆ. ಇಲ್ಲಿ ಡಿ.ಪಿ.ಟಿ, ಜಾಪನೀಸ್ ಎಂಸೆಫೆಲೈಟಿಸ್, ಯಲೋಫಿವರ್ ಲಸಿಕೆಗಳನ್ನಲ್ಲದೆ ಆಂಟೀ ರೇಬೀಸ್ ಸೀರಮ್ ಹಾಗೂ ಆಂಟೀ ಸ್ನೇಕ್ ವೆನಮ್‌ಗಳನ್ನು ತಯಾರಿಸುತ್ತಾರೆ.

ಬಿ. ಸಿ. ಜಿ. ವ್ಯಾಕ್ಸಿನ್ ಲ್ಯಾಬರೋಟರಿ: ಈ ಕಂಪನಿ 60 ವರ್ಷದಿಂದ ಬಿ.ಸಿ.ಜಿ. ಲಸಿಕೆಯನ್ನು ತಯಾರಿಸುತ್ತಾ ಬಂದಿದೆ.

ಈ ಮೂರು ಕಂಪನಿಗಳು ಕಡಿಮೆ ದರದ, ಭಾರತೀಯರಿಗೆ ಸೂಕ್ತವಾದ ಲಸಿಕೆಗಳನ್ನು ತಯಾರಿಸಿ ಸ್ವಾವಲಂಬನೆಗೆ ಸಹಾಯ ಮಾಡಿವೆ.

1911 ರಲ್ಲಿ ಕಸೌಲಿಯಲ್ಲಿ ರೆಬಿಸ್ ಲಸಿಕೆಯನ್ನು ತಯಾರಿಸಲಾಯಿತು, ಆದರೆ ಈಗ ದೊರಕುವ ಲಸಿಕೆಯನ್ನು ಹೊರದೇಶದಿಂದ ತರಿಸಲಾಗುತ್ತದೆ.

1948ರಲ್ಲಿ ಮೊದಲಿಗೆ ಬಿ.ಸಿ.ಜಿ. ಗೆ ಬೇಕಾಗುವ ತಂತ್ರಜ್ಞಾನವನ್ನು ವಿಶ್ವ ಆರೋಗ್ಯ ಸಂಸ್ಥೆಯ ಸಹಾಯದಿಂದ ಆಮದು ಮಾಡಿಕೊಳ್ಳಲಾಯಿತು.

1967 ರಲ್ಲಿ ಪಾಶ್ಚರ್ ಇನ್‌ಸ್ಟಿಟ್ಯೂಟ್ ಪೋಲಿಯೊ ಹನಿಯನ್ನು ಸ್ಥಳೀಯವಾಗಿ ತಯಾರಿಸಿದೆ. ಆದರೆ ಸ್ವಲ್ಪಸಮಯದ ನಂತರ ಈ ಲಸಿಕೆ ಗುಣಮಟ್ಟದ್ದಲ್ಲವೆಂದು ಆದರ ತಯಾರಿಕೆಯನ್ನು ಸಂಪೂರ್ಣ ನಿಲ್ಲಿಸಲಾಯಿತು. ಆದರೆ ಅದೇ ಲಸಿಕೆಯನ್ನು ಮನಃ ಪರೀಕ್ಷಿಸಿದಾಗ ಆ ತೀರ್ಮಾನ ತಪ್ಪೆಂದು ತಿಳಿದು ಬಂದಿತು. ಈ ತಪ್ಪು ತೀರ್ಮಾನಕ್ಕೆ ಬಂದ ಸಂಸ್ಥೆ ಸರಕಾರದ ರಾಷ್ಟ್ರೀಯ ಸಾಂಕ್ರಾಮಿಕ ರೋಗ ಸಂಸ್ಥೆ. ಅಂದಿನಿಂದ ಭಾರತದಲ್ಲಿ ಹನಿರೂಪದ ಪೋಲಿಯೊ ತಯಾರಿಕೆ ನಿಂತೇ ಹೋಯಿತು.

1987ರಲ್ಲಿ ಭಾರತ ಇಮ್ಯುನೊಲಾಜಿಕಲ್ಸ್ ಹಾಗೂ ಬಯೋಲಾಜಿಕಲ್ಸ್ ಕಾರ್ಪೋರೇಶನ್ ಲಿಮಿಟೆಡ್ ಎಂಬ ಸಾರ್ವಜನಿಕ ಉದ್ದಿಮೆಯನ್ನು ಸ್ಥಾಪಿಸಿತು. ಅದು ಪ್ರಾರಂಭದಲ್ಲಿ ರಷ್ಯಾದಿಂದ ಹನಿ ಪೋಲಿಯೊ ಲಸಿಕೆಯನ್ನು ಆಮದು ಮಾಡಿಕೊಂಡಿತು ಹಾಗೂ ಯುನಿಸೆಫ್‌ಗೆ 70 ದಶ ಲಕ್ಷ ಯುನಿಟ್‌ಗಳನ್ನು ಮಾರಾಟ ಮಾಡಿ 8 ದಶಲಕ್ಷ ರೂಪಾಯಿ ಲಾಭ ಪಡೆದಿತ್ತು. ಆದರೆ ಭಾರತ ಸರಕಾರ ಆ ಸಂಸ್ಥೆಯನ್ನು 2000 ದ ಇಸವಿಯಲ್ಲಿ ರೋಗಗ್ರಸ್ಥ ಉದ್ಯಮವೆಂದು ಪರಿಗಣಿಸಿತು (ಕಾರಣವನ್ನು ನೀಡಲಾಗಿಲ್ಲ) ಆದರೆ ಇತ್ತೀಚಿಗೆ ಪೆನೇಶಿಯಾ ಬಯೋಟೆಕ್ ಎಂಬ ಭಾರತೀಯ ಖಾಸಗಿ ಸಂಸ್ಥೆ ಹನಿ ರೂಪದ ಪೋಲಿಯೊ ಲಸಿಕೆ ತಯಾರಿಸಿ ಯುನಿಸೆಫ್‌ಗೆ ಮಾರುತ್ತಿದೆ. ಪೆನೇಶಿಯಾ, ಲಸಿಕೆಯನ್ನು ರಷ್ಯಾದ ಬದಲು ಇಂಡೋನೇಶಿಯಾ, ಇಟಲಿಯಿಂದ ಆಮದು ಮಾಡಿಕೊಂಡು ರಫ್ತು ಮಾಡುತ್ತಿದೆ.

1989 ರಲ್ಲಿ ಕೇಂದ್ರ ಸರಕಾರ ಗುರ್‌ಗ್ಗಾಂವ್‌ನಲ್ಲಿರುವ ಇಂಡಿಯನ್ ವ್ಯಾಕ್ಸೀನ್ ಕಾರ್ಪೋರೇಶನ್ ಲಿಮಿಟೆಡ್ ಎಂಬ ಕಂಪನಿಯನ್ನು ಸ್ಥಾಪಿಸಿತು ಹಾಗೂ ಫ್ರಾನ್ಸ್‌ನ ಸಾರ್ವಜನಿಕ ಕ್ಷೇತ್ರದ ಕಂಪನಿಯಾದ ಲಿಯಾನ್ಸ್‌ನಿಂದ ತಂತ್ರಜ್ಞಾನ ಪಡೆದು ಧಡಾರ ಲಸಿಕೆಯನ್ನು ತಯಾರಿಸಲು ಪ್ರಾರಂಭಿಸಿತು.

1994 ರಲ್ಲಿ ಭಾರತ ಸರಕಾರ



ಕೊಲ್ಕೊತ್ತಾದಲ್ಲಿರುವ ಬೆಂಗಾಲ್ ಇಮ್ಯುನಿಟಿ ಎಂಬ ನಷ್ಟದಲ್ಲಿದ್ದ ಖಾಸಗಿ ಕಂಪನಿಯನ್ನು ಖರೀದಿಸಿ ಅಲ್ಲಿ ಟಿಟೆನಸ್ ಟಾಕ್ಸಾಯಿಡ್, ಡಿಫ್ತೀರಿಯಾ ಟಾಕ್ಸಾಯಿಡ್, ಡಿ.ಪಿ.ಟಿ. ತಯಾರಿಸಲು ಪ್ರಾರಂಭಿಸಿತು. ಆದರೆ ಒಂದು ದಶಕದ ನಂತರ ಆ ಕಂಪನಿಯನ್ನು ಸರಕಾರವೇ ಆರ್ಥಿಕ ಕಾರಣಕ್ಕಾಗಿ ಮುಚ್ಚಿ ಹಾಕಿತು.

ಚುಚ್ಚು ಮದ್ದು ರೂಪದ ಪೋಲಿಯೋ ಲಸಿಕೆಯನ್ನು ಕೂಡಾ, ಪೋಲಿಯೋ ಹತೋಟಿಯಲ್ಲಿ ಉಪಯೋಗಿಸ ಬಹುದು.ಆ ಲಸಿಕೆ ಹೆಚ್ಚು ಪರಿಣಾಮಕಾರಿ, ಅಪಾಯ ರಹಿತವಾದದ್ದು ಆದರೆ ದುಬಾರಿ. ಮುಂದುವರೆದ ರಾಷ್ಟ್ರಗಳಲ್ಲಿ ಅದನ್ನು ಬಳಸಲಾಗುತ್ತಿದೆ. ಆದರೆ ಮುಂದುವರೆದ ರಾಷ್ಟ್ರಗಳು ಹನಿ ರೂಪದ ಲಸಿಕೆಯನ್ನು ಉಪಯೋಗಿಸಲು ಭಾರತದ ಮೇಲೆ ಒತ್ತಡ ಹೇರುತ್ತಿವೆ. ಏಕೆ ಈ ಇಬ್ಬಗೆಯ ನೀತಿ? 1987 ರಲ್ಲಿ ಭಾರತ ಸರಕಾರ ಚುಚ್ಚು ಮದ್ದು ರೂಪದ ಪೋಲಿಯೋ ಲಸಿಕೆಯನ್ನು ತಯಾರಿಸಲು ಇಂಡಿಯನ್ ವ್ಯಾಕ್ಸಿನ್ ಕಾರ್ಪೋರೇಶನ್ ಎಂಬ ಸಾರ್ವಜನಿಕ ಕ್ಷೇತ್ರದ ಅತ್ಯಾಧುನಿಕ ಸಂಸ್ಥೆಯನ್ನು ಪ್ರಾರಂಭಿಸಿತು. ಈ ಕಂಪನಿ ಫ್ರಾನ್ಸಿನಿಂದ ತಂತ್ರ ಜ್ಞಾನವನ್ನು ಆಮದು ಮಾಡಿಕೊಳ್ಳುವುದಾಗಿ ತೀರ್ಮಾನಿಸಿ ಹಣವನ್ನು ಫ್ರಾನ್ ಕಂಪನಿಗೆ ನೀಡಿತು. ಆದರೆ ಫ್ರಾನ್ಸ್ ದೇಶ ತನ್ನ ಕಂಪನಿಯನ್ನು ಕೆನಡ ದೇಶಕ್ಕೆ ಮಾರಿದ್ದರಿಂದ ಭಾರತ ಈ ಪ್ರಯತ್ನವನ್ನು ಕೈ ಬಿಡಬೇಕಾಯಿತು. ಈಗ ಇಂಡಿಯನ್ ವ್ಯಾಕ್ಸೀನ್ ಕಾರ್ಪೋರೇಶನ್ ಕಂಪನಿಯನ್ನು ಮಿದುಳಿನ ಸಂಶೋದನೆಗೆ ಬಳಸಲಾಗುವುದಂತೆ!

ಭಾರತದಲ್ಲಿ ದೊರಕುವ ಲಸಿಕೆಗಳು

ಡಿ.ಟಿ.- ಡಿಫ್ತೀರಿಯಾ ಹಾಗೂ ಟಿಟೆನೆಸ್ ಕಾಯಿಲೆ ತಡೆಗಟ್ಟ ಬಹುದು.

ಡಿ.ಪಿ.ಟಿ.- ಡಿಫ್ತೀರಿಯಾ, ಪರ್ಟುಸಿಸ್, ಟಿಟೆನೆಸ್, ತಡೆಗಟ್ಟ ಬಹುದು.

ಟಿ. ಟಿ. - ಟಿಟೆನೆಸ್ ತಡೆಗಟ್ಟ ಬಹುದು.

ಜಾಪನೀಸ್ ಎಂಸೆಫೆಲೈಟಿಸ್
ಯಲೋಫಿವರ್
ಪೋಲಿಯೊ
ಮೆನಿಂಜೈಟಿಸ್,
ನಿಮೋಕಾಕಲ್,
ಬಿ. ಸಿ ಜಿ,
ಮೀಸಲ್ಸ್,
ಹೆಪೆಟೈಟಿಸ್ ಎ. ಬಿ,
ಇನ್‌ಫ್ಲುಯಂಜಾ,
ಸೀರಮ್ (ರೋಗನಿರೋಧಕ ಶಕ್ತಿ ಹೆಚ್ಚಿಸುವ ಔಷಧಗಳು)
ಡಿಫ್ತೀರಿಯಾ
ಆಂಟೀ ರೇಬೀಸ್
ಆಂಟೀ ಸ್ನೇಕ್ ವೆನಮ್

ಭಾರತದಲ್ಲಿ ಲಸಿಕಾ ನೀತಿ ರೂಪಿಸಲು ತಡವಾದರೂ ಲಸಿಕೆಗಳು ಸ್ಥಳೀಯವಾಗಿ ತಯಾರಾಗುತ್ತಿದ್ದವು. ಅದಲ್ಲದೆ ಇತ್ತೀಚಿಗೆ ಈ ತಯಾರಿಕೆಯ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿದೆ.

ಪಾಶ್ಚರ್ ಇನ್ಸಿಟಿಟ್ಯೂಟ್ ಆಫ್ ಇಂಡಿಯಾ - ಡಿ.ಪಿ.ಟಿ. 40 ದಶ ಲಕ್ಷ ಯುನಿಟ್‌ನಿಂದ 70 ದಶ ಲಕ್ಷ ಯುನಿಟ್,

ಟಿ.ಟಿ. 35 ದಶ ಲಕ್ಷ ಯುನಿಟ್‌ನಿಂದ 180 ದಶ ಲಕ್ಷ ಯುನಿಟ್,

ಡಿ.ಟಿ. 15 ದಶ ಲಕ್ಷ ಯುನಿಟ್‌ನಿಂದ 70 ದಶ ಲಕ್ಷ ಯುನಿಟ್‌ಗಳು . ಲಸಿಕೆಯ ತಯಾರಿಕೆಯಲ್ಲಿ ಸ್ವಾಲಂಬನೆಗೆ ಪ್ರಯತ್ನಗಳಾಗಿವೆ. ಆದರೆ ಸರಕಾರವೇ ಈ ಪ್ರಯತ್ನಗಳನ್ನು ಮೊಟುಕು ಗೊಳಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಇದೇ ಸಮಯ ಲಸಿಕೆಯ ಖಾಸಗಿ ಉದ್ಯಮ ಸರಕಾರದ ಸ್ಥಾನವನ್ನು ಆಕ್ರಮಿಸಿ ಸ್ವಾವಲಂಬನೆಗೆ ಅಡ್ಡಿ ಉಂಟುಮಾಡುತ್ತಿವೆ. ಸಾರ್ವಜನಿಕ ಕ್ಷೇತ್ರದ ಕಂಪನಿಗಳ ಲೈಸೆನ್ಸ್‌ನ್ನು ಕಿತ್ತುಕೊಳ್ಳಲಾಯಿತು. !

ಜನವರಿ 15, 2008 ರಂದು ಭಾರತದ ಡ್ರಗ್ ಕಂಟ್ರೋಲ್ ಜನರಲ್ ಅವರು ಭಾರತದ ಲಸಿಕಾ ತಯಾರಿಕೆಯ ಕಂಪನಿಗಳಾದ ಪ್ಯಾಶ್ಚರ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ(ಪಾ.ಇ.ಇ), ಸೆಂಟ್ರಲ್ ರಿಸರ್ಚ ಇನ್‌ಸ್ಟಿಟ್ಯೂಟ್ (ಸಿ.ಆರ್.ಐ), ಬಿ. ಸಿ. ಜಿ. ವ್ಯಾಕ್ಸಿನ್ ಲ್ಯಾಬರೋಟರಿಗಳ ಲೈಸನ್ಸ್‌ನ್ನು ರದ್ದುಗೊಳಿಸಿದ್ದಾರೆ. ಈ ಕಂಪನಿಗಳು ಲಸಿಕಾ ತಯಾರಿಕೆಗೆ ಒಳ್ಳೆಯ ಗುಣಮಟ್ಟ ಪದ್ಧತಿಯನ್ನು ಉಪಯೋಗಿಸುತ್ತಿಲ್ಲ ಎಂಬುದಕ್ಕಾಗಿ ಲೈಸೆನ್ಸ್‌ಗಳನ್ನು ರದ್ದು ಮಾಡಿರುವುದಾಗಿ ತಿಳಸಿದ್ದಾರೆ. ಇದಲ್ಲದೆ ಕಂಪನಿಯಲ್ಲಿರುವ ಲಸಿಕೆಯ ದಾಸ್ತಾನನ್ನು ಕೂಡ ಯಾರಿಗೂ ಉಪಯೋಗಿಸಲು ನೀಡಬಾರದು ಎಂದು ನಿಷೇದ ಹಾಕಲಾಗಿದೆ. ಔಷಧಿ ನಿಯಂತ್ರಣದ ಈ ಕ್ರಮ ಔಷದಿ ಕ್ಷೇತ್ರದಲ್ಲಿ ನಡುಕ ಹುಟ್ಟಿಸಿದೆ. ಕಾರಣ ಈ ಕ್ರಮದಿಂದ ಉಂಟಾಗುವ ಲಸಿಕೆಯ ಕೊರತೆಯನ್ನು ಸರಕಾರ ಹೇಗೆ ಸರಿಪಡಿಸಲು ಸಾಧ್ಯ? ○

ಜಗದಗಲ

ಶರತ್‌ಚಂದ್ರ

ಯುರೋಪಿಯನ್ ಒಕ್ಕೂಟ ಒಪ್ಪಂದದ ವಿರುದ್ಧ ಐರಿಷ್ ಮತ

ಐರಿಷ್ ಜನ ಯುರೋಪಿಯನ್ ಒಕ್ಕೂಟವನ್ನು ಬಿಕ್ಕಟ್ಟಿಗೆ ಸಿಲುಕಿಸಿದ್ದಾರೆ. ಯುರೋಪಿಯನ್ ಒಕ್ಕೂಟದ ಸಂವಿಧಾನದಲ್ಲಿ ಬದಲಾವಣೆ ತರುವ ಪ್ರಸ್ತಾವಗಳನ್ನು, ಆ ಬಗ್ಗೆ ನಡೆದ ಜನಮತಸಂಗ್ರಹದಲ್ಲಿ ತಿರಸ್ಕರಿಸಿದ್ದಾರೆ. ಲಿಸ್ಬನ್ ಒಪ್ಪಂದ ಎಂದು ಕರೆಯಲಾಗುವ ಈ ಪ್ರಸ್ತಾವಗಳು ಯುರೋಪಿಯನ್ ಒಕ್ಕೂಟದ' ಸಂವಿಧಾನದಲ್ಲಿ ಅಧಿಕಾರವನ್ನು (ಬ್ರಸ್ಸೆಲ್ಸ್ ನಲ್ಲಿ) ಕೇಂದ್ರೀಕರಿಸುವ ಮತ್ತು ಪ್ರತಿ ದೇಶದ ಸ್ವಾಯತ್ತತೆಯನ್ನು ಕಡಿಮೆ ಮಾಡುವ ತೀವ್ರ ಬದಲಾವಣೆಗಳನ್ನು ಹೊಂದಿದೆ. ಐರಿಷ್ ಸಂವಿಧಾನದ ಹಲವು ಮೂಲ ಆಶಯಗಳನ್ನು ಅದು ಉಲ್ಲಂಘಿಸುತ್ತದೆ ಎಂದು ಅದನ್ನು ತಿರಸ್ಕರಿಸುವ ಬಗ್ಗೆ ಪ್ರಚಾರ ಮಾಡಿದವರ ಅಭಿಪ್ರಾಯ. ಪ್ರಸ್ತಾವದ ಪರ ಶೇ.46.6 ಮತ ಬಿದ್ದರೆ, ವಿರುದ್ಧ ಶೇ.53.4 ಮತ ಬಿದ್ದಿದೆ. ಸರ್ಕಾರ ಮತ್ತು ಪ್ರಮುಖ ರಾಜಕೀಯ ಪಕ್ಷಗಳು ಪ್ರಸ್ತಾವದ ಪರ ಪ್ರಚಾರ ಮಾಡಿದ್ದರೂ ಅದಕ್ಕೆ ಬಹುಮತ ಸಿಗಲಿಲ್ಲ ಎಂಬುದು ಗಮನಾರ್ಹ.

ಇತ್ತೀಚೆಗೆ ವಿಸ್ತರಿಸಿದ 27 ದೇಶಗಳ ಯುರೋಪಿಯನ್ ಒಕ್ಕೂಟದ ಸಂವಿಧಾನದಲ್ಲಿ ಮಹತ್ವದ ಬದಲಾವಣೆಗಳನ್ನು ಸರ್ಕಾರಗಳು ಒಪ್ಪಿವೆ, ಆಯಾ ದೇಶಗಳ ಸಂವಿಧಾನದ ಪ್ರಕಾರ ಅವನ್ನು ಪಾರ್ಲಿಮೆಂಟು ಅಥವಾ ಜನಮತ ಸಂಗ್ರಹ ಮೂಲಕ ಇದಕ್ಕೆ ಒಪ್ಪಿಗೆ ಪಡೆಯಬೇಕು. ಈ ವರೆಗೆ 15 ದೇಶಗಳು ಅಂತಹ ಒಪ್ಪಿಗೆ ಕೊಟ್ಟಿವೆ. ಐರ್ಲೆಂಡ್ ಬಿಟ್ಟರೆ ಇತರ ಎಲ್ಲಾ ದೇಶಗಳು ಪಾರ್ಲಿಮೆಂಟರಿ ಒಪ್ಪಿಗೆ ಕೊಟ್ಟಿವೆ. ಐರ್ಲೆಂಡ್ ಮಾತ್ರ ಜನಮತ ಸಂಗ್ರಹ ನಡೆಸಿದೆ. ಲಿಸ್ಬನ್ ಒಪ್ಪಂದದ ಪ್ರಕಾರ ಯಾವುದೇ ದೇಶ ಅದನ್ನು ತಿರಸ್ಕರಿಸಿದರೂ, ಒಪ್ಪಂದದ ಪ್ರಸ್ತಾವಗಳನ್ನು ಪುನಃ ಚರ್ಚಿಸಬೇಕು. ಆದ್ದರಿಂದ ಐರಿಷ್ ತಿರಸ್ಕಾರ ತೀವ್ರ ಬಿಕ್ಕಟ್ಟಿಗೆ ಕಾರಣವಾಗಿದೆ.

ಮುಂದೇನು ? ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿದೆ. ಉಳಿದ ದೇಶಗಳು ಅವುಗಳ ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ ನೋಡೋಣ ಎಂದು ಕೆಲವರ ಅಭಿಪ್ರಾಯ. ಇಲ್ಲ. ಈಗಲೇ ಅಗತ್ಯ ಬದಲಾವಣೆಗಳನ್ನು ಚರ್ಚಿಸಬೇಕು ಎಂದು ಇನ್ನೊಂದು ಅಭಿಪ್ರಾಯ. ಹೊಸ ಸಂವಿಧಾನ ಒಕ್ಕೂಟಕ್ಕೆ ಅಧ್
ವಿದೇಶ ಮತ್ತು ರಕ್ಷಣಾ ಮಂತ್ರಿ ನೇಮಿಸುವ ಮೂ
ದೇಶಗಳ ರಾಜಕೀಯ ಸ್ವಾಯತ್ತತೆಯನ್ನು ಕಡ
ಮಾಡುತ್ತದೆ. ದಶಕಗಳ ಹೋರಾಟದ ನಂ
ಸಂವಿಧಾನದಲ್ಲಿ ಅಳವಡಿಸಲಾದ ಕಲ್ಯಾಣ ರಾ
ಕ್ರಮಗಳನ್ನು ಈ ಸಂವಿಧಾನ ಸಡಿಲಗೊಳಿಸು
ಅಥವಾ ಕಳಚಿ ಹಾಕುತ್ತದೆ. ನೀತಿ
ರೂಪಿಸುವಿಕೆಯಲ್ಲಿ ಜನಸಾಮಾನ್ಯರ ಪಾತ್ರ ಮ
ಆ ಮೂಲಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊ
ಗೊಳಿಸುತ್ತದೆ. ದೈತ್ಯ ಯುರೋಪಿಯನ್ ಬ
ರಾಷ್ಟ್ರೀಯ ಕಂಪನಿಗಳ ಬಲ ಹೆಚ್ಚಿಸುತ್ತದೆ.

ನ್ಯಾಯಾಧೀಶರ ಮರು ನೇಮಕಾತಿಗೆ ಪಾಕಿಸ್ತಾನದಲ್ಲಿ 'ದೀರ್ಘ ಪಯಣ'

ಅಧ್ಯಕ್ಷ ಮುಶರಫ್ ವಜಾ ಮಾಡಿದ್ದ ನ್ಯಾಯಾಧೀಶರ ಮರು ನೇಮಕಾತಿ ಮಾಡಬೇಕು ಎಂಬ ಒತ್ತಾಯದ ಸುತ್ತ ಭಾರೀ ಚಳುವಳಿ ನಡೆಯುತ್ತಿದೆ. ಇದು ಪಾಕಿಸ್ತಾನದಲ್ಲಿ ಪ್ರಮುಖ ರಾಜಕೀಯ ಬೆಳವಣಿಗೆಗಳಿಗೆ ಕಾರಣವಾಗಬಹುದು. ಇದರ ಜತೆ ಈ ಸಂವಿಧಾನ-ಬಾಹಿರ ಕ್ರಮ ಕೈಗೊಂಡು ಆ ಮೇಲೆ ಅದೇ ರೀತಿಯ ಹಲವು ಕ್ರಮಗಳ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾದ ಮುಶರಫ್ ರಾಜಿನಾಮೆ ಕೊಡಬೇಕು. ಅವರು ರಾಜಿನಾಮೆ ಕೊಡದಿದ್ದರೆ ಆಸ್ಥಾನದಿಂದ ಅವರನ್ನು ತೆಗೆದುಹಾಕಬೇಕು ಎಂಬ ಒತ್ತಾಯ ಸಹ ಸೇರಿದೆ. ಈ ಒತ್ತಾಯಗಳ ಬೆಂಬಲಾರ್ಥವಾಗಿ ದೂರದ ಮುಲ್ತಾನಿನಿಂದ ರಾಜಧಾನಿಗೆ ಒಂದು 'ದೀರ್ಘ ಪಯಣ'ವನ್ನು ಸಂಘಟಿಸಲಾಗಿದ್ದು ಅದು ಭಾರೀ ರ್‍ಯಾಲಿಯಲ್ಲಿ ಕೊನೆಗೊಂಡಿತು.

ಈ 'ದೀರ್ಘ ಪಯಣ' ವನ್ನು ನ್ಯಾಯಾಧೀಶರ ವಜಾ ಸಂದರ್ಭದಿಂದಲೂ ನಡೆಸಿಕೊಂಡು ಬಂದಿದ್ದ ಲಾಯರುಗಳ ಯೂನಿಯನ್ ಸಂಘಟಿಸಿತ್ತು. ಇದಕ್ಕೆ ಭಾರೀ ಜನಬೆಂಬಲ ವ್ಯಕ್ತವಾದದ್ದು ಅಲ್ಲದೆ ಆಳುವ ರಂಗದ ನವಾಜ್ ಶರೀಫರ ನಾಯಕತ್ವದ ಮುಸ್ಲಿಂ ಲೀಗ್, ಇಮ್ರಾನ್ ಖಾನ್ ಅವರ 'ತೆಹ್ರೀಕ್-ಎ-ಇನ್ಸಾಫ್', ಜಮಾತೇ ಇಸ್ಲಾಮೀ ಮುಂತಾದ ರಾಜಕೀಯ ಪಕ್ಷಗಳು ಸಕ್ರಿಯವಾಗಿ ಪಾಲುಗೊಂಡವು. ಈ 'ದೀರ್ಘ ಪಯಣ' ಪಾಕಿಸ್ತಾನದ ಬಹುಪಾಲು ಕ್ರಮಿಸುವ 'ಗ್ರಾಂಡ್ ಟ್ರಂಕ್' ಹೆದ್ದಾರಿಯಲ್ಲಿ ಅಮೆ ನಡಿಗೆಯಲ್ಲಿ ನಡೆಯಿತು. ಅಲ್ಲಲ್ಲಿ ರ್‍ಯಾಲಿಗಳು ನಡೆದವು. ಲಾಹೋರ್ ನಲ್ಲಿ ದೊಡ್ಡ ರ್‍ಯಾಲಿ ನಡೆಯಿತು. ಅಲ್ಲಿ ನವಾಜ್ ಶರೀಫ್ ಸ್ವತಃ ಭಾವಾವೇಶ ಭರಿತವಾಗಿ ಮಾತನಾಡಿದರು. ಇಸ್ಲಾಮಾಬಾದ್ ನಲ್ಲೂ ರ್‍ಯಾಲಿಗೆ ಸರ್ಕಾರ ಅಡ್ಡಿ ಬರಲಿಲ್ಲ. ಪಾರ್ಲಿಮೆಂಟು, ಅಧ್ಯಕ್ಷೀಯ ಭವನದ ತೀರಾ ಹತ್ತಿರ ಹೋಗದಂತೆ ತಡೆಯಲಾಯಿತು.

ಈಗಾಗಲೇ ಆಳುವ ರಂಗದಲ್ಲಿ ನ್ಯಾಯಾಧೀಶರ ಮರು ನೇಮಕಾತಿ ಮತ್ತು ಮುಶರಫ್ ಅಧ್ಯಕ್ಷರಾಗಿ ಮುಂದುವರೆಯುವ ಬಗ್ಗೆ ಪಿ.ಪಿ.ಪಿ. ಮತ್ತು ಮುಸ್ಲಿಂ ಲೀಗ್ (ಶರೀಫ್) ಗಳ ನಡುವೆ ತೀವ್ರ ಭಿನ್ನಾಭಿಪ್ರಾಯ ಇದೆ. ನ್ಯಾಯಾಧೀಶರ ಮರು ನೇಮಕಾತಿ ಕೂಡಲೇ ಆಗಬೇಕು. ಇದಕ್ಕೆ ಅಗತ್ಯ ಕ್ರಮಗಳನ್ನು ಪಾರ್ಲಿಮೆಂಟು ಮುಂದೆ ಮಂಡಿಸಬೇಕು. ಮುಶರಫ್ ಅಧ್ಯಕ್ಷರಾಗಿ ಮುಂದುವರೆಯ ಬಾರದು. ಇದು ಮುಸ್ಲಿಂ ಲೀಗ್ ನಿಲುವು. ಪಿ.ಪಿ.ಪಿ. ಅಮೆರಿಕದ ಸರ್ಕಾರದ ಜತೆ ಚುನಾವಣೆ-ಪೂರ್ವ ಒಪ್ಪಂದ ಮತ್ತು ಆ ಮೇಲೆ ಒತ್ತಡದಿಂದ ಈ ಎರಡೂ ವಿಷಯಗಳಲ್ಲಿ ಸಮಜಾಯಿಷಿ ನೀತಿ ಅನುಸರಿಸುತ್ತಿದೆ. ಅದರ ಮೇಲೆ ಒತ್ತಡ ಹೇರಲು ಮುಸ್ಲಿಂ ಲೀಗ್ ಮಂತ್ರಿಗಳು ಆಗಲೇ ರಾಜೀನಾಮೆ ಕೊಟ್ಟಿದ್ದಾರೆ.

ಪಾಕಿಸ್ತಾನದ ರಾಜಕೀಯ ಅಸ್ಥಿರತೆಯ ಹಿನ್ನೆಲೆಯಲ್ಲಿ ಅದರ ಅಣ್ವಸ್ತ್ರಗಳು 'ಭಯೋತ್ಪಾದ
ಕೈ ಸೇರದಂತೆ ಆ ದೇಶದ ಒಳಗೆ ಏಕಪಕ್ಷೀ
ಮಿಲಿಟರಿ ಕ್ರಮ ಕೈಗೊಳ್ಳಬಹುದು. ಮುಶರ
ರಾಜಕೀಯ ಸ್ಥಿರತೆಗೆ ಅಧ್ಯಕ್ಷ
ಮುಂದುವರೆಯುವುದು ಅಗತ್ಯ ಎ
ನೇರ-ಪರೋಕ್ಷ ಅಮೆರಿಕನ್ ಸರ್ಕಾರದ ನಿಲ
ಮತ್ತು ತಾಲಿಬಾನ್ ವಿರುದ್ಧ ಯುದ್ಧದ ಹೆಸ
ಪಾಕಿಸ್ತಾನದ ಗಡಿ ಪ್ರದೇಶಗಳಲ್ಲಿ ಬಾಂಬ್ ದ
ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸಿ
ಮಿಲಿಟರಿ ಬಳಸಿ ದೇಶದ ಆಂತರಿಕ ವಿಷಯಗ
ಅಮೆರಿಕನ್ ಮೂಗು ತೂರಿಸುವಿಕೆ ವ
ಪ್ರಜಾಪ್ರಭುತ್ವವನ್ನು ಹೊಸಕಿ ಹಾಕುವ ಹುನ್ನಾ
ವಿರುದ್ಧ ತೀವ್ರ ಜನಾಭಿಪ್ರಾಯ ರೂಪಿತವಾಗಿ
ಅಮೆರಿಕನ್ ಸರ್ಕಾರ ಮತ್ತು ಅದರ ಬಾಲಬ
ಪಾಕಿಸ್ತಾನದ ಮಿಲಿಟರಿ ಹಲವು ದಶಕಗಳ
ನಡೆಸಿಕೊಂಡು ಬಂದಿರುವ ಆಟ ನಡೆಯಲಿ
ಎಂಬ ಎಲ್ಲಾ ಸೂಚನೆಗಳು ಇವೆ.

.....ರೈತರ ಆತ್ಮಹತ್ಯೆಗಳು

ಪುಟ 15 ರಿಂದ

ಡಿಸೆಂಬರ್ 2003 ರ ನಡುವೆ ಮಾಡಿದ ಸರ್ವೇ ಪ್ರಕಾರ ಸಂಸ್ಥೆಗಳಿಂದ ಪಡೆಯುತ್ತಿದ್ದ ಸಾಲ ಶೇ. 64 ರಿಂದ ಶೇ. 57ಕ್ಕೆ ಇಳಿಯಿತು. ಆಂಧ್ರದಲ್ಲಿ 34 ರಿಂದ 27ಕ್ಕೆ, ಕರ್ನಾಟಕದಲ್ಲಿ 78 ರಿಂದ 67ಕ್ಕೆ, ಮಧ್ಯಪ್ರದೇಶದಲ್ಲಿ 73 ರಿಂದ 59, ಪಂಜಾಬಿನಲ್ಲಿ 79 ರಿಂದ 56 ವರೆಗೆ ಇಳಿಯಿತು. ಅಲ್ಲದೆ ರಿಯಾಯತಿ ಸಾಲ ಶೇ. 4 ದಿಂದ ಶೇ. 2 ಗೆ ಇಳಿಯಿತು. ಕೃಷಿ ಋಣದ ಸರಳೀಕೃತ ಉಪಾಯ 'ಕಿಸಾನ್ ಕ್ರೆಡಿಟ್ ಕಾರ್ಡ್'. ಆದರೆ ಈ ಸೌಲಭ್ಯ ಪಡೆದವರ ಸಂಖ್ಯೆ ಅತ್ಯಂತ ಕಡಿಮೆ. ಅಂದರೆ ಸರಾಸರಿ 2.6. ಈ ದರ ಆಂಧ್ರದಲ್ಲಿ ಶೇ. 7, ಮಧ್ಯಪ್ರದೇಶದಲ್ಲಿ 2.8, ಹರ್ಯಾಣದಲ್ಲಿ 1.8, ಪಂಜಾಬಿನಲ್ಲಿ 1.6, ಮಹಾರಾಷ್ಟ್ರದಲ್ಲಿ 1.2 ಮತ್ತು ಕರ್ನಾಟಕದಲ್ಲಿ ಶೇ. 0.8 - ಈ ಬಗೆಯಲ್ಲಿದೆ.

ಸಂಸ್ಥಾಗತ ಸಾಲ ದೊರಕದೆ ಇದ್ದಾಗ, ಕ್ರೆಡಿಟ್ ಕಾರ್ಡ ಗಗನ ಕುಸುಮವಾದಾಗ ರೈತರು ಅನಿವಾರ್ಯವಾಗಿ ಫೈನಾನ್ಸರು, ಮಾರ್ವಾಡಿಗಳ ಮೊರೆ ಹೋಗಬೇಕಾಗುತ್ತದೆ. ಅವರ ಬಡ್ಡಿಯ ದರ NSS ಸರ್ವೆ ಪ್ರಕಾರ ಶೇ. 50 ದಿಂದ ಶೇ. 80 ತನಕ ಇರುತ್ತಿದ್ದವು.

ಒಂದು ಕಡೆ ಬಡ್ಡಿಗೆ ಬಡ್ಡಿ ಸೇರಿ ಭೂತಾಕಾರವಾಗಿ ನೆಳೆಯುತಿರುವ ಸಾಲ, ಇನ್ನೊಂದೆಡೆ ಸೋಲುತ್ತಿರುವ ಬೇಸಾಯ, ಮಾರುಕಟ್ಟೆಯ ಧಾರಣೆಯ ವೈಪರೀತ್ಯ, ಮತ್ತೆ ಮತ್ತೆ ಸಂಭವಿಸುತ್ತಿರುವ ಕ್ಷಾಮ, ನೆರೆ - ಇದರ ಬವಣೆಯಲ್ಲದೆ, ಇನ್ನೊಂದೆಡೆ ಸರ್ಕಾರದಿಂದ ಯಾವ ಸಂರಕ್ಷಣೆಯಿಲ್ಲದೆ, ರೈತರು ಸಾಲದ ಚಕ್ರವ್ಯೂಹದಿಂದ ಹೊರ ಬರಲಾರದೆ ಯಾವ ಕೀಟನಾಶಕಗಳಿಂದ ಅತಿ ಹೆಚ್ಚಿನ ಉತ್ಪಾದನೆ, ಹಸನಾದ ಬದುಕಿನ ಸ್ವಪ್ನ ಕಂಡಿದ್ದರೋ ಅದೇ ಕೀಟನಾಶಕಗಳಿಂದ ತಮ್ಮ ಮುಕ್ತಿಯನ್ನು ಕಂಡುಕೊಳ್ಳುತ್ತಿದ್ದಾರೆ.

ಇತ್ತೀಚೆಗೆ ಚೆನ್ನೈಯಲ್ಲಿರುವ 'Madras Institute of Developmet Studies'ನ ಪ್ರೊಫೆಸರ್ ಕೆ. ನಾಗರಾಜ್ ಅವರು ಅಂಕಿ ಅಂಶಗಳ ಸಹಿತ ರೈತರ ಆತ್ಮಹತ್ಯೆಯ ವರದಿಯನ್ನು ಪ್ರಕಟಿಸಿದ್ದಾರೆ. ಅವರ ಪ್ರಕಾರ - ಈ ದೇಶದಲ್ಲಿ ಪ್ರತಿ 30 ನಿಮಿಷಕ್ಕೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಈ ವರದಿ ಸಂವೇದನಾಶೀಲ ಜಗತ್ತನ್ನು ನಿಜಕ್ಕೂ ಕಂಗಲಾಗಿಸಿದೆ.

ಕೃಷಿ:

ಟಿಪ್ಪಣಿ 1:


1. ಸೋಯಾ ತೈಲ ಮತ್ತು ನಕಲಿ ಉತ್ಪಾದಿಸಿದ ಸಾಸಿವೆ ಎಣ್ಣೆ ಕ್ವಿಂಟಾಲಿಗೆ 2000 ರೂ. ಇತ್ತು. ಇಂದು ಅದು 600 ರೂಪಾಯಿಗೂ ಮಾರಾಟವಾಗುತ್ತಿಲ್ಲ. ಇದರ ಪರಿಣಾಮವಾಗಿ ಸಾಸಿವೆ ಬೀಜದ ಉತ್ಪಾದನೆ ಶೇ. 65 ಕಡಿಮೆಯಾಗಿದೆ. ಶೇ. 60 ಸಣ್ಣ ಎಣ್ಣೆ ಮಿಲ್ಲುಗಳು ಮುಚ್ಚಿ ಹೋಗಿವೆ. ಇದರ ಪರಿಣಾಮ
ಲಕ್ಷಾಂತರ ಜನ ನಿರುದ್ಯೋಗಿಗಳಾಗಿ ಒಂದು ಹೊ
ಊಟಕ್ಕೆ ಒದ್ದಾಡುತ್ತಿದ್ದಾರೆ.

3. ಅತ್ಯಂತ ಶ್ರೇಷ್ಠ ಮಟ್ಟದ
ಉತ್ಪಾದಿಸುವ ದೇಶವಾದ ಭಾರತ ಇಂದು
ಮಟ್ಟದ ಟೀ ಆಮದಿನಿಂದ ನೆಲಕಚ್ಚಿದೆ.
ಅರ್ಧಕ್ಕಿಂತಲೂ ಕಡಿಮೆಗೆ ಇಳಿದಿದೆ. ಭಾರತದ
ಪ್ಲಾಂಟೇಶನ್ ನಾಶವಾಗುತ್ತಿದೆ. ಅದರಲ್ಲಿ
ಮಾಡುವ ರೈತರು ಹಸಿವಿನಿಂದ ಸಾಯುತ್ತಿದ್ದಾ

ಪಶ್ಚಿಮ ಬಂಗಾಳದಲ್ಲಿ 'ಮಂಜುಳಾ ಫಾಮ
ಪ್ರಸಿದ್ಧ ಡಾರ್ಜಲಿಂಗ್ ಟೀ ಉತ್ಪಾದಿಸುತ್ತಿತ್ತು.
ಅದು ಕೂಡಾ ಮುಚ್ಚಿದೆ. 1,899 ಜನ
ಕಳೆದುಕೊಂಡಿದ್ದಾರೆ.

ಕಟಿಯಾ ಟೀ ಎಸ್ಟೇಟ್‌ನಲ್ಲಿ 1,869 ಜನ
ಮಾಡುತ್ತಿದ್ದರು. ಅದು ಈಗ ಮುಚ್ಚಿದೆ. ಕಾರ್ಮಿ
ಬಿಕ್ಕಟ್ಟಿಗೆ ಸಿಲುಕಿದ್ದಾರೆ.

ನೋಟ



ಜಿ. ಭಾಸ್ಕರಮಯ್ಯ

ಎದೆ ನಡುಗಿಸುವ ರೈತರ ಆತ್ಮಹತ್ಯೆಗಳು

ಧಾನಮಂತ್ರಿ ಮನಮೋಹನ್ ಸಿಂಗ್ ಅವರು ತಮ್ಮ ಸಾಧನೆಗಳ ಬಗೆಗೆ ಭವಿಷ್ಯದ ಪ್ರಗತಿಯ ಘೋಷಣೆ ಮಾಡುತ್ತಾ ಬಂದವರು ಕೂಡಾ ಬಿದ್ದು ಹೀಗೆ ಹೇಳಿಕೆ ಕೊಡುವಂತಾದರು ಂಬರ್ 2006' ರಲ್ಲಿ.

ಕಳೆದ ಒಂದು ದಶಕದಿಂದ ಮಹಾರಾಷ್ಟ್ರವನ್ನು ಗೊಂಡು ದೇಶದ ನಾನಾ ಕಡೆಗಳಿಂದ ರೈತರ ಹತ್ಯೆಗಳ ಸುದ್ದಿಗಳು ಬರುತ್ತಿವೆ. ಇದು ತಾಜನಕ. 1998ರಲ್ಲಿ ಆಂಧ್ರಪ್ರದೇಶದಲ್ಲಿ ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ಷ್ಟು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಪ್ರದೇಶಕ್ಕೂ ಹರಡಿತು. 1999ರಲ್ಲಿ ಸರ್ಕಾರಿ ದ ಪ್ರಕಾರ 14,833ಜನ ರೈತರು ಆತ್ಮಹತ್ಯೆ ಡಿಕೊಂಡರು.

ಪರಂಪಾರಗತ ಕೃಷಿಯಲ್ಲಿ ಹೆಚ್ಚಿನ ಅಭಿವೃದ್ಧಿ ಸಿದ ಪಂಜಾಬಿನಲ್ಲೂ ನೂರಕ್ಕೂ ಅಧಿಕ ರೈತರು ಹತ್ಯೆ ಮಾಡಿಕೊಂಡರು.

2003 ಕಳೆಯುತ್ತಿದ್ದಂತೆಯೇ ಆತ್ಮಹತ್ಯೆ ಡಿಕೊಂಡವರ ಸಂಖ್ಯೆ 25000ಕ್ಕೂ ಹೆಚ್ಚಿತು. ತ್ತಿನಲ್ಲಿ ಗದ್ದಲವೆದ್ದಿತು. ರಾಜನಾಥ ಸಿಂಗ್ ಆಗ ಮಂತ್ರಿ. ಪ್ರಧಾನಿ ವಾಜಪೇಯಿ ತಮ್ಮ ರ್ಥಿಕ ಭಾಷಣ ಮಾಡಿದರು. ಆದರೆ ಅದೇ ಯದಲ್ಲಿ ಕೇವಲ ವಿಧರ್ಭದಲ್ಲೇ 750ಕ್ಕೂ ಹೆಚ್ಚು ಆತ್ಮಹತ್ಯೆ ಮಾಡಿಕೊಂಡರು. ಇದು ಭೂತಪೂರ್ವ ಮಾತ್ರವಲ್ಲದೆ ಮುಂದೆ ಯಲಿರುವ ಮಹಾ ನರಮೇಧದ ಮೂರ್ವ ಸೂಕೆಯಷ್ಟೆ.

ಇದು ಯಾವುದೇ ತಾತ್ಕಾಲಿಕ ವ್ಯವಸ್ಥೆಯಾಗಲಿ, ಭೌಗೋಲಿಕ ಅಥವಾ ಕೃತಿಕೀಯ ಆಪತ್ತಾಗಲೀ ಅಲ್ಲ. ಬದಲಿಗೆ ಸ್ಕೃತ ಉದಾರವಾದಿ ಆರ್ಥಿಕ ನೀತಿಗಳ ಣಾಮ.

ಸುಪ್ರಸಿದ್ಧ ಕೆನಡಾದ ಅರ್ಥಶಾಸ್ತ್ರಜ್ಞಮಾಯಿಕೆಲ್ ಚದ್‌ವೊಸ್ಕಿಯ ಗ್ರಂಥ globalization of poverty ಯ ಪ್ರಕಾರ 'ಜಾಗತಿಕ ಕಾರ್ಪೋರೇಶನ್‌ಗಳ ರುಕಟ್ಟೆಯ ವಿಸ್ತಾರವು ಸ್ಥಳೀಯ ಅರ್ಥವ್ಯವಸ್ಥೆಯ ಂಬನೆ ಮತ್ತು ವಿನಾಶವನ್ನು ಅಪೇಕ್ಷಿಸುತ್ತದೆ. ಈ ಟವು ಅದರ ಕಾರ್ಯಕ್ರಮದ ಒಂದು ಅನಿವಾರ್ಯ ಗ, ಈ ಹೇಳಿಕೆಯ ಸಮರ್ಥನೆಗೆ ನಮ್ಮ ಬಳಿ ಕಷ್ಟು ಸಾಕ್ಷ್ಯಗಳಿವೆ.


ಯಾವ ಯಾವ ರಾಜ್ಯಗಳಲ್ಲಿ ಹೆಚ್ಚು ಹೆಚ್ಚು ಹತ್ಯೆಗಳಾಗಿವೆಯೊ ಅಲ್ಲೆಲ್ಲಾ ಮೊತ್ತಮೊದಲಿಗೆ ಹೆಚ್ಚು ಉದಾರ ಆರ್ಥಿಕ ನೀತಿಯನ್ನು ವಡಿಸಿದುದು ಕಂಡುಬರುತ್ತದೆ. ಆಂಧ್ರದಲ್ಲಿ ತ್ತಮೊದಲಿಗೆ ಆತ್ಮಹತ್ಯೆಯ ಪ್ರಕರಣಗಳು ದ್ರಬಾಬು ನಾಯ್ಡು ಅಧಿಕಾರಾವಧಿಯಲ್ಲಿ ನಡೆದ ರ್ಥಿಕ ಸುಧಾರಣೆಗಳ ಫಲ. ಅದೇ ರೀತಿ ಎಸ್. ಮ್. ಕೃಷ್ಣ ಸರ್ಕಾರವು ಕರ್ನಾಟಕದಲ್ಲಿ ಹೊಸ ರ್ಥಿಕ ನೀತಿಯನ್ನು ಅಳವಡಿಸಿದ್ದೇ ತಡ, ರೈತರ ಆತ್ಮಹತ್ಯೆಯ ಸರಣಿ ಆರಂಭವಾಯಿತು. ಅನಂತರದ ಸರದಿ ಮಹಾರಾಷ್ಟ್ರದ ದೇಶಮುಖ್ ಸರಕಾರದ ನವ ಆರ್ಥಿಕ ನೀತಿ. ಈ ರಾಜ್ಯಗಳಲ್ಲೆಲ್ಲಾ ಮೊತ್ತಮೊದಲ ಬಾರಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೃಷಿ ಕ್ಷೇತ್ರದಲ್ಲಿ ಪ್ರವೇಶ ನೀಡಲಾಯಿತು. ಈ ನೀತಿಗಳು ಎಂತಹವು? ಅವು ದೇಶದ ಕೃಷಿ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಪ್ರಭಾವಿಸಿವೆ? WTOವಿನ ಮೂರು ಒಪ್ಪಂದಗಳು ನೇರವಾಗಿ ಕೃಷಿಗೆ ಸಂಬಂಧಿಸಿವೆ.

1. ಟ್ರಿಪ್ಸ್, 2. ಎ.ಓ.ಎ, 3. ಎಸ್.ಪಿ.ಎಸ್.ಎ. - (ಸ್ವಚ್ಛತೆ ಮತ್ತು ವನಸ್ಪತಿಯ ಒಪ್ಪಂದ)

1. ಟ್ರಿಪ್ಸ್ ಪ್ರಸಾರ:

ಬೀಜಗಳು ಬೌದ್ಧಿಕ ಸಂಪತ್ತು. (Intelectual property) - ಇದರಿಂದಾಗಿ ಅದರ ಕೊಡುಕೊಳಗೆಯ ಮೇಲೆ ನಿರ್ಬಂಧಕ್ಕೆ ಈ ಒಪ್ಪಂದದಲ್ಲಿ ಅವಕಾಶವಿದೆ. ಇದರ ಲಾಭ ಪಡೆದು ಮಾನ್‌ಸಿಂಟೊ ಮತ್ತು ಸಿಜೆಂಟಾದಂತಹ ದೈತ್ಯ ಬಹುರಾಷ್ಟ್ರೀಯ ಕಂಪೆನಿಗಳು ಜಗತ್ತಿನೆಲ್ಲಾ ಬೀಜಗಳ ಮೇಲೆ ಏಕಸ್ವಾಮ್ಯ ಹೊಂದಿವೆ.

ಶತಮಾನಗಳಿಂದ ತಮ್ಮ ಶ್ರಮ ಮತ್ತು ಅನುಭವದಲ್ಲಿ ವಿಕಾಸ ಪಡಿಸಿದ ಬೀಜಗಳನ್ನು ಈ ಕಂಪೆನಿಗಳು ಪೇಟೆಂಟ್ ಮಾಡಿಕೊಂಡಿವೆ. ಬೆಳೆದ ಪೈರಿನಿಂದ ಬೀಜವನ್ನು ಉಳಿಸಿ ಪ್ರಯೋಗ ಮಾಡುವ ಪಾರಂಪರಿಕ ವಿಧಿವಿಧಾನಗಳು ಕೂಡಾ ಇಂದು ಅಪರಾಧದ ಕಕ್ಷೆಗೆ ಒಳಪಡುತ್ತದೆ. ಇದು ಇಡೀ ಕೃಷಿ ವ್ಯವಸ್ಥೆಗೆ ಘಾತುಕವಾಗಿದೆ.



2. ಎ.ಓ.ಎ.:

ಇದು ಕೃಷಿ ವ್ಯವಸ್ಥೆಯನ್ನು ಮೂರು ಮೂಲಭೂತ ಪರಿವರ್ತನೆಗಳನ್ನು ಅಪೇಕ್ಷಿಸುತ್ತದೆ.

1. ವ್ಯಾಪಾರ ಉದಾರೀಕರಣ
2. ಆಮದು ಉದಾರೀಕರಣ
3. ಆಂತರಿಕ ಸಬ್ಸಿಡಿಯಲ್ಲಿ ಕಡಿತ

ಅಂದರೆ ಕೃಷಿಯನ್ನು ಸಂಪೂರ್ಣವಾಗಿ ಮಾರುಕಟ್ಟೆಗೆ ಅಧೀನಗೊಳಿಸುವುದು. ಅತ್ಯಂತ ಕಡಿಮೆ ಪ್ರಮಾಣದ ಕೃಷಿ ಉತ್ಪಾದಕತೆ, ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುವ ಜನವರ್ಗವನ್ನು ಹೊಂದಿರುವ ಅಭಿವೃದ್ಧಿಶೀಲ ಹಾಗೂ ಅತೀ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸರ್ಕಾರದ ಸಬ್ಸಿಡಿ ಅತ್ಯಗತ್ಯ. ಆದರೆ ಎಲ್ಲ ಬಗೆಯ ಕೃಷಿ ಸಬ್ಸಿಡಿಗಳನ್ನು ಕಡಿತಗೊಳಿಸಲು ಆದೇಶಿಸುತ್ತದೆ. ಅಂತೆಯೇ ಸಬ್ಸಿಡಿ ಕಡಿತಗೊಳಿಸಿದೆ. ಅದೇ ಮುಂದುವರಿದ ದೇಶಗಳು ಎಂಬರ್‌ಬಾಕ್ಸ್, ಗ್ರೀನ್‌ಬಾಕ್ಸ್, ಬ್ಲೂಬಾಕ್ಸ್ ಮುಂತಾದ ಗುಹ್ಯ ಗುಪ್ತ ಮಾರ್ಗಗಳ ಮೂಲಕ ತಮ್ಮ ಕೃಷಿಕರಿಗೆ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುತ್ತಿವೆ. ಅಮೇರಿಕಾ ತನ್ನ ರೈತರಿಗೆ ನೀಡುವ ಸಬ್ಸಿಡಿ ವಸ್ತುಸ್ಥಿತಿಯಲ್ಲಿ ಭಾರತದ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕಿಂತ ಹೆಚ್ಚು. ಇದು ಭಯಾನಕ, ನಿಯಮಗಳ ಉಲ್ಲಂಘನೆ, ಇಬ್ಬಗೆಯ ನೀತಿ.

ಅಮೇರಿಕಾದಲ್ಲಿ ಪಾಸು ಮಾಡಿದ ಕಾನೂನಿನಂತರ ರೈತರಿಗೆ ಕೊಡುತ್ತಿದ್ದ 7.35 ಬಿಲಿಯನ್ ಡಾಲರ್ ಆರ್ಥಿಕ ಬೆಂಬಲ 180 ಬಿಲಿಯನ್ ಡಾಲರ್‌ಗಳಿಗೆ ವರ್ಧಿಸಿತು.

ಆಮದು ನಿರ್ಬಂಧಗಳನ್ನು ತೆಗೆದು ಹಾಕಿದ ಪರಿಣಾಮವಾಗಿ ದೇಶಿಯ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ಬೆಲೆಯು ಭಯ ಹುಟ್ಟಿಸುವ ರೀತಿಯಲ್ಲಿ ಕೃತಿಮ ಇಳಿಕೆಗೆ ಒಳಗಾಯಿತು.

ಸಬ್ಸಿಡಿ ಕಡಿತದಿಂದಾಗಿ ಕೃಷಿಗೆ ಅತಿ ಹೆಚ್ಚಿನ ಖರ್ಚು ಮಾಡಬೇಕಾಯಿತು.

ಬಹುರಾಷ್ಟ್ರೀಯ ಕಂಪೆನಿಗಳ ಒಳಪ್ರವೇಶದಿಂದಾಗಿ ಬೇಸಾಯದ ಪಾರಂಪರಿಕ ವಿಧಾನಗಳಲ್ಲಿ ವಿಲಕ್ಷಣ ಪರಿವರ್ತನೆಯಾಯಿತು.

ರಸಗೊಬ್ಬರ, ಕೀಟನಾಶಕಗಳ ಉಪಯೋಗ ದೊಡ್ಡ ಪ್ರಮಾಣದಲ್ಲಿ ಹೆಚ್ಚಿತು. ಒಂದು ಕಡೆ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ, ಇನ್ನೊಂದು ಕಡೆ ಬೆಲೆಯಲ್ಲಿ ಇಳಿಕೆ, ರೈತರ ಬದುಕನ್ನು ಚಿಂದಿ ಚಿಂದಿ ಮಾಡಿತು. ರೈತರು ಬಹುರಾಷ್ಟ್ರೀಯ ಕಂಪೆನಿಗಳ ಮೇಲೆ ಅವಲಂಭಿಸಬೇಕಾದ ಅನಿವಾರ್ಯ ಸ್ಥಿತಿಗೆ ಒಳಗಾದರು.

3. ಎಸ್.ಪಿ.ಎಸ್.ಎ.:

ವಿಶ್ವವ್ಯಾಪಿಯಾಗಿ ಖಾದ್ಯ ಪದಾರ್ಥಗಳ ಗುಣಮಟ್ಟಕ್ಕೆ ಅಂತರಾಷ್ಟ್ರೀಯ ಮಾನಗಳನ್ನು ಅಳವಡಿಸಿದ್ದುದು ದೇಶೀ ಪದ್ಧತಿಯ ಮೇಲೆ ನೇರ ಆಕ್ರಮಣವಾಗಿತ್ತು. ಬಡ ಮತ್ತು ಕಡಿಮೆ ವಿಕಾಸ ಹೊಂದಿದ ದೇಶಗಳ ಉತ್ಪಾದನಾ ಪ್ರಣಾಳಿಗಳ ಮೇಲೆ 'ಸುರಕ್ಷಿತವಲ್ಲ' ಎಂಬ ಆರೋಪ ಹೊರಿಸಿ ಅವುಗಳನ್ನು ಮುಚ್ಚುವ ಪ್ರಯತ್ನ ಮಾಡಲಾಗುತ್ತಿದೆ. ಅದರ ಉದ್ದೇಶ ಬಹುರಾಷ್ಟ್ರೀಯ ಕಂಪೆನಿಗಳಿಗೆ ತಮ್ಮ ಉತ್ಪನ್ನಗಳಿಗೆ ಯಾವುದೇ ಅಡೆತಡೆಯಿಲ್ಲದ ಮಾರುಕಟ್ಟೆಯನ್ನು ಒದಗಿಸುವುದೇ ಆಗಿದೆ.

ಇವರ ಇಬ್ಬಗೆಯ ನೀತಿಯನ್ನು ಹೀಗೆ ನೋಡಬಹುದು:

ಪ್ರಯೋಗಶಾಲೆಯಲ್ಲಿ ಅಪಾಯಕಾರಿಯಾಗಿ ಕಂಡುಬಂದ 'ಪೇಯ'ಗಳ ರಕ್ಷಣೆಗೆ ಈ ಬಹುರಾಷ್ಟ್ರೀಯ ಕಂಪೆನಿಗಳು ಒಂದಾಗಿ ಹೋರಾಡುತ್ತಿವೆ. ಇನ್ನೊಂದೆಡೆ ಅವು ದೇಶಿ ಎಣ್ಣೆ ಕಂಪೆನಿಗಳ ಮೇಲೆ ಪ್ರತಿಬಂಧ ಹೇರಲು ತುದಿಗಾಲಲ್ಲಿ ನಿಂತಿವೆ. ಈ ನೀತಿಯಿಂದಾಗಿ ದೇಶದಾದ್ಯಂತ ಸಾವಿರಾರು ಎಣ್ಣೆ ಕಂಪೆನಿಗಳು ಮುಚ್ಚಿವೆ. ಲಕ್ಷಾಂತರ ಜನ ಕಾರ್ಮಿಕರು ಬೀದಿ ಪಾಲಾಗಿದ್ದಾರೆ.

1994ರಲ್ಲಿ ಮೊರಕ್ಕೊದಲ್ಲಿ ಆದ ಒಪ್ಪಂದವನ್ನು 1995ರಲ್ಲಿ ಭಾರತದಲ್ಲಿ ಜಾರಿ ಮಡಲಾಯಿತು. ಅದರ ಕೆಟ್ಟ ಪರಿಣಾಮವನ್ನು ಇಂದು ನಾವೀಗ ನೋಡುತ್ತಿದ್ದೇವೆ:

ಕೃಷಿ ಉತ್ಪಾದನೆಗೆ ಸಂಬಂಧಿಸಿದ ಪ್ರತಿಯೊಂದು ವಸ್ತು, ಉದಾ : ಬೀಜ, ರಸಗೊಬ್ಬರ, ಕೀಟನಾಶಕ, ಡೀಸೆಲ್ ಎಲ್ಲದರ ಸಬ್ಸಿಡಿಯನ್ನು ಕ್ರಮಕ್ರಮವಾಗಿ ಕಡಿತಕ್ಕೊಳಪಡಿಸಲಾಗಿದೆ. ಕೃಷಿ ಉತ್ಪಾದನೆಗೆ ತಗಲುವ ಖರ್ಚು ಅಭೂತಪೂರ್ವವಾಗಿ ವರ್ಧಿಸಿದೆ.

ಮತ್ತೊಂದೆಡೆ ಆಮದು ಶುಲ್ಕವನ್ನು ತೆಗೆದು ಹಾಕಿದ್ದರಿಂದ ಮಾರುಕಟ್ಟೆ ಆಮದು ಸರಕುಗಳಿಂದ ತುಂಬಿ ಹೋಯಿತು. ಒಂದೆಡೆ ಬಹುರಾಷ್ಟ್ರೀಯ ಕಂಪೆನಿಗಳು ಭಾರೀ ಲಾಭ ಮಾಡುತ್ತಾ ಬಂದರೆ ಇನ್ನೊಂದೆಡೆ ರೈತರು ದಿನದಿಂದ ದಿನಕ್ಕೆ ಸಾಲದ ಹೊರೆಯಲ್ಲಿ ಮುಳುಗುತ್ತಾ ಹೋದರು. ಅದರ ಅಂತಿಮ ಪರಿಣಾಮ ರೈತರ ಆತ್ಮಹತ್ಯೆ. ಈ ಇಡೀ ಪರಿದೃಶ್ಯವನ್ನು ತಿಳಿದುಕೊಳ್ಳಲು ಬರೀ ಹತ್ತಿಯೊಂದರ ಉದಾಹರಣೆಯನ್ನು ತೆಗೆದುಕೊಳ್ಳುವ.

ಹತ್ತಿಯ ಕತೆ

ಮಹಾರಾಷ್ಟ್ರದಲ್ಲಿ ಸಬ್ಸಿಡಿ ಕಡಿತ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಯಿಂದಾಗಿ ಕಳೆದ ಒಂದು ದಶಕದಲ್ಲಿ ಹತ್ತಿ ಉತ್ಪಾದನೆಯ ಖರ್ಚು ನಾಲ್ಕು ಪಟ್ಟು ಹೆಚ್ಚಾಗಿದೆ. ಆದರೆ ಹತ್ತಿಯ ಬೆಂಬಲ ಬೆಲೆ ಕ್ವಿಂಟಾಲಿಗೆ 2,250 ರೂಪಾಯಿಂದ 1,750 ರೂಪಾಯಿಗೆ ಕುಸಿಯಿತು.

ಇನ್ನೊಂದೆಡೆ 1997 ರಿಂದ 2003 ನಡುವೆ ಆಮದು ನಿರ್ಬಂಧ ಸಡಿಲಿಕೆಯಿಂದಾಗಿ ಭಾರತವು 110 ಲಕ್ಷ ಗಂಟುಗಳಷ್ಟು ಹತ್ತಿಯನ್ನು ಆಮದು ಮಾಡಿಕೊಂಡಿದೆ. ಇದು ಕಳೆದ 60 ವರ್ಷಗಳಲ್ಲಿ ಮಾಡಿಕೊಂಡ ಆಮದಿಗೂ ಅಧಿಕವಾಗಿದೆ. ಈ ಹತ್ತಿ ದೇಶೀ ಹತ್ತಿಗಿಂತ ಕಡಿಮೆ ಬೆಲೆಯದ್ದು. 'ಇದಕ್ಕೆ ಕಾರಣಗಳು ಸಾಕಷ್ಟಿವೆ'. ಹತ್ತಿಯ ಮೇಲೆ ಆಮದು ಶುಲ್ಕ ಕೇವಲ ಶೇ. 10. ಆದರೆ ಅಂತರಾಷ್ಟ್ರೀಯ ನಿಯಮಗಳ ಪ್ರಕಾರ ಇದನ್ನು ಶೇ. 150 ರಷ್ಟು ಏರಿಸಬಹುದಾಗಿದೆ 'ಚೀನಾದಲ್ಲಿ ಈ ದರ ಶೇ.90 ಇದೆ'.

ಅಲ್ಲದೆ ಭಾರತದ ಪ್ರಮುಖ ರಫ್ತುದಾರರಿಂದ ಅಮೇರಿಕಾದಲ್ಲಿ ರೈತರಿಗೆ ನಾಲ್ಕು ಕೋಟಿ ಡಾಲರ್ ಸಬ್ಸಿಡಿ ನೀಡಲ್ಪಡುತ್ತದೆ. ಭಾರತದಲ್ಲಿ ಒಂದು ಕ್ವಿಂಟಾಲ್ ಹತ್ತಿಗೆ ರೂ. 3000 ತಗಲುತ್ತದೆ. ಆದರೆ ಹತ್ತಿಯ ಬೆಂಬಲ ಬೆಲೆ ರೂ. 1750/- ಮಾತ್ರ! ಇದು ಮುಕ್ತ ವ್ಯಾಪಾರ ಮತ್ತು ಸಮಾನ ಅವಕಾಶಗಳ ನಿಜಸ್ವರೂಪ!

ಲಾಭವಿಲ್ಲದ ಕೃಷಿಯಿಂದಾಗಿ ಸ್ವಾಭಾವಿಕವಾಗಿಯೇ ರೈತರು ಸಾಲದ ಹೊರೆ ಹೋಗುವ ವಿವಶತೆಗೆ ಒಳಗಾಗುತ್ತಾರೆ. ಮೋನ್‌ಸೆಂಟೊದಂತಹ ಕಂಪೆನಿ 2002ರಲ್ಲಿ ಅಬ್ಬರದ ಪ್ರಚಾರ ಮಾಡಿ 9 ಟನ್ ಹತ್ತಿ ಬೀಜವನ್ನು ಮಾರಿತು. ಅದರ ಪ್ರಕಾರ ಹೆಕ್ಟೇರಿಗೆ 105 ಕ್ವಿಂಟಾಲ್ ಬೆಳೆ ಬರುತ್ತದೆ. ಆದರೆ ನಿಜವಾಗಿ ಬಂದ ಬೆಳೆ 200 ಗ್ರಾಂ. ಇದರ ಪರಿಣಾಮ ರೈತ ಆತ್ಮಹತ್ಯೆಗೆ ಶರಣಾದರೆ ಆಶ್ಚರ್ಯವಿಲ್ಲ.

NSS ಸಂಸ್ಥೆಯಿಂದ 2003 ಜನವರಿಯಿಂದ

ಪುಟ 14ಕ್ಕೆ

JANASHAKTHI KANNADA VARA PATRIKE JUNE 22, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/200

ಸುವರ್ಣ ಕರ್ನಾಟಕ KARNATAKA



ಸುವರ್ಣ ಕರ್ನಾಟಕವನ್ನು ಭವ್ಯ ಭೂಷಣಗೊಳಿಸಿದ ಹೆಸರು

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಉದಯವಾಗಿ ಅಮೋಘ ಐವತ್ತು ವರ್ಷಗಳು ತುಂಬಿತು. ಈ ನಾಡು ಸಾಧಿಸಿರುವ ಸಾಧನೆಯು ಮಿಗಿಲಾದುದು. ಅದ್ಭುತ ಸಾಧನೆಯ ವೈವಿಧ್ಯ ಕ್ಷೇತ್ರಗಳ ಮುಖೇನ ತನ್ನ ಛಾಪನ್ನು ಮೂಡಿಸಿದೆ. ಹಲವಾರು ಅಪೂರ್ವ ದಾಖಲೆಗಳನ್ನು ನಿರ್ಮಿಸಿ ಪ್ರಗತಿಯ ಪಥದಲ್ಲಿ ಮುನ್ನಡೆದಿದೆ. ಸುವರ್ಣ ಕರ್ನಾಟಕದ ಈ ಉಜ್ವಲ ಪ್ರಗತಿಯ ಸ್ಫೂರ್ತಿಯನ್ನು ಇಮ್ಮಡಿಗೊಳಿಸಲು, ಕರ್ನಾಟಕ ಗೃಹ ಮಂಡಳಿ ರಾಜ್ಯದ ಮೂಲಭೂತ ಸೌಲಭ್ಯಗಳ ಅವಶ್ಯಕತೆಗಳನ್ನು ಈಡೇರಿಸುವ ದಿಸೆಯಲ್ಲಿ ಸದಾ ಸಹಾಯ ಹಸ್ತ ಚಾಚಿದೆ. ಕರ್ನಾಟಕ ಜನತೆಗೆ ಉತ್ತಮ ದರ್ಜೆಯ, ಕೈಗೆಟುಕುವ ಬೆಲೆಯಲ್ಲಿ ವಸತಿ ಸೌಲಭ್ಯ ಒದಗಿಸಿ, ವಸತಿ ಸಮಸ್ಯೆಯನ್ನು ನಿವಾರಿಸಲು ಕ್ರಮಕೈಗೊಳ್ಳುತ್ತಿದೆ.

ನಮ್ಮ ಧ್ಯೇಯ:

ಪರಿಸರ ಸ್ನೇಹಿ ಅತ್ಯಾಧುನಿಕ ಮೂಲಸೌಲಭ್ಯಗಳನ್ನು ಒಳಗೊಂಡ ಸ್ವಯಂ ಪರಿಪೂರ್ಣ ವ್ಯವಸ್ಥೆಯ ಸಮುದಾಯ ವಸತಿ ಒದಗಿಸುವ ಮೂಲಕ ಜೀವನದ ಗುಣಮಟ್ಟ ಸುಧಾರಿಸುವುದು ನಮ್ಮ ಗುರಿ.

ಇದುವರೆಗೂ ನಾವು ಸಾಧಿಸಿರುವ ಸಾಧನೆಗಳು:

- ಕರ್ನಾಟಕದಾದ್ಯಂತ 950ಕ್ಕೂ ಹೆಚ್ಚು ವಸತಿ ಯೋಜನೆಗಳ ಅಭಿವೃದ್ಧಿ.
- ಶ್ರೇಷ್ಠಮಟ್ಟದ ಸೌಲಭ್ಯಗಳನ್ನು ಒಳಗೊಂಡ 1,10,000 ಮನೆಗಳು ಮತ್ತು ಸ್ಪಷ್ಟಹಕ್ಕುಪತ್ರಗಳನ್ನು ಒಳಗೊಂಡ 6,700 ನಿವೇಶನಗಳ ಹಂಚಿಕೆ.
- ಬೆಂಗಳೂರಿನ ಸೂರ್ಯನಗರ, ಕೆಂಗೇರಿ ಮತ್ತು ಯಲಹಂಕದಲ್ಲಿ ಹಾಗೂ ಮೈಸೂರಿನ ಹೂಟಗಳ್ಳಿಯಲ್ಲಿ ವಾಣಿಜ್ಯ ಸಂಕೀರ್ಣಗಳ ಅನುಕೂಲ ಒಳಗೊಂಡ ಮೆಗಾ ಟೌನ್ ಶಿಪ್‌ಗಳ ಅಭಿವೃದ್ಧಿ.
- ಹೊಸದಾಗಿ ರಚಿಸಲಾದ ಜಿಲ್ಲೆಗಳಲ್ಲಿ ಜಿಲ್ಲಾ ಕಚೇರಿ ಸಂಕೀರ್ಣಗಳು ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನಸೌಧಗಳ ನಿರ್ಮಾಣ.
- ಬೆಂಗಳೂರಿನಲ್ಲಿ ರಾಷ್ಟ್ರೀಯ ಕ್ರೀಡಾಗ್ರಾಮ ಸಂಕೀರ್ಣ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದ ನೋಡಲ್ ಏಜೆನ್ಸಿ.
- ಬೆಂಗಳೂರಿನಲ್ಲಿ ಕಂದಾಯ ಭವನ ನಿರ್ಮಾಣ.



ಕರ್ನಾಟಕ ಗೃಹ ಮಂಡಳಿ

ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009 ದೂರವಾಣಿ : 2227 3511
ಇ-ಮೇಲ್ : commissioner@khbonline.com ವೆಬ್‌ಸೈಟ್ www.karnatakahousing.com

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at: Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-580027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

0.2007–20.08.2008
ಶ್ರೀ ಪ್ರದೀಪ್ ಬೆಳಗಲ್.
ನಂ:1-12-58/58, ಡ್ಯಾಡಿ ಕಾಲೋನಿ
ರಾಯಚೂರು. 584102